
ಗೌರಿ ಲಂಕೇಶರ


ಲಂಕೇಶ್


ಜನವರಿ 10, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಬೋಧನೆ



ಕೊಲೆಗಾರ ಬುಷ್


ತಬ್ಬಲಿಯು ನೀನಾದೆ ಮಗನೆ





ಗಾಂಧಿಯ ನಿಗೂಢ ಪ್ರೇಯಸಿ

ಯಾವನು ಈ ಗೋಲ್ವಾಲ್ಕರ್






CPM ಕುರುಡ ಲಾಟೀನು ಹಿಡಿದ ಕತೆ

ನಕರ್ ನಕ್ಸಲ್ ಆಗಿದ್ದೇಕೆ?



ಆಕಾಶಕ್ಕೆ ಏಣಿ ಹಾಕಿ, ಕುಬೇರರ ಖಜಾನೆ ಲೂಟಿ ಮಾಡಿ ರೈತರ ಸಾಲ ಮನ್ನಾ!

ಚಾಮುಂಡೇಶ್ವರಿಯಲ್ಲಿ ಸೋತ ನಂತರ ನಮ್ಮ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಿಬ್ಬರಿಗೂ ರೈತರ ಮೇಲೆ ವಿಶೇಷ ಕಾಳಜಿ ಬಂದುಬಿಟ್ಟಿದೆ. ಒಬ್ಬರ ನಂತರ ಒಬ್ಬರು, ದಿನ ಬಿಟ್ಟು ದಿನ ರೈತರಿಗೇ ಹೃದಯಾಘಾತವಾಗುವಂತೆ ರೈತಪರ ಘೋಷಣೆಗಳನ್ನು ಮಾಡುತ್ತಿದ್ದಾರೆ. ಒಬ್ಬರು ರೈತರಿಗೆ ಸುಲಭವಾಗಿ ಬೀಜ, ಗೊಬ್ಬರ ಕೊಡಿಸುತ್ತೇನೆಂದರೆ ಮತ್ತೊಬ್ಬರು ಸಾಲ ಮನ್ನಾ ಮಾಡಿಸುತ್ತೇನೆನ್ನುತ್ತಾರೆ. ಇವರಿಬ್ಬರ ಆಶ್ವಾಸನೆಗಳ ರಭಸವನ್ನು ನೋಡಿದರೆ ಚುನಾವಣೆ ಹತ್ತಿರದಲ್ಲೇ ಇರಬಹುದೇ ಎನ್ನುವ ಅನುಮಾನ ನಾಡಿನ ಜನರಿಗೆ ಬಂದರೆ ಅದಕ್ಕೆ ಅವರು ಕಾರಣರಲ್ಲ.



ಈ ಸಾಲಿನಲ್ಲಿ ಇತ್ತೀಚಿನ ಘೋಷಣೆ ನಮ್ಮ ಮುಖ್ಯಮಂತ್ರಿಗಳದ್ದು. ಈ ಬಾರಿ ಅವರು ಕೊಟ್ಟ ಭರವಸೆಯನ್ನು ಕೇಳಿ ಹತ್ತಿರವಿದ್ದ ಅಧಿಕಾರಿಗಳೇ ಸ್ತಂಭೀಭೂತರಾಗಿಬಿಟ್ಟರು. ಈ ಭರವಸೆಯ ಪ್ರಕಾರ ರೈತರ ಎಲ್ಲಾ ಸಾಲವನ್ನು - ಅಂದರೆ ಕೇವಲ ರಾಜ್ಯ ಸರ್ಕಾರದ ಹಿಡಿತದಲ್ಲಿರುವ ಕೋಆಪರೇಟಿವ್ ಬ್ಯಾಂಕ್‌ಗಳ ಸಾಲವನ್ನು ಮಾತ್ರವಲ್ಲ - ರಾಷ್ಟ್ರೀಯ ಬ್ಯಾಂಕ್‌ಗಳು ಕೊಟ್ಟಿರುವ ಸಾಲ, ಲೇವಾದೇವಿಗಾರರು ನೀಡಿರುವ ಸಾಲ ಎಲ್ಲವನ್ನು ಮುಖ್ಯಮಂತ್ರಿಗಳು ಮನ್ನಾ ಮಾಡುತ್ತಾರಂತೆ. ಇದನ್ನು ಕೇಳಿ ಯಾವ ರೈತನ ಹೃದಯ ತಾನೆ ಸಂತೋಷದಿಂದ ಒಡೆದುಹೋಗುವುದಿಲ್ಲ ಹೇಳಿ?

ಆದರೆ ಸ್ವಲ್ಪ ನಿಧಾನ.... ಇಷ್ಟು ಸಾಲ ಮನ್ನಾ ಮಾಡಲು ಸರ್ಕಾರ ಎಲ್ಲಿಂದ ಹಣ ತರುತ್ತದೆ? ಈ ಪ್ರಶ್ನೆ ಏಕೆಂದರೆ ರೈತರ ಒಟ್ಟಾರೆ ಸಾಲದ ಮೊತ್ತ ಕನಿಷ್ಠ 20 ಸಾವಿರ ಕೋಟಿ ರೂಪಾಯಿಗಳಾಗಬಹುದು. ಇಷ್ಟು ಹಣವನ್ನು ಸರ್ಕಾರ ತನ್ನ ಬಜೆಟ್ಟಿನಲ್ಲಂತೂ ಎತ್ತಿಟ್ಟಿಲ್ಲ. ಬಜೆಟ್ಟಿನಲ್ಲಿ ರಾಷ್ಟ್ರೀಯ ಬ್ಯಾಂಕ್‌ಗಳ ಸಾಲವಿರಲಿ, ಕೋಆಪರೇಟಿವ್ ಬ್ಯಾಂಕುಗಳ ಸಾಲ ರದ್ಧತಿಗೆಂದು ಎತ್ತಿಟ್ಟಿದ್ದೇ ಕೇವಲ ಮುನ್ನೂರು ಕೋಟಿ. ಅಂದಹಾಗೆ, ಸರ್ಕಾರ ಆ ಬ್ಯಾಂಕ್‌ಗಳಿಗೆ ನೀಡಬೇಕಿದ್ದ ಬಾಕಿ ಹಣವೇ ಕನಿಷ್ಠ 600ಕೋಟಿ! ಹಾಗಿರುವಾಗ ನಮ್ಮ ರೈತರ ಸಾಲ ಮನ್ನಾ ಮಾಡಲು ಬೇಕಿರುವ ಸುಮಾರು 20 ಸಾವಿರ ಕೋಟಿಯನ್ನು ಎಲ್ಲಿಂದ ತರುತ್ತಾರೆ? ಅದಕ್ಕಾಗಿ ದೇವೇಗೌಡರ ಕುಮಾರ ಆಕಾಶಕ್ಕೆ ಏಣಿ ಹಾಕುತ್ತಾರಂತೆ! ಅದರಿಂದ ಅಲ್ಲಿ ಕುಬೇರರ ಖಜಾನೆಯನ್ನು ಲೂಟಿ ಹೊಡೆಯುತ್ತಾರಂತೆ! ಅದರಿಂದ ರೈತರ ಸಾಲದ ಬಾಬತ್ತನ್ನು ತೀರಿಸುತ್ತಾರಂತೆ! ಇದು ಖಂಡಿತಾ ಉತ್ಪ್ರೇಕ್ಷೆಯ ಮಾತಲ್ಲ, ಬೇಕಿದ್ದರೆ ಕುಮಾರಣ್ಣನನ್ನೇ ಕೇಳಿ ನೋಡಿ. ರೈತರ ಸಾಲ ಮನ್ನಾ ಮಾಡಲು ಅವರು ಹಾಕಿರುವ ಯೋಜನೆ ಏನು?

ಮೊದಲಿಗೆ ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳು ಒತ್ತುವರಿ ಮಾಡಿಕೊಂಡಿರುವ ಸುಮಾರು 5000 ಎಕರೆ ಜಮೀನನ್ನು ಕುಮಾರಣ್ಣ ವಶಪಡಿಸಿಕೊಳ್ಳುತ್ತಾರಂತೆ. ಅದನ್ನು ಮಾರಿದಾಗ 20 ಸಾವಿರ ಕೋಟಿ ಬರುತ್ತದಂತೆ. ಅದರಿಂದ ರೈತರ ಸಾಲ ಮನ್ನಾ ಮಾಡುವ ಹಣ ದೊರಕುತ್ತದಂತೆ! ಅಂತೆ, ಕಂತೆ....! ಇದು ಇಲ್ಲದ ಕುಬೇರನ ಖಜಾನೆ ಸೂರೆ ಹೊಡೆಯುವುದಕ್ಕಿಂತಲೂ ಕಷ್ಟದ ಮಾತು! ಏಕೆಂದರೆ ರಿಯಲ್ ಎಸ್ಟೇಟ್ ಒತ್ತುವರಿಯಲ್ಲಿ ಇರುವುದು ಕುಮಾರಸ್ವಾಮಿಯ ವಿರೋಧಿ ಡಿಕೇಶಿ ಮಾತ್ರವಲ್ಲವಲ್ಲ.

ಸಾಕ್ಷಾತ್ ಕುಮಾರಣ್ಣನ ಒತ್ತುವರಿಯ ವಿಷಯವೇನು? ದುರದೃಷ್ಟವಶಾತ್ ಆ ರೀತಿಯ ಒಂದು ಕಾನೂನು ಮಾಡುವುದಾದರೆ ಅದು ಇಬ್ಬರಿಗೂ ಅನ್ವಯಿಸುತ್ತದಲ್ಲ. ಆದರೂ ಈ 'ರೈತ'ಕುಮಾರ ರೈತರ ಸಾಲದ ಬಗ್ಗೆ ಇಷ್ಟೊಂದು ಕರುಣೆಯ ಮಾತನಾಡಿದ್ದೇಕೆ? ಅಲ್ಲಿ ಇರುವುದು ರೈತರ ಬಗ್ಗೆ ಕರುಣೆಯಲ್ಲ, ಬದಲಿಗೆ ಪೈಪೋಟಿ ನಡೆಸುವ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಬೆದರಿಕೆ ಅಷ್ಟೆ. ಅದಕ್ಕೆ ರೈತನ ಸಾಲ ಮತ್ತು ಕಣ್ಣೀರು ಹಾಗೂ ಆತ್ಮಹತ್ಯೆಗಳನ್ನು ದಾಳವನ್ನಾಗಿ ನಮ್ಮ 'ರೈತ'ಕುಮಾರ ಬಳಸಿಕೊಳ್ಳುತ್ತಿದ್ದಾರೆ, ಅಷ್ಟೆ! ●

ಚಾರ್ವಾಕ

- ಶಿವಸುಂದರ್-

ಕಾಮ್ರೇಡ್ ನಾಗರಾಜ ಮತ್ತು ಕುರುಡ ಹಿಡಿದ ಲಾಟೀನು!

ಸಿಂಗೂರೆಂಬ ಪಶ್ಚಿಮ ಬಂಗಾಳದ ಹಳ್ಳಿಯಲ್ಲಿ ರೈತರು ತಮ್ಮ ಜಮೀನನ್ನು ಉಳಿಸಿಕೊಳ್ಳಲು ಟಾಟಾ ಕಂಪನಿಯ ವಿರುದ್ಧ ಮತ್ತು ಅದನ್ನು ವಶಪಡಿಸಿಕೊಳ್ಳಲು ಮುಂದಾಗಿರುವ ಎಡರಂಗದ ಸರ್ಕಾರದ ವಿರುದ್ಧ ನಡೆಸುತ್ತಿರುವ ಹೋರಾಟ ಈ ದೇಶದ ರಾಜಕೀಯ ಪಕ್ಷಗಳಿಗೆ- ಅದರಲ್ಲೂ ಮುಖ್ಯವಾಗಿ ಕಮ್ಯುನಿಸ್ಟ್ ಪಕ್ಷಗಳ ಬದ್ಧತೆಗೆ-ಹಿಡಿದ ಕೈಗನ್ನಡಿಯಾಗಿದೆ. ಇದರ ಬಗ್ಗೆ ಈ ಅಂಕಣದಲ್ಲಿ ಕಳೆದ ಬಾರಿ ಬರೆದದ್ದು ಓದುಗರಿಗೆ ನೆನಪಿರಬಹುದು. ಆ ಲೇಖನದಲ್ಲಿ ಯಾವ ಸೈದ್ಧಾಂತಿಕ ತರ್ಕದ ಹಿನ್ನೆಲೆಯಲ್ಲಿ ಕಮ್ಯುನಿಸ್ಟ್ ಸರ್ಕಾರ ಸಿಂಗೂರ್ ಯೋಜನೆಯನ್ನು ಸಮರ್ಥಿಸುತ್ತಿದೆ ಎಂಬ ಬಗ್ಗೆ ಹಲವು ಸೈದ್ಧಾಂತಿಕ ಪ್ರಶ್ನೆಗಳನ್ನು ಎತ್ತಲಾಗಿತ್ತು. ಅದಕ್ಕೆ ಸಿಪಿಎಂ ಪಕ್ಷದ ಮುಖ ಪತ್ರಿಕೆಯಾದ 'ಐಕ್ಯರಂಗ'ದಲ್ಲಿ ಆ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜರು ಉತ್ತರಿಸಿದ್ದಾರೆ. ಅಲ್ಲಲ್ಲ... ಪ್ರಶ್ನೆಗಳನ್ನು ಕೇಳಿದ್ದರ ಹಿಂದಿನ ಉದ್ದೇಶಗಳ ಬಗ್ಗೆ ಥೇಟ್ ನಮ್ಮ ಸರ್ಕಾರಗಳ ರೀತಿಯಲ್ಲೇ ಚಾರ್ವಾಕದ ಅಂಕಣಕಾರರ ಮೇಲೆ ಮತ್ತು 'ಲಂಕೇಶ್' ವಾರಪತ್ರಿಕೆಯ ಮೇಲೆ "ನಕ್ಸಲ್ ಬೆಂಬಲಿಗರು" ಎಂಬ ಆರೋಪ ಹೊರಿಸಿದ್ದಾರೆ.

ಹಾಗೆ ನೋಡಿದರೆ ವ್ಯವಸ್ಥೆಯ ಬಗ್ಗೆ ಅಹಿತಕರ ಮತ್ತು ಮೂಲಭೂತ ಪ್ರಶ್ನೆಗಳನ್ನು ಕೇಳುವ 'ಚಾರ್ವಾಕ'ರ ಬಗ್ಗೆ ಪ್ರಭುತ್ವಕ್ಕೆ ಇರುವ ಧೋರಣೆಗೂ ಜಿ.ಎನ್.ನಾಗರಾಜರ ಧೋರಣೆಗೂ ಅಷ್ಟೇನೂ ವ್ಯತ್ಯಾಸವಿಲ್ಲ. ಶೋಷಿತ ಜನ ಕೇಳುವ ಪ್ರಶ್ನೆಗಳಿಗೆ ಸರ್ಕಾರದ ಬಳಿ ಉತ್ತರವಿಲ್ಲದಿದ್ದಾಗ ಪ್ರಶ್ನೆ ಕೇಳುತ್ತಿರುವವ ಮುಸ್ಲಿಮನಾಗಿದ್ದರೆ ಉಗ್ರಗಾಮಿಯೆಂದೋ, ಬಡವನಾಗಿದ್ದರೆ ನಕ್ಸಲೈಟರೆಂದೋ ಆರೋಪಿಸಿ ಅವರನ್ನು ದೈಹಿಕವಾಗಿ ಎನ್‌ಕೌಂಟರ್ ಮಾಡುವ ಮತ್ತು ಆ ಮೂಲಕ ಆ ಪ್ರಶ್ನೆಗಳು ತಲೆ ಎತ್ತದಂತೆ ಮಾಡುವ ವಿಫಲ ಪ್ರಯತ್ನವನ್ನೇ ಪ್ರಭುತ್ವಗಳು ನಡೆಸುತ್ತಾ ಬಂದಿವೆ.



ಸಿಂಗೂರಿನ ವಿಷಯದಲ್ಲೂ ಸಿ.ಪಿ.ಎಂ. ಪಕ್ಷ ಮತ್ತು ಕರ್ನಾಟಕದಲ್ಲಿ ವಿಶೇಷವಾಗಿ ಅದರ ಕಾರ್ಯದರ್ಶಿ ಜಿ.ಎನ್. ನಾಗರಾಜರೂ ನಡೆದುಕೊಳ್ಳುತ್ತಿರುವ ರೀತಿ ಅದಕ್ಕಿಂತ ಯಾವುದೇ ರೀತಿಯಲ್ಲೂ ಭಿನ್ನವಿಲ್ಲ. ಬಂಗಾಳದಲ್ಲಿ ಸಿಂಗೂರ್ ಯೋಜನೆಯನ್ನು ವಿರೋಧಿಸುತ್ತಿರುವವರನ್ನು ಅಲ್ಲಿನ ಸರ್ಕಾರ "ಹೊರಗಿನವರು" ಎಂದು ಕರೆಯುತ್ತಿದೆ. ಯಾರನ್ನು? ಮಹಾಶ್ವೇತಾ ದೇವಿಯಂಥ ಬಂಗಾಳದ ಹಿರಿಮೆಯನ್ನು! ಏಕೆ? ಅವರು ಸಿಂಗೂರ್ ಯೋಜನೆಯನ್ನು ವಿರೋಧಿಸುತ್ತಿದ್ದಾರೆ ಅದಕ್ಕೆ! ಆದರೆ ಬಂಗಾಳದವರಲ್ಲದ ಯೆಚೂರಿ, ಬೃಂದಾ ಕಾರಟ್ ಮಾತ್ರ ಒಳಗಿನವರು. ಏಕೆ? ಅವರು ಸಿಪಿಎಮ್ ಪಕ್ಷದ ನಾಯಕರು! ಈ ಧೋರಣೆಗೂ ಸಂಘಪರಿವಾರದ "ನಮ್ಮವರು-ಹೊರಗಿನವರು" ತರ್ಕಕ್ಕೂ ಏನಾದರೂ ವ್ಯತ್ಯಾಸವಿದೆಯೇ? ಅದೇರೀತಿ, ಸಿಂಗೂರಿನ ಎಲ್ಲಾ ರೈತರು ತಮ್ಮ ಜಮೀನನ್ನು ಕೊಡಲು ಸಿದ್ಧರಿದ್ದಾರೆ ಎಂದು ಹಸಿ ಸುಳ್ಳು ಹೇಳುವ ಎಡಸರ್ಕಾರ ಇದನ್ನು ಕುರಿತು ಸ್ವತಂತ್ರ ತನಿಖೆ ನಡೆಯಲಿ ಅಂದರೆ, ಅಂತಹ ತನಿಖೆ ಬೇಡವೆನ್ನುತ್ತಿದೆ. ಅದೇ ಹೊತ್ತಿಗೆ, ತನಿಖೆ ಬೇಕು ಎನ್ನುತ್ತಿರುವ ಯಾವ ಪಕ್ಷಕ್ಕೂ ಸೇರದ ಬರೀ ಕಾಳಜಿ ಉಳ್ಳವರನ್ನು "ವಿದೇಶದಿಂದ ಹಣ ಪಡೆಯುವವರು" ಎಂದೋ, "ಟಾಟಾ ಕಂಪನಿಯ ವಿರೋಧಿ ಕಂಪನಿಗಳಿಂದ ಹಣ ಪಡೆಯುವವರು" ಎಂದೋ ಆರೋಪಿಸುತ್ತಿದೆ. ಇದಕ್ಕೂ, ನರ್ಮದಾ ಯೋಜನೆಯ ವಿರೋಧಿಗಳ ಬಗೆಗೆ ಮಧ್ಯಪ್ರದೇಶದ ಹಾಗೂ ಗುಜರಾತಿನ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳ ವಾದಕ್ಕೂ ಏನಾದರೂ ವ್ಯತ್ಯಾಸವಿದೆಯೇ?

ಈ ಸಾಮ್ಯತೆಗಳು ಇಲ್ಲಿಗೇ ನಿಲ್ಲುವುದಿಲ್ಲ. "ಸಿಂಗೂರ್ ಹೋರಾಟಗಾರರ ಮೇಲೆ ಸರ್ಕಾರ ಲಾಠಿ ಮತ್ತು ಬಂದೂಕು ಪ್ರಯೋಗಿಸಲೇಬೇಕಿತ್ತು, ಯಾಕೆಂದರೆ ಅದರಲ್ಲಿ ನಕ್ಸಲರು ಭಾಗವಹಿಸಿ ಬಾಂಬ್ ಮತ್ತು ಬಂದೂಕು ಬಳಸಿದರು" ಎಂದು ನಾಗರಾಜರು ಹೇಳಿದರೆ ಎಡರಂಗ ಸರ್ಕಾರದ ಕೈಗಾರಿಕಾ ಮಂತ್ರಿ ಅಷ್ಟೇನೂ ಸುಳ್ಳು ಹೇಳಲು ಹೋಗದೆ "ಪೊಲೀಸರು ಇರುವುದೇ ದಮನ ಮಾಡಲು, ಅಲ್ಲವೆ" ಎಂದು ಮಾರ್ಕ್ಸ್‌ವಾದದ ಪಾಠ ಹೇಳುತ್ತಾರೆ. ಇನ್ನೊಬ್ಬ ಮಹನೀಯರು "ಪೊಲೀಸರಿಂದ ಇನ್ನೇನು ನಿರೀಕ್ಷಿಸುತ್ತೀರಿ?" ಎಂದು ಕೇಳುತ್ತಾರೆ! ಇರಲಿ.

ಆದರೆ ಈ ಧೋರಣೆಗೂ ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ಮೇಲ್ಜಾತಿಗಳ ಅತ್ಯಾಚಾರಕ್ಕೆ ಬಲಿಯಾಗಿ ಸತ್ತವರನ್ನೇ ನಕ್ಸಲೈಟರೆಂದು ಕರೆದು ಮತ್ತು ಅದರ ವಿರುದ್ಧ ಹೋರಾಟಕ್ಕೆಂದು ಬೀದಿಗೆ ಬಂದ ಕುಪಿತ ದಲಿತರ ಮೇಲೆ ಗೋಲಿಬಾರ್ ಮಾಡಿ ಕೊಂದು, ಆ ಗೋಲಿಬಾರಿಗೆ ಕಾರಣ ದಲಿತರ ಹೋರಾಟಕ್ಕೆ ನಕ್ಸಲೈಟರ ಪ್ರೇರಣೆ ಇತ್ತು ಎಂದು ಸಬೂಬು ಹೇಳಿದ ಮಹಾರಾಷ್ಟ್ರ ಸರ್ಕಾರಕ್ಕೂ ಏನು ವ್ಯತ್ಯಾಸ?

ಕರ್ನಾಟಕದಲ್ಲೂ ಅಷ್ಟೆ, ಆದಿವಾಸಿಗಳ ಹೋರಾಟದ ಬಗ್ಗೆ ಮತ್ತು ಕೋಮುವಾದದ ವಿರುದ್ಧದ ಹೋರಾಟದ ಬಗ್ಗೆ ವಿಶೇಷವಾಗಿ ನಾಗರಾಜರು ಕಮ್ಯುನಿಸ್ಟ್ ವಿರೋಧಿ ಶಕ್ತಿಗಳ ಜೊತೆಗೆ ಕೈಗೂಡಿಸಿ ಐಕ್ಯರಂಗವನ್ನೇ ರಚಿಸುವ ಯತ್ನದಲ್ಲಿದ್ದಾರೆ. ತಮ್ಮ ಬೇಜವಾಬ್ದಾರಿ ಮತ್ತು ಆಧಾರ ರಹಿತ ವ್ಯಾಖ್ಯಾನಗಳಿಂದ ಪ್ರಗತಿ ವಿರೋಧಿ ಸಂಘಪರಿವಾರದ ವಾದಗಳಿಗೆ ಕುತರ್ಕವನ್ನು ಒದಗಿಸುತ್ತಿದ್ದಾರೆ. ಎಷ್ಟರ ಮಟ್ಟಿಗೆ ಎಂದರೆ ಚಡ್ಡಿ ಧುರೀಣ ಸಿ.ಟಿ.ರವಿ ಮಾತಿಗೂ, ಸರ್ಕಾರದ ವಾದಗಳಿಗೂ ಮತ್ತು ಕಮ್ಯುನಿಸ್ಟ್ ನಾಗರಾಜರ ಮಾತಿಗೂ ವ್ಯತ್ಯಾಸವೇ ಇಲ್ಲದಿರುವಷ್ಟು. ಇದು ಅತ್ಯಂತ ದುರದೃಷ್ಟಕರ ಬೆಳವಣಿಗೆ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಬಗ್ಗೆ ಆರೋಗ್ಯಪೂರ್ಣ ಚರ್ಚೆ ಮಾಡದೆ ಅದಕ್ಕೆ ದುರುದ್ದೇಶಗಳನ್ನು ಆರೋಪಿಸಿ ದಮನ ಮಾಡುವುದಲ್ಲದೆ, ಆ ರೀತಿ ದಮನ ಮಾಡುವಂತೆ ಪ್ರಭುತ್ವಕ್ಕೆ ಪ್ರೇರಣೆ ನೀಡುವ ಮತ್ತು ಬಂಗಾಳದಲ್ಲಿ ತಾವೇ ದಮನ ಮಾಡುವ ಸಂಸ್ಕೃತಿ ಖಂಡಿತಾ ಕಮ್ಯುನಿಸ್ಟ್ ಸಂಸ್ಕೃತಿಯಲ್ಲ. ಅದು ಆಳುವ ವರ್ಗದ ಸಂಸ್ಕೃತಿ.

ಇಷ್ಟೆಲ್ಲಾ ಏಕೆ ಹೇಳಬೇಕಾಯಿತೆಂದರೆ ಸಿಂಗೂರಿನಲ್ಲಿ ಅವರ ಪಕ್ಷ ಮಾಡುತ್ತಿರುವ ಅನ್ಯಾಯದ ಬಗ್ಗೆ ಬರೆದಿದ್ದಕ್ಕೆ 'ಐಕ್ಯರಂಗ'ದಲ್ಲಿ ನಾಗರಾಜರು ಉತ್ತರ ನೀಡುವ ಪ್ರಯತ್ನದಲ್ಲಿ 'ಲಂಕೇಶ್' ಪತ್ರಿಕೆಯನ್ನು ನಕ್ಸಲರ ಆಶ್ರಯ ತಾಣವೆಂದೂ, ಈ ಅಂಕಣಕಾರ ಗುಪ್ತ ನಕ್ಸಲೈಟೆಂದೂ, ಈವರೆಗೆ ಸರ್ಕಾರಗಳೂ ಆರೋಪ ಮಾಡದ ರೀತಿ ಆರೋಪಿಸಿ ಪ್ರಶ್ನೆಗಳನ್ನು ಸಾಯಿಸುವ ಯತ್ನ ಮಾಡಿದ್ದಾರೆ. ಇದು ಶೋಷಕ ವರ್ಗಗಳ ಸಂಸ್ಕೃತಿಯೇ ವಿನಃ ಶೋಷಿತ ವರ್ಗಗಳ ಪರವಾಗಿ ಹೋರಾಡುವವರು ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳುವ ರೀತಿಯಲ್ಲ. ಇನ್ನು ಅವರು ಕೊಟ್ಟಿದ್ದಾರೆ ಎನ್ನುವ ಉತ್ತರದ ಬಗ್ಗೆ ಮತ್ತೊಂದು ಲೇಖನದಲ್ಲಿ ಕೂಲಂಕಷವಾಗಿ ಚರ್ಚಿಸಬಹುದಾದರೂ ಸದ್ಯಕ್ಕೆ ಇಷ್ಟನ್ನು ಹೇಳಲೇಬೇಕೆನಿಸುತ್ತದೆ. ನಾಗರಾಜರಿಗೆ ಪ್ರಿಯರಾದ ಕುವೆಂಪುರವರ ಕ್ಷಮೆ ಕೋರಿ....

ಕತ್ತಿ ಇತರರದ್ದಾದರೆ ಮಾತ್ರ ನೋವೆ
ಕಾಮ್ರೇಡರೇ ಹದವಾಕಿ ತಿವಿದರದು ಹೂವೆ?
ಕಾಂಗ್ರೆಸ್ ಆದರೇನು? ಕಮ್ಯುನಿಸ್ಟ್ ಆದರೇನು?
ಎಲ್ಲರೂ ಜಿಗಣೆಗಳೇ ರೈತರ ನೆತ್ತರಿಗೆ...!

ಕೊನೆಗೊಂದು ಮಾತು. ಈ ಅಂಕಣಕಾರನ ಬಗ್ಗೆ ಮಾತನಾಡುತ್ತಾ ಜಾಣಕುರುಡನ್ನು ನಾಗರಾಜರು ಆರೋಪಿಸಿದ್ದಾರೆ. ಕುರುಡ ಲಾಟೀನು ಹಿಡಿದ ಕಥೆ ಜ್ಞಾಪಕಕ್ಕೆ ಬರುತ್ತದೆ. ತಮಗೆ ದೃಷ್ಟಿ ಸ್ಪಷ್ಟವಾಗಿದೆ ಎಂಬವರಿಂದ ರಕ್ಷಿಸಿಕೊಳ್ಳಲೆಂದೇ ಕುರುಡ ಲಾಟೀನ ಹಿಡಿದದ್ದು! ■

No Comments

"ದೇವರ ದರ್ಶನಕ್ಕೆ ಹೋದಾಗ ಮನೆ ಲೂ
-ಪತ್ರಿಕಾ ವ

"ಭಂಟರು ಬ್ರಾಹ್ಮಣರನ್ನು ಅನುಕರಿಸುವು ಬಿಡಬೇಕು"
- ಸುನೀತಾ ಶೆಟ್ಟಿ, ಭಂಟ ಜನಾಂಗದ ಮುಖಂ



"ಜೆಡಿಎಸ್ ಜಾತಿ ಕೆಟ್ಟ
-ದೇವೇ

"ಮಕ್ಕಳಿಗೆ ಅ ಸ್ವಾತಂತ್ರ್ಯ ಇದೆ ನಿಜ. ಸರ್ಕಾರ ಶಾಲೆಯಲ್ಲಿ ಮಧ್ಯಾ ಊಟಕ್ಕೆ ಮೊಟ್ಟೆಯನ್ನು ಕೊ ವುದನ್ನು ಕೂಡಲೇ ನಿಲ್ಲಿಸಬೇಕು"
-ಜೈನ್ ಮಿಲ

"ಎಚ್. ಡಿ. ಕುಮಾರಸ್ವಾಮಿ ಆಡಳಿತದಲ್ಲಿ ಅನಕ್ಷ
-ಜಿ.ಕೆ. ಗೋವಿಂದರಾ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಜನವರಿ ಮೊದಲನೇ ವಾ ಮಂತ್ರಿಮಂಡಲ ವಿಸ್ತರಣೆ ಹಾ ನಿಗಮ ಹಾಗೂ ಮಂಡಳಿ ನೇಮಕ"
-ಎಚ್.ಡಿ.ಕುಮಾರಸ್ವಾ



"ಹೈಕಮಾಂಡ್ ವಹಿಸುವ ಯಾವುದೇ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತೇನೆ"
-ಧರ್ಮಸಿಂಗ್

"ಸಿಗರೇಟ್ ಮೇಲೆ ತೆರಿಗೆ ಹೆಚ್ಚಿಸಿದರೆ ನಿರುದ್ಯೋಗ ಮತ್ತು ಅಪರಾಧ ಜಾಸ್ತಿ ಆಗು
-14 ರಾಜ್ಯಗಳ ತಂಬಾಕು ಒಕ್ಕೂಟ ಸದಸ್ಯರುಗಳ ಅಹವಾ

"ಜೆಡಿಎಸ್ ಹುಟ್ಟಿದ್ದೂ ಜಾತ್ಯತೀತ ತತ್ವ ಸಾಯೋದೂ ಜಾತ್ಯತೀತ ತತ್ವಕ್ಕಾಗಿ"
-ದೇವೇಗೌಡ

ವಾರದ ವಿಡಂಬನೆ

"ಪ್ರವೀಣ್‌ಕುಮಾರಶೆಟ್ಟಿಗೂ ಕರ್ನಾಟಕ ರ ವೇದಿಕೆಗೂ ಯಾವುದೇ ಸಂಬಂಧವಿಲ್ಲ. ಅ ಸಭೆಯೊಂದರಲ್ಲಿ ತೋರಿದ ದುರ್ವರ್ತನೆ ಖ ನಾರ್ಹ. ಅವರ ಮೇಲೆ ಪೊಲೀಸರು ಕಠಿಣ ತೆಗೆದುಕೊಳ್ಳಲಿ"
-ನಾರಾಯಣಗ

ವಾರದ ಲಜ್ಜೆಗೇಡಿ ಹೇಳಿ

"ಸಂವಿಧಾನವನ್ನು ಎತ್ತಿ ಹಿಡಿಯುವ ಉ ದಿಂದಲೇ ನಾನು ಗೌರಿ ಲಂಕೇಶ್ ಮತ್ತು ವಿ ಹೆಗಡೆಯವರ ಗೋಷ್ಠಿಗಳನ್ನು ನಿಲ್ಲಿಸಲು ಹೇಳಿ
-ಯಡಿಯೂ

ವಾರದ ವಿವೇಕ

"ಮಲೆನಾಡಿನ ನಿಜವಾದ ಸಮಸ್ಯೆ ಸಂಘ ಪಾರವೇ ಆಗಿದೆ"
-ಎಚ್. ಎಲ್. ಕೇಶವಮೂ

ಕಳೆದ ವಾರ ತಾನೇ ಶಿವಮೊಗ್ಗದ ಕ ಸಾಹಿತ್ಯ ಸಮ್ಮೇಳನ ಮುಗಿದಿದೆ. ಪ್ರತಿ ಸಮ್ಮೇಳನದ ನಿರ್ಣಯಗಳು ನಿರ್ಣಯಗಳಾಗೇ ಉಳಿಯುತ್ತಾ ಬಂದಿವೆ. ಜಾಗತೀಕರಣದ ಭರಾಟೆಯಲ್ಲಿ ಕನ್ನಡ ಉಳಿಸುವ ಕೆ ಜನಸಮೂಹದಿಂದಲೇ ಮೂಡಿಬರಬೇಕಾಗಿದೆ. ಸುವರ್ಣ ಕರ್ನಾಟಕ ಆಚರಣೆಯ ಈ ವೇಳೆ ಕನ್ನಡತನವನ್ನು ಗಟ್ಟಿಗೊಳಿಸಿಕೊಳ್ಳಲು ಸ್ಫೂರ್ತಿಯಾಗು ಕನ್ನಡದ ಬರಹಗಾರರ ಸೂಕ್ತಿಗಳನ್ನು ನಮ್ಮ ಓದುಗ ಗದಗ ಜಿಲ್ಲೆ ಕಲಕೇರಿ ವೀರಣ್ಣ ಮಡಿವಾಳರು ಕಳಿಸಿದ್ದಾರೆ. ನಿಮ್ಮ ಕನ್ನಡಪ್ರೇಮ ನಿರಂತರವಾಗಿರ
-ಮ

ಯಾವನು ಈ ಗೋಲ್ವಾಲ್ಕರ್

ಮನುಸ್ಮೃತಿಯೇ ಈ ದೇಶದ ಸಂವಿಧಾನವಾಗಿರಬೇಕು, ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯ ಮೇಲೆ ಹಕ್ಕಿರಬಾರದು. ದಲಿತರಿಗೆ ಮತ್ತು ಆದಿವಾಸಿಗಳಿಗೆ ಸಮಾನತೆಯ ಅಗತ್ಯವಿಲ್ಲ, ಅಲ್ಪಸಂಖ್ಯಾತರಿಗೆ ಪ್ರಜೆಗಳ ಸ್ಥಾನವೂ ಇರಕೂಡದು ಎಂದೆಲ್ಲಾ ಹೇಳಿದ್ದ ಗೋಲ್ವಾಲ್ಕರ್ ಎಂಬ ಆರ್‌ಎಸ್‌ಎಸ್ ನಾಯಕನ ಜನ್ಮಶತಾಬ್ದಿಯನ್ನು ಯಾವ ಮುಜುಗರವಿಲ್ಲದೆ ದೇಶಾದ್ಯಂತ ಚೆಡ್ಡಿಗಳು ಆಚರಿಸುತ್ತಿವೆ. ನಮ್ಮ ಶಿಖಾಮಣಿಗಳಾದ ಹಲವು ಶೂದ್ರರು, ದಲಿತರು, ಪ್ರಗತಿಪರರು ಅವರೊಂದಿಗೆ ಕೈಜೋಡಿಸಿದ್ದಾರೆ. ಅಂಥವರೆಲ್ಲ ಹಾಳಾಗಲಿ ಎಂದು ಸುಮ್ಮನಿರಬಹುದಿತ್ತು. ಆದರೆ ಈ ಚೆಡ್ಡಿಗಳದ್ದು ಎಂಥ ಪಾಕಡ ಬುದ್ಧಿ ಎಂದರೆ ಗೋಲ್ವಾಲ್ಕರ್‌ನನ್ನು ದೊಡ್ಡ ಸಂತನಂತೆ ಬಿಂಬಿಸುವ ಫ್ಲೆಕ್ಸ್‌ರ್‌ಗಳಲ್ಲಿ, ಜಾಹೀರಾತುಗಳಲ್ಲಿ ಬಸವಣ್ಣ, ಕನಕ, ಅಂಬೇಡ್ಕರ್‌ರಂತಹ ಮಾನವತಾವಾದಿಗಳ ಚಿತ್ರಗಳನ್ನು ಬಳಸಿ, ಅವರೆಲ್ಲರಿಗೂ ಗೋಲ್ವಾಲ್ಕರ್ ಸಮಾನ ಎಂಬಂತೆ ತೋರಿಸಲು ಯತ್ನಿಸಿದ್ದಾರೆ. ವಿಶಾಲ/ವಿರಾಟ್ ಹಿಂದೂಗಳ ಸಮಾವೇಶದ ಹೆಸರಲ್ಲಿ ತಮ್ಮ ವಿಕೃತ ರಾಜಕೀಯವನ್ನು ಮಾಡಲು ಹೊರಟಿದ್ದಾರೆ. ಬುದ್ಧಿಗೇಡಿ ಶೂದ್ರ ಮಠಾಧೀಶರೂ, ನೈತಿಕತೆಯನ್ನು ಕಳೆದುಕೊಂಡಿರುವ ದಲಿತ ನಾಯಕರೂ ಗೋಲ್ವಾಲ್ಕರ್‌ನ ಗಬ್ಬುನಾರುವ ಸಿದ್ಧಾಂತಕ್ಕೆ ಬೆನ್ನೆಲುಬಾಗಿ ನಿಂತಿರುವುದು ಕರ್ನಾಟಕದ ಸಂಸ್ಕೃತಿಗೆ ಬಗೆದಿರುವ ದ್ರೋಹ.



ಇಲ್ಲವಾದರೆ, ಅಂಬೇಡ್ಕರ್‌ರವರು ತಮ್ಮ ದಾರಿದೀಪ ಎಂದೇ ನಂಬಿರುವ ನಮ್ಮ ದಲಿತ ಚಿಂತಕರು, ನಾಯಕರು ಮತ್ತು ಹೋರಾಟಗಾರರು ಅದು ಹೇಗೆ ಅಂಬೇಡ್ಕರ್‌ರವರ ಚಿತ್ರವನ್ನು ಗೋಲ್ವಾಲ್ಕರ್ ಜೊತೆ ಬಳಸಿಕೊಂಡಿರುವುದನ್ನು ಸಹಿಸುತ್ತಿದ್ದರು? ಅಂಬೇಡ್ಕರ್ ರೂಪಿಸಿದ ನಮ್ಮ ಸಂವಿಧಾನವನ್ನು 'ಭಾರತದ್ದಲ್ಲ' ಎಂದಿದ್ದ, ಅದನ್ನು ಕಿತ್ತೆಸೆದು ಮನುಸ್ಮೃತಿಯನ್ನೇ ಈ ದೇಶದ ಸಂವಿಧಾನವಾಗಿಸಬೇಕು ಎಂದು ವಾದಿಸಿದ್ದ, ಚಾತುರ್ವರ್ಣ ವ್ಯವಸ್ಥೆಯನ್ನೇ ಪಾಲಿಸಬೇಕು ಎಂದಿದ್ದ ಗೋಲ್ವಾಲ್ಕರ್ ಜೊತೆಗೆ ಅಂಬೇಡ್ಕರ್‌ರವರ ಚಿತ್ರವನ್ನು ಉಪಯೋಗಿಸಿರುವುದನ್ನು ಅವರೆಲ್ಲ ಪ್ರತಿಭಟಿಸಬೇಕಿತ್ತು. ಅಂಬೇಡ್ಕರ್‌ರಂತಹ ಸಮಾನತೆಯ ಹರಿಕಾರರೊಂದಿಗೆ ಅಪ್ಪಟ ಜಾತಿವಾದಿಯಾದ ಗೋಲ್ವಾಲ್ಕರ್‌ನ ಚಿತ್ರವಿರುವ ಎಲ್ಲಾ ಹೋರ್ಡಿಂಗ್‌ಗಳನ್ನು ಕಿತ್ತು ಹಾಕಬೇಕಿತ್ತು, ಅಂತಹ ಫೋಟೋಗಳನ್ನು ಪ್ರಕಟಿಸಬಾರದೆಂದು ಪತ್ರಿಕೆಗಳಿಗೆ ಸೂಚಿಸಬೇಕಿತ್ತು. ಯಾವ ಮನುಸ್ಮೃತಿಗೆ ಅಂಬೇಡ್ಕರ್ ಸಾರ್ವಜನಿಕವಾಗಿ ಬೆಂಕಿಹಚ್ಚಿ ಸುಟ್ಟಿದ್ದರೋ ಹಾಗೆಯೇ ಗೋಲ್ವಾಲ್ಕರ್‌ನ ಚಿತ್ರಗಳನ್ನು ಭಸ್ಮ ಮಾಡಬೇಕಿತ್ತು. ಆದರೆ ಇಲ್ಲಿಯವರೆಗೂ ಯಾವ ದಲಿತ ಚಿಂತಕನೂ, ಹೋರಾಟಗಾರನೂ ತುಟಿಪಿಟಿಕ್ ಎಂದಿಲ್ಲ, ಅಂಬೇಡ್ಕರ್‌ರವರ ಚಿಂತನೆ, ಕೊಡುಗೆಯನ್ನು ಚೆಡ್ಡಿಗಳು ನಾಶ ಮಾಡುತ್ತಿರುವುದನ್ನು ಖಂಡಿಸಿಲ್ಲ.

ಈಗಲೂ ಕಾಲ ಮಿಂಚಿಲ್ಲ. 'ವಿಕೃತ' ಹಿಂದೂ ಸಮಾವೇಶಕ್ಕೆ ಇನ್ನೂ ಒಂದು ವಾರವಿದೆ. ಈಗಲಾದರೂ ನಮ್ಮ ಶೋಷಿತ ದಲಿತರು ಎಚ್ಚೆತ್ತುಕೊಂಡು ಪ್ರತಿಭಟಿಸಬೇಕಿದೆ. ಅಂಬೇಡ್ಕರ್‌ರವರನ್ನು ಚೆಡ್ಡಿಗಳಿಂದ ರಕ್ಷಿಸಬೇಕಿದೆ. ಅವರು ಹಾಗೆ ಮಾಡುತ್ತಾರೆಂದು ಆಶಿಸೋಣವೇ?

ಕರ್ನಾಟಕದಲ್ಲಿ ಲಿಂಗಾಯತರು ಪ್ರಬುದ್ಧರು, ಅರಿತವರು, ಶರಣ ಸಂಸ್ಕೃತಿಯವರು ಎಂದೆಲ್ಲಾ ನಂಬಲಾಗಿದೆ. ಆದರೆ ಆ ಸಮುದಾಯ ಕೂಡ ಇವತ್ತು ಎಷ್ಟು ಲಜ್ಜೆಗೆಟ್ಟಿದೆ ಎಂಬುದಕ್ಕೆ ಅದೇ ಗೋಲ್ವಾಲ್ಕರ್‌ನ ವೈಭವೀಕರಣದ ಜಾಹೀರಾತುಗಳಲ್ಲಿ ಬಸವಣ್ಣನವರ ಚಿತ್ರವನ್ನು ಬಳಸಿಕೊಂಡಿದ್ದರೂ, ಈ 'ಬಲಿಷ್ಠ' ಸಮುದಾಯ ತೆಪ್ಪಗಿದೆ. "ಪುರಾಣಗಳನ್ನು ಸಮುದ್ರಕ್ಕೆ ಬಿಸಾಡಿ" ಎಂದಿದ್ದ ಜಾತಿಯ ದೌರ್ಜನ್ಯದ ವಿರುದ್ಧ ಸೆಟೆದೆದ್ದು ನಿಂತಿದ್ದ, ಸಮಾನ ಸಮಾಜವನ್ನು ಕನಸಿದ್ದ ಬಸವಣ್ಣ ಎಲ್ಲಿ? ಮನು ನ್ಯಾಯವೇ ಸೂಕ್ತ, ಜಾತಿ ವ್ಯವಸ್ಥೆಯೇ ಜಾರಿಯಲ್ಲಿರಬೇಕು ಎಂದಿದ್ದ ಗೋಲ್ವಾಲ್ಕರ್ ಎಲ್ಲಿ?

ಲಿಂಗಾಯತರಿಗೆ, ಅವರ ಮಠಾಧೀಶರಿಗೆ, ನಾಯಕರಿಗೆ ಕಿಂಚಿತ್ತಾದರೂ ನೈತಿಕ ಪ್ರಜ್ಞೆ ಎಂಬುದಿದ್ದರೆ, ಬಸವಣ್ಣನವರಿಗೆ ಚೆಡ್ಡಿಗಳು ಮಾಡುತ್ತಿರುವ ಅವಮಾನವನ್ನು ಖಂಡಿಸಬೇಕು. ರಕ್ತದೋಕುಳಿ ನಡೆಸಿ ರಾಮ ಮಂದಿರ ಸ್ಥಾಪಿಸಬೇಕೆನ್ನುತ್ತಿರುವವರಿಗೂ, ದೇಹವೇ ದೇಗುಲವಯ್ಯ ಎಂದು ನಂಬಿ ಅದರ ಸಂಕೇತವಾದ ಇಷ್ಟಲಿಂಗವನ್ನು ಧರಿಸುವ ಲಿಂಗಾಯತರಿಗೂ ಯಾವ ಸಂಬಂಧವೂ ಇಲ್ಲ ಎಂಬುದನ್ನು ಸಾರಬೇಕು.

ಅಂಬೇಡ್ಕರ್, ಬಸವಣ್ಣನೊಂದಿಗೆ ಚೆಡ್ಡಿಗಳು ಕನಕದಾಸರ ಚಿತ್ರವನ್ನೂ ಉಪಯೋಗಿಸಿಕೊಂಡಿದ್ದಾರೆ. ಯಾವ ಕನಕನನ್ನು ದೇವಸ್ಥಾನ ಪ್ರವೇಶಿಸದಂತೆ ತಡೆದಿದ್ದರೋ, ಯಾವ ಕನಕಗೋಪುರವನ್ನು ಕೆಡವಿದ್ದರೋ ಅವರು ಈ ಗೋಲ್ವಾಲ್ಕರ್‌ನ ಸಂತತಿಯವರೇ ಎಂಬುದನ್ನು ಕುರುಬರು ಮರೆಯಬಾರದು. ಹಾಗೆಯೇ ಕುರುಬರಿಗೆ 'ವಿಶಾಲ' ಹಿಂದೂ ಸಮಾಜದಲ್ಲಿ ಸ್ಥಾನಮಾನವಿಲ್ಲ ಎಂಬುದನ್ನೂ ಅರಿತುಕೊಳ್ಳಬೇಕು.

ಇನ್ನು ಚೆಡ್ಡಿಗಳು ಇವತ್ತು ವೈಭವೀಕರಿಸುತ್ತಿರುವ ಈ ಗೋಲ್ವಾಲ್ಕರ್ ಎಂಥವನು ಎಂಬುದಕ್ಕೆ ಇಲ್ಲೊಂದಿಷ್ಟು ವಿವರಗಳನ್ನು ನೀಡುತ್ತೇನೆ. ನಮ್ಮ ದೇಶದ ಪ್ರಜಾಪ್ರಭುತ್ವವನ್ನು, ಬಹುಮುಖಿ ಸಂಸ್ಕೃತಿಯನ್ನು, ಸಂವಿಧಾನದ ಆಶಯವಾದ ಜಾತ್ಯತೀತತೆಯನ್ನು ಹೀಯಾಳಿಸಿದ ಗೋಲ್ವಾಲ್ಕರ್ ಕೊಡುಗೆ ದ್ವೇಷ ರಾಜಕಾರಣ. "ಜರ್ಮನಿಯ ನಾಜಿಗಳು ರಾಷ್ಟ್ರಪ್ರೇಮವನ್ನು ಮೆರೆದವರು. ವಿಭಿನ್ನ ಧರ್ಮಗಳು ಎಂದೂ ಒಂದಾಗಿರಲು ಸಾಧ್ಯವಿಲ್ಲ ಎಂದೇ ಅವರು ನಡೆಸಿದ ಮಾರಣಹೋಮ ಹಿಂದೂಗಳಿಗೆ ದಾರಿದೀಪವಾಗಬೇಕು" ಎಂದಿದ್ದ ಈ ರಕ್ತಪಿಪಾಸು ಗೋಲ್ವಾಲ್ಕರ್.

ಅಷ್ಟೇ ಅಲ್ಲ "ಈ ದೇಶದಲ್ಲಿ ಹಿಂದೂ ಧರ್ಮಕ್ಕೆ ಸೇರಿಲ್ಲದವರು ಬದುಕಬೇಕೆಂದಿದ್ದರೆ ಅವರು ಹಿಂದೂ ಸಂಸ್ಕೃತಿಯನ್ನು ಗೌರವಿಸಬೇಕು. ಹಿಂದೂ ರಾಷ್ಟ್ರಕ್ಕೆ ಅಡಿಯಾಳಾಗಿರಬೇಕು, ಯಾವುದನ್ನೂ ಕೇಳದೆ, ಏನನ್ನೂ ಬಯಸದೆ, ಪ್ರಜೆಗಳ ಹಕ್ಕೂ ಇಲ್ಲದಂತೆ ಜೀವಿಸಬೇಕು" ಎಂದಿದ್ದ, ಈತನಿಗೂ, ಸಹಬಾಳ್ವೆಯ ಬಸವಣ್ಣನಿಗೂ,

ಕಂಡಹಾಗೆ



ಸಮಾನತೆಯ ಅಂಬೇಡ್ಕರರಿಗೂ ಎತ್ತಿಂದೆತ್ತಣ ಸಂಬಂಧ? "ನಮ್ಮ ಹಿಂದೂಗಳ ಸ್ವತ್ತಾದ ಈ ದೇಶವನ್ನು ಮುಸಲ್ಮಾನರು ಆಳಿದರು" ಎಂದು ಇಂದಿಗೂ ಗೋಲ್ವಾಲ್ಕರ್‌ನಂತೆ ಕೂಗಾಡುವ ಚೆಡ್ಡಿಗಳಿಗೆ ಪ್ರಜ್ಞಾವಂತರು ಒಂದು ಅಂಶವನ್ನು ನೆನಪಿಸಬೇಕು. ಈ ದೇಶ ಇವತ್ತಿಗೂ ಇಲ್ಲಿನ ಜನರ ಸ್ವತ್ತಾಗಿಲ್ಲ, ಬದಲಾಗಿ ಅಲ್ಪಸಂಖ್ಯಾತ ಪುರೋಹಿತಶಾಹಿಗಳ ಸ್ವತ್ತಾಗಿತ್ತಲ್ಲದೆ, ಇವತ್ತು ಯಾವ ಸಮುದಾಯಗಳನ್ನು "ಹಿಂದೂ" ಎಂದು ಬಿಂಬಿಸಲು ಚೆಡ್ಡಿಗಳು ಯತ್ನಿಸುತ್ತಿದ್ದಾರೋ, ಅವರೆಲ್ಲ ಆ ಪುರೋಹಿತಶಾಹಿಗಳ ಗುಲಾಮರಂತೆ, ಅಸ್ಪೃಶ್ಯರಂತೆ ಬದುಕಿದ್ದರು. ಈ ಕಾರಣದಿಂದಲೇ ಬೇರೆ ದೇಶದವರು ಇಲ್ಲಿ ಬಂದು ಸಾಮ್ರಾಜ್ಯವನ್ನು ಸ್ಥಾಪಿಸಿದರು. "ಯಾರು ಬಂದರೂ ರಾಗಿ ಬೀಸೋದು ತಪ್ಪಲ್ಲ" ಅಂತ ಬಹುಸಂಖ್ಯಾತರು ತಮ್ಮ ಗುಲಾಮಿ ಜೀವನವನ್ನು ಮುಂದುವರೆಸುತ್ತಿದ್ದರು. ಅಂತಹ ಪರಿಸ್ಥಿತಿಯಲ್ಲಿ ಈ ದೇಶ ಪುರೋಹಿತಶಾಹಿಗಳ ಸ್ವತ್ತಾಗಿತ್ತೇ ಹೊರತು ಬ್ರಾಹ್ಮಣೇತರರ ದೇಶವಾಗಿರಲಿಲ್ಲ ಎಂಬುದು ವಾಸ್ತವ.

ಇನ್ನು ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯ ಸಂಗ್ರಾಮಕ್ಕೆ 'ಪರಮ ದೇಶಭಕ್ತ'ರಾದ ಗೋಲ್ವಾಲ್ಕರ್ ಮತ್ತಾತನ 'ಹಿಂದೂ' ಸಂತತಿಯ ಕೊಡುಗೆ ಏನು ಎಂಬುದನ್ನೂ ತಿಳಿದುಕೊಳ್ಳಬೇಕಿದೆ. 1942ರಲ್ಲಿ ಭಾಷೆ, ಜಾತಿ, ಧರ್ಮ ಎಂಬ ಭೇದಗಳನ್ನು ಮರೆತು ದೇಶಾದ್ಯಂತ ಜನರು "ಭಾರತ ಬಿಟ್ಟು ತೊಲಗಿ" ಚಳವಳಿಯಲ್ಲಿ ಭಾಗವಹಿಸುತ್ತಿದ್ದರೆ, ಆಗ ಆರ್‌ಎಸ್‌ಎಸ್‌ನ ಮುಖ್ಯಸ್ಥನಾಗಿದ್ದ ಗೋಲ್ವಾಲ್ಕರ್ ಚಳವಳಿಯನ್ನು ಅಸಡ್ಡೆಭಾವದಿಂದ ನೋಡುತ್ತಿದ್ದನಲ್ಲದೆ, 'ಹಿಂದೂ'ಗಳು ಅದರಲ್ಲಿ ಭಾಗವಹಿಸಕೂಡದು ಎಂದೇ ಹೋಗಿಬಂದಲ್ಲೆಲ್ಲ ಒತ್ತಡ ಹಾಕುತ್ತಿದ್ದ. ಅಷ್ಟೇ ಅಲ್ಲದೆ "ನಮ್ಮ ಧರ್ಮ ಮತ್ತು ಸಂಸ್ಕೃತಿಯನ್ನು ಕಾಪಾಡಬೇಕೆ ಹೊರತು ಬ್ರಿಟಿಷರ ವಿರುದ್ಧ ಹೋರಾಡುವ ಅವಶ್ಯಕತೆ ಇಲ್ಲ" ಎಂದು ಹೇಳುತ್ತಾ ಜನರನ್ನು ಧಾರ್ಮಿಕ ನೆಲೆಯಲ್ಲಿ ವಿಭಜಿಸಲು ಯತ್ನಿಸುತ್ತಿದ್ದ. ಇದೇ ಹೊತ್ತಿನಲ್ಲಿ ಆರ್‌ಎಸ್‌ಎಸ್‌ನ ಮತ್ತೋರ್ವ ನಾಯಕನಾದ ಸಾವರ್ಕರ್ "ಸ್ವಾತಂತ್ರ್ಯ ಸಂಗ್ರಾಮವನ್ನು ಸೇರಬೇಡಿ. ಬದಲಾಗಿ ಬ್ರಿಟಿಷರ ಸೈನ್ಯವನ್ನು ಸೇರಿ" ಎಂದು ಎಲ್ಲೆಡೆ ಪ್ರಚಾರ ಮಾಡುತ್ತಿದ್ದ. ಈ ಕಾರಣದಿಂದಲೇ ಎಲ್ಲೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆರ್‌ಎಸ್‌ಎಸ್ ಪಾಲುಗೊಂಡಿದ್ದು ಕಂಡುಬರುವುದೇ ಇಲ್ಲ. ಇದಕ್ಕೆ ಕಾರಣ ಇಲ್ಲವೆಂದಲ್ಲ. ಬ್ರಿಟಿಷರ ಒಡೆದು ಆಳುವ ನೀತಿಗೆ ಗೋಲ್ವಾಲ್ಕರ್‌ನ ಧರ್ಮಾಂಧತೆ ಸಾಕಷ್ಟು ನೆರವು ನೀಡಿದ್ದರಿಂದ ಆತ ಮತ್ತಾತನ ಆರ್‌ಎಸ್‌ಎಸ್ ಬ್ರಿಟಿಷರಿಗೆ ಪ್ರಿಯವಾಗಿತ್ತು! ರಾಷ್ಟ್ರಪ್ರೇಮ, ದೇಶಭಕ್ತಿ ಎಂದೆಲ್ಲಾ ಬೊಗಳುವ ಸಂಘ ಪರಿವಾರ ಸ್ವಾತಂತ್ರ್ಯ ಸಂಗ್ರಾಮಕ್ಕೆ ನೀಡಿದ ಕೊಡುಗೆ ಇದು!

ಮೂವತ್ತೂರು ವರ್ಷಗಳ ಕಾಲ ಆರ್‌ಎಸ್‌ಎಸ್‌ನ ನೇತೃತ್ವವನ್ನು ಗೋಲ್ವಾಲ್ಕರ್ ವಹಿಸಿದ್ದ ಸಂದರ್ಭದಲ್ಲಿ ಆತ ಭಾರತೀಯ ಜನಸಂಘ (ಇಂದಿನ ಭಾರತೀಯ ಜನತಾ ಪಕ್ಷದ ಹಳೆ ರೂಪ), ಎಬಿವಿಪಿ, ವಿಶ್ವಹಿಂದೂ ಪರಿಷತ್ ಸೇರಿದಂತೆ ಹಲವಾರು ಸಂಘಟನೆಗಳನ್ನು ಹುಟ್ಟುಹಾಕಿದ. ಇವತ್ತಿಗೂ ಈ ಸಂಘಟನೆಗಳಿಗೆಲ್ಲ ಗೋಲ್ವಾಲ್ಕರ್ ಬರೆದ 'A Bunch of Thoughts' (ಚಿಂತನಗಂಗಾ) ಎಂಬ ಪುಸ್ತಕವೇ ಭಗವದ್ಗೀತೆ. ಗೋಲ್ವಾಲ್ಕರ್ ಪ್ರತಿಪಾದಿಸಿದ ಮನುಸ್ಮೃತಿ ಆಧಾರಿತ ಹಿಂದೂತ್ವಕ್ಕೂ, ಬ್ರಿಟಿಷರ ವಸಾಹತುಶಾಹಿ ಧೋರಣೆಗೂ ಎಂತಹ ಗಳಸ್ಯ ಕಂಠಸ್ಯ ಎಂದರೆ, ಅಂದು ಅಮೆರಿಕ ವಿಯಟ್ನಾಮ್ ಮೇಲೆ ದಾಳಿ ಮಾಡಿದ್ದನ್ನು ಗೋಲ್ವಾಲ್ಕರ್ ಸಮರ್ಥಿಸಿದ್ದರೆ, ಇಂದಿನ ಆರ್‌ಎಸ್‌ಎಸ್ ಮುಖ್ಯಸ್ಥ ಸುದರ್ಶನ್ ಇರಾಕ್ ಮೇಲೆ ಅಮೆರಿಕ ನಡೆಸಿರುವ ದಾಳಿಯನ್ನು ಪ್ರಶಂಸಿಸುತ್ತಾನೆ. ಇಂತಹ ಧೋರಣೆಗಳೇ ಅಂದು ಮಹಾತ್ಮ ಗಾಂಧಿಯವರ ಕೊಲೆಗೆ ಕಾರಣವಾಗಿದ್ದರೆ, ಇಂದು ಗುಜರಾತ್, ಕರಾವಳಿ ಪ್ರದೇಶದಲ್ಲಿ ನಡೆಯುತ್ತಿರುವ ಹಿಂಸೆಗೂ ಪ್ರೇರಣೆ ಆಗಿದೆ.

ಅಂಬೇಡ್ಕರ್ ರೂಪಿಸಿದ ಸಂವಿಧಾನವನ್ನು ತೆಗಳುತ್ತಾ, ಬಸವಣ್ಣನವರ ಸಮಾನ ಸಿದ್ಧಾಂತವನ್ನು ವಿರೋಧಿಸುತ್ತಾ, ಕನಕಗೋಪುರವನ್ನು ಹೊಡೆದು ಹಾಕುತ್ತಾ, ತಾವು ದೇಶದ ಸ್ವಾತಂತ್ರ್ಯಕ್ಕಾಗಿ ಒಂದು ಘೋಷಣೆಯನ್ನು ಹಾಕಿರದಿದ್ದರೂ ಅದೇ ಸಂಗ್ರಾಮದಲ್ಲಿ ಜೀವತೆತ್ತ ಚಂದ್ರಶೇಖರ್ ಆಜಾದ್ ಮತ್ತು ಭಗತ್‌ಸಿಂಗ್‌ನವರನ್ನು ಕೊಂಡಾಡುತ್ತಾ, ರಾಮನ ಹೆಸರಲ್ಲಿ ರಕ್ತ ಚೆಲ್ಲುತ್ತಾ ಸಾಗಿರುವ ಸಂಘ ಪರಿವಾರದವರೇ ಈ ದೇಶದ ಸಮಸ್ಯೆಯಾಗಿದ್ದಾರೆ. ಈ ದೇಶದ ಎಲ್ಲ ಜನರ ಶತ್ರುಗಳಾಗಿದ್ದಾರೆ. ಅವರನ್ನು ಹುಟ್ಟುಹಾಕಿದ್ದು ಈ ಗೋಲ್ವಾಲ್ಕರ್ ಎಂಬ ಶನಿ.

ಬರುವ ಫೆಬ್ರವರಿ ತಿಂಗಳಲ್ಲಿ ದೆಹಲಿಯಲ್ಲಿ ನಡೆಯಲಿರುವ ಸಮಾರಂಭದಲ್ಲಿ ಈ ಗೋಲ್ವಾಲ್ಕರ್‌ನ ಜನ್ಮಶತಾಬ್ಧಿಯನ್ನು ಆರ್‌ಎಸ್‌ಎಸ್ ಆಚರಿಸಲಿದೆ. ಅದರ ಅಂಗವಾಗಿಯೇ ಈಗ ಕರ್ನಾಟಕ ಸೇರಿದಂತೆ ಇತರೆ ರಾಜ್ಯಗಳಲ್ಲೂ ಹಿಂದೂ ಸಮಾವೇಶಗಳನ್ನು ನಡೆಸುತ್ತಿದೆ. ಆ ಸಮಾವೇಶಗಳ ಜಾಹೀರಾತುಗಳಲ್ಲಿ ಆಯಾ ರಾಜ್ಯದ ಸಾಂಸ್ಕೃತಿಕ ಹರಿಕಾರರ, ಸಾಮಾಜಿಕ ಸುಧಾಕರರ ಭಾವಚಿತ್ರಗಳನ್ನು ಬಳಸಿಕೊಂಡಿದೆ. ಅಷ್ಟೇ ಅಲ್ಲ, ಆರ್‌ಎಸ್‌ಎಸ್ ಪ್ರಕಟಿಸಿರುವ ಕರಪತ್ರದಲ್ಲಿ "ಇಂತಹ ಸಮಾವೇಶಗಳಿಗೆ ವಿವಿಧ ಜಾತಿಗಳ ನಾಯಕರನ್ನು ಮತ್ತು ಮಠಾಧಿಪತಿಗಳನ್ನು ಆಹ್ವಾನಿಸಿ ಶ್ರೀ ಗುರುಜಿ (ಗೋಲ್ವಾಲ್ಕರ್)ರವರ ಸಿದ್ಧಾಂತವನ್ನು ಪ್ರಚಾರ ಮಾಡಬೇಕು" ಎಂದು ದಾಖಲಿಸಿದೆ.

ಜಾತಿವಾದಿ, ಕೋಮುವಾದಿ ಗೋಲ್ವಾಲ್ಕರ್ ಮತ್ತಾತನ ಶನಿಸಂತಾನ ಹೆಚ್ಚಾದಷ್ಟು ಈ ದೇಶಕ್ಕೆ ಅಪಾಯ ಎಂಬುದನ್ನು ಜನ ಅರಿತು ಅವರ ಈ ವಿಕೃತ ಸಮಾವೇಶಗಳಲ್ಲಿ ಭಾಗವಹಿಸಬಾರದು ಮಾತ್ರವಲ್ಲ, ತೀವ್ರವಾಗಿ ವಿರೋಧಿಸಬೇಕಿದೆ.

ದಲಿತರಿಗೆ, ಶರಣರಿಗೆ, ಶೂದ್ರರಿಗೆ, ಜಾತ್ಯತೀತರಿಗೆ, ಪ್ರಗತಿಪರರಿಗೆ, ಕನ್ನಡಿಗರಿಗೆ ಆ ತಾಕತ್ತಿದೆಯಾ?

-ಗೌರಿ ಲಂಕೇಶ್

ಗೋಲ್ವಾಲ್ಕರ್‌ಗೆ ಬಲಿಪಶುವಾಗುತ್ತಿರುವ ಶರಣ ಸಂಸ್ಕೃತಿ

ಡಾ. ಕೆ. ಮರುಳಸಿದ್ದಪ್ಪ

ಸಮಕಾಲೀನ ಕರ್ನಾಟಕದ ಸ್ಥಿತ್ಯಂತರಗಳು ಸಾಮಾಜಿಕವಾಗಿ ಕುತೂಹಲಕಾರಿ ತಿರುವುಗಳನ್ನು ಪಡೆದುಕೊಳ್ಳುತ್ತಲಿವೆ. ವಿದ್ಯಾವಂತ ಮಧ್ಯಮ ವರ್ಗವು ನ್ಯಾಯವಾಗಿ ತನ್ನ ಜಾತಿ ಬದ್ಧತೆಯನ್ನು ಮೀರಿ ನಿಲ್ಲಬೇಕೆಂದು ಬಯಸಿದ್ದವರಿಗೆ ಅಲ್ಲಿಯೂ ಜಾತಿಯ ಹಿಡಿತವೇ ಬಲವಾಗುತ್ತಿರುವುದು ಕಳವಳ ಉಂಟುಮಾಡುವಂತಿದೆ. ಮುಂದುವರಿದವರು, ಅಲ್ಪಸಂಖ್ಯಾತರು, ಹಿಂದುಳಿದವರು, ಅತಿ ಹಿಂದುಳಿದವರು, ದಲಿತರು, ಎಡಗೈ ಬಲಗೈ- ಹೀಗೆಲ್ಲಾ ಹೋಳು ಹೋಳಾಗಿರುವ ಸಾಮಾಜಿಕ ಸಂದರ್ಭವನ್ನು ವಿವಿಧ ರಾಜಕೀಯ ಹಿತಾಸಕ್ತಿಗಳು ತಮ್ಮತಮ್ಮ ಪರವಾಗಿ ರೂಪಿಸಲು ಹೆಣಗಾಡುತ್ತಿವೆ. ಮೀಸಲಾತಿಗಾಗಿ ಎಲ್ಲರೂ ತಮ್ಮ ಪ್ರತ್ಯೇಕತೆಯನ್ನು ಸಿದ್ಧಪಡಿಸಿ ತೋರಿಸಲು ಹೋರಾಡುತ್ತಿದ್ದಾರೆ. ಇಂತಹ ಜಾತೀಯತೆಯ ಗೊಂದಲ ಕರ್ನಾಟಕದಲ್ಲಿ ಎಂದೂ ಇರಲಿಲ್ಲವೆನ್ನಿಸುತ್ತದೆ. ಭಾರತೀಯ ಅಥವಾ ಕನ್ನಡಿಗನೆಂಬ ಅನನ್ಯತೆ ಹಿಂದೆ ಸರಿದು, ಜಾತಿ-ಉಪಜಾತಿಗಳೇ ವ್ಯಕ್ತಿ ಪ್ರತಿಷ್ಠೆಯ ಕುರುಹುಗಳಾಗಿಬಿಟ್ಟಿವೆ.

ಹಿಂದೂತ್ವವಾದಿಗಳಿಗೆ ವಾಸ್ತವವಾಗಿ ಇದು ಅನ್ಯಾಯ ಮೋಸಕಾರಿ ಸುದ್ದಿಯೇನಲ್ಲ, ತಮ್ಮ ಹಿಂದೂವಾದಿ ಸಂಘಟನೆಯನ್ನು ಬದಲಾದ ಪರಿಸ್ಥಿತಿಗೆ ಹೊಂದಿಸಿಕೊಳ್ಳಲು ಅವರೂ ಪ್ರಯತ್ನಿಸುತ್ತಿದ್ದಾರೆ. ಕಳೆದ ಐದಾರು ವರ್ಷಗಳಿಂದಲೂ ಕರ್ನಾಟಕವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಅವರು ನಡೆಸಿದ ಸನ್ನಾಹಗಳಿಗೆ ಇದೀಗ ಸ್ವಲ್ಪ ಮಟ್ಟಿನ ಫಲ ರಾಜಕೀಯವಾಗಿ ದೊರಕಿದೆ. ಆದರೆ ರಾಜಕೀಯ ಅಧಿಕಾರ ಮಾತ್ರವೇ ಅದರ ಮುಖ್ಯ ಗುರಿಯಲ್ಲವೆಂಬುದನ್ನು ನಾವು ಮರೆಯಬಾರದು. ರಾಷ್ಟ್ರೀಯತೆ ಹಾಗೂ ಆಧುನಿಕತೆಗಳೆರಡನ್ನೂ ತಮ್ಮ ದುರುದ್ದೇಶಕ್ಕಾಗಿ ಬಳಸಿಕೊಂಡು ವಿವಿಧ ಜಾತಿಗಳನ್ನು ವೈದಿಕಶಾಹಿಯ ಆಶ್ರಯದಲ್ಲಿ ಒಗ್ಗೂಡಿಸಿ ಹಿಂದೂ ರಾಷ್ಟ್ರದ ಕನಸನ್ನು ಸಾಕಾರಗೊಳಿಸುವುದು ಅದರ ದೂರಗಾಮಿ ಆಲೋಚನೆಯಾಗಿದೆ. ಸಮಕಾಲೀನ ಕರ್ನಾಟಕದ ಕೆಲವು ವೈದಿಕೇತರ ಮಠಗಳೂ ಸಹ ಹಿಂದೂತ್ವದ ಪ್ರಭಾವಕ್ಕೆ ಬಲಿಯಾಗಿರುವುದು ಈಗ ಅವರ ಮೂಲಶಕ್ತಿಯಾಗಿ ಪರಿಣಮಿಸಿದೆ.

ಇದೊಂದು ದುರದೃಷ್ಟಕರ ಸಂಗತಿ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸ ಬಲ್ಲವರಿಗೆಲ್ಲಾ ಗೊತ್ತಿರುವ ವಿಚಾರಗಳು ನಮ್ಮ ಕೆಲವು ವೈದಿಕೇತರ ಮಠಗಳ ವಕ್ತಾರರಿಗೇಕೆ ಗೊತ್ತಿಲ್ಲ? ತತ್ಕಾಲೀನ ರಾಜಕೀಯ ಲಾಭಕ್ಕಾಗಿ ಈ ಮಠಾಧೀಶರೂ ದಾರಿ ತಪ್ಪಿರಬಹುದೇ? ಎಂಬುದು ಚರ್ಚಿಸಬೇಕಾದ ವಿಚಾರವಾಗಿದೆ.

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ವೈದಿಕ ಧರ್ಮಕ್ಕೆ ಪ್ರಬಲವಾದ ಪ್ರತಿರೋಧವಿದೆ. ಜೈನ್ ಹಾಗೂ ವೀರಶೈವ ಪರಂಪರೆಯಲ್ಲಿ ವೈದಿಕ ವಿರೋಧಿ ನಿಲುವು ಸ್ಫುಟವಾಗಿದ್ದು ಹಳಗನ್ನಡ, ನಡುಗನ್ನಡ ಸಾಹಿತ್ಯದಲ್ಲಿ ಅದು ಚೆನ್ನಾಗಿ ವ್ಯಕ್ತವಾಗಿದೆ. ಹನ್ನೆರಡನೆಯ ಶತಮಾನದ ಶರಣ ಚಳವಳಿಯ ವಚನಕಾರರ ಆಶಯ, ಮೂಲತಃ ವೈದಿಕ



ವಿರೋಧಿ ಎನ್ನುವುದನ್ನು ಮರೆಯುವಂತಿಲ್ಲ. ವೇದ, ಪುರಾಣ ಹಾಗೂ ರಾಮಾಯಣ, ಮಹಾಭಾರತ [illegible]

(ಮುಂದಿನ ಪುಟಕ್ಕೆ)


(ಹಿಂದಿನ ಪುಟದಿಂದ..)

ತಳತದಿಯಾಗಿರಬೇಕೆಂದು ಪ್ರತಿಪಾದಿಸಿದ್ದಾರೆ. ಅಂದಿನಿಂದಲೂ ವೀರಶೈವರಲ್ಲಿ ವೈದಿಕ ವಿರೋಧಿ ನಿಲುವು ಅಚಲವಾಗಿಯೇ ಉಳಿದುಕೊಂಡು ಬಂದಿದೆ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ದಕ್ಷಿಣ ಭಾರತದ ರಾಜ್ಯಗಳಲ್ಲಿ ಕಾಣಿಸಿಕೊಂಡ ಬ್ರಾಹ್ಮಣೇತರ ಚಳವಳಿಗಳಲ್ಲಿಯೂ ಕರ್ನಾಟಕವು ಪ್ರಮುಖ ಪಾತ್ರ ವಹಿಸಿದೆ. ಬ್ರಾಹ್ಮಣರೇ ಅಧಿಕವಾಗಿದ್ದ ಅಂದಿನ ಕಾಂಗ್ರೆಸ್ ಪಕ್ಷಕ್ಕೆ ವಿರೋಧವಾಗಿಯೇ ಜಸ್ಟೀಸ್ ಪಾರ್ಟಿ ಹುಟ್ಟಿಕೊಂಡಿತು. ದ್ರಾವಿಡ ಚಳವಳಿಯ ಸಮಾನಾಂತರವಾಗಿ ಬೆಳೆಯಿತು. ಆದರೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಾಂಗ್ರೆಸ್ ಪಕ್ಷವು ಸಾಕಷ್ಟು ಮಟ್ಟಿಗೆ ಬದಲಾಯಿತು; ಹಲವು ನೆಲೆಯ ಜಾತಿಗಳನ್ನು, ಅಲ್ಪಸಂಖ್ಯಾತರನ್ನು, ದಲಿತರನ್ನು ತನ್ನತ್ತ ಸೆಳೆದುಕೊಂಡಿತು. ಇಂದಿರಾಗಾಂಧಿಯವರ ತರುವಾಯದ ಕಾಂಗ್ರೆಸ್ ಪಕ್ಷವಂತೂ ಹಿಂದುಳಿದ ಜಾತಿಗಳು ಹಾಗೂ ಅಲ್ಪಸಂಖ್ಯಾತರ ಪರವಾದ ಸ್ಪಷ್ಟ ನಿಲುವು ತಾಳಿದ ಚಾರಿತ್ರಿಕ ಬೆಳವಣಿಗೆಯು ಕರ್ನಾಟಕದಲ್ಲಿ ದೇವರಾಜ ಅರಸುರವರ ನೇತೃತ್ವದಲ್ಲಿ ಹೊಸ ಅಲೆಯನ್ನೇ ಎಬ್ಬಿಸಿತು. ಅಂದು ಜಾಗೃತವಾದ ಸಾಮಾಜಿಕ ಪ್ರಜ್ಞೆ ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಗಾಢವಾಗಿ ಪ್ರಭಾವಿಸಿತೆಂಬುದು ಸಾಧಾರಣ ಸಂಗತಿಯೇನಲ್ಲ.

ಗೋಲ್ವಾಲ್ಕರ್‌ಗೆ ಬಲಿಪಶುವಾಗುತ್ತಿರುವ ಶರಣ ಸಂಸ್ಕೃತಿ

ಇದೆಲ್ಲವನ್ನೂ ಅರಿತಿದ್ದ ಹಿಂದೂತ್ವವಾದಿಗಳು ಸಾವಿರಾರು ವರ್ಷಗಳ ಶೋಷಣೆಯ ಚರಿತ್ರೆಯನ್ನು ಸಮುದಾಯಗಳು ಮರೆಯುವಂತೆ ಮಾಡಲು, ಉಪಾಯಗಳನ್ನು ರೂಪಿಸಿದರು. ವೈದಿಕಶಾಹಿಯ ಆಶ್ರಯದಲ್ಲಿಯೇ ಎಲ್ಲ ಜಾತಿಗಳನ್ನು ಮತ್ತೆ ಒಗ್ಗೂಡಿಸಲು, ಕಲ್ಪಿತ ವೈರಿಯೊಬ್ಬನನ್ನು ಅವರು ಸೃಷ್ಟಿಸುವುದು ಅನಿವಾರ್ಯವಾಗಿತ್ತು. ಫ್ಯಾಸಿಸ್ಟ್ ಇತಿಹಾಸ ಬಲ್ಲವರಿಗೆಲ್ಲ ಈ ತಂತ್ರ ಚೆನ್ನಾಗಿ ಗೊತ್ತು. ಭಾರತದ ಸಂದರ್ಭದಲ್ಲಿ ಇಸ್ಲಾಂ ಮತ್ತು ಕ್ರೈಸ್ತ ಧರ್ಮೀಯರನ್ನು ಹೀಗೆ ವೈರಿಯನ್ನಾಗಿ ಪರಿಗಣಿಸಲಾಯಿತು. ಅವರ ಪೂರ್ವಿಕರು ವಿದೇಶಿ ಮೂಲದವರೆಂಬುದು, ಮತ್ತು ಶತಮಾನಗಳ ಕಾಲ ಅವರು ನಮ್ಮನ್ನಾಳಿದರೆಂಬುದು, ಸ್ವಾತಂತ್ರ್ಯ ಬಂದ ಮೇಲೂ ಘಟಿಸಿದ ಕೆಲವು ಸಂಗತಿಗಳು ಹಿಂದೂತ್ವವಾದಿಗಳ ತರ್ಕಕ್ಕೆ ಸ್ವಲ್ಪ ಬೆಂಬಲವಾಗಿ ಬಿಟ್ಟವು. ಶೋಷಕರೆಂಬಂತೆ ಮುಸ್ಲಿಮರನ್ನು, ಕ್ರೈಸ್ತರನ್ನು ಬಣ್ಣಿಸುತ್ತಿರುವ ಹಿಂದೂತ್ವವಾದಿಗಳಿಗೆ ಈ ದೇಶದ ವೈದಿಕ ಧರ್ಮದ ಇತಿಹಾಸವನ್ನು ಯಾರೂ ನೆನಪಿಸುತ್ತಿಲ್ಲವಾದುದರಿಂದ ಅವರ 'ಗೋಬೆಲ್‌ವಾದಿ' ಪ್ರಚಾರ ನಿರಾತಂಕವಾಗಿ ಮುಂದುವರಿದಿದೆ.



ಕರ್ನಾಟಕದಲ್ಲಿ ದೇವರಾಜ ಅರಸುರವರು ಚಾಲನೆ ಕೊಟ್ಟ ಸಾಮಾಜಿಕ ಧ್ರುವೀಕರಣ ಪ್ರಕ್ರಿಯೆಯ ಪರಿಣಾಮವಾಗಿ ಪ್ರಬಲ ಕೋಮುಗಳ ಪಟ್ಟಭದ್ರ ಹಿತಾಸಕ್ತಿ ಸಮಕಾಲೀನ ರಾಜಕೀಯದಲ್ಲಿ ಹಿನ್ನಡೆಯಾಗಿದ್ದು, ಅವರು ಸ್ವಲ್ಪಮಟ್ಟಿಗೆ ಗೊಂದಲದ ಸ್ಥಿತಿಯಲ್ಲಿದ್ದಾರೆ. ಈ ಪರಿಸ್ಥಿತಿಯ ಲಾಭ ಪಡೆಯಲು ಹಿಂದೂತ್ವವಾದಿಗಳು ಮುಂದಾಗಿದ್ದಾರೆ. ರಾಜ್ಯಾದ್ಯಂತ ಈಗ ಅವರು ಸಂಘಟಿಸುತ್ತಿರುವ 'ವಿರಾಟ್ ಹಿಂದೂ ಸಮಾವೇಶ'ಗಳ ಗುರಿ ಎರಡು ರೀತಿಯಲ್ಲಿದೆ. ರಾಜಕೀಯ ನೆಲೆಯಲ್ಲಿ ಮುಂದುವರಿದ ಜಾತಿಗಳ ಮುಷ್ಟಿಯಲ್ಲಿಯೇ ಅಧಿಕಾರ ಉಳಿಯುವಂತೆ ನೋಡಿಕೊಳ್ಳುವುದು; ಸಾಮಾಜಿಕವಾಗಿ ಹಿಂದೂತ್ವವಾದಿಗಳಿಗೆ ಗೌರವಾರ್ಹತೆಯನ್ನು ತಂದುಕೊಡುವುದು. ಇಲ್ಲಿನ ಕೆಲವು ಮಠಾಧೀಶರಿಗೂ ತಾವು ಕೇವಲ ಒಂದು ಜಾತಿಯ ಜಗದ್ಗುರುವೆನಿಸಿಕೊಳ್ಳದೆ, ಎಲ್ಲರಿಂದಲೂ ಅದರಲ್ಲಿಯೂ ವಿಶೇಷವಾಗಿ ವೈದಿಕ ವರ್ಗದವರಿಂದ ಗೌರವ ಪಡೆಯಬೇಕೆಂಬ ಹಂಬಲವಿದೆ. ಆದುದರಿಂದ ಅವರೂ ಸಹ ವಿಶಾಲ ನೆಲೆಯಲ್ಲಿ ತಮ್ಮ ಜಗದ್ಗುರುತ್ವವನ್ನು ಸ್ಥಾಪಿಸಿಕೊಳ್ಳಲು ಹಿಂದೂತ್ವವಾದಿಗಳೊಡನೆ ಸೇರಿಬಿಟ್ಟಿದ್ದಾರೆ. ಈ ಬೆಳವಣಿಗೆಯ ಲಾಭವು ಸಹಜವಾಗಿಯೇ ರಾಜಕೀಯವಾಗಿ ಸಂಘ ಪರಿವಾರಕ್ಕಾಗುವುದು ಅನಿವಾರ್ಯವಾಗಿಬಿಟ್ಟಿದೆ.

ರಾಜಕೀಯಕ್ಕಿಂತ ಸಾಂಸ್ಕೃತಿಕವಾಗಿ ನಾವಿಂದು ಅಪಾಯದ ಅಂಚಿನಲ್ಲಿದ್ದೇವೆ. ಹಿಂದೂ ಸಮಾವೇಶಗಳ ಅಂಗವಾಗಿ ನಡೆಸುತ್ತಿರುವ ಪ್ರಚಾರದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ಥಾಪಕ ಗೋಲ್ವಾಲ್ಕರ್ ಅವರನ್ನು ಸಂತಸಮಟ್ಟಕ್ಕೆ ಏರಿಸಲಾಗುತ್ತಿದೆ. ಹಿಂದೂ ಸಮಾವೇಶವು ಸಂಘಟನೆಗೊಳ್ಳುತ್ತಿರುವ ಎಲ್ಲ ನಗರಗಳಲ್ಲಿ ಭಾರಿ ಭಾರಿ ಭಿತ್ತಿ ಚಿತ್ರಗಳನ್ನು ಹಾಕುತ್ತಿದ್ದಾರೆ. ಮಹಾನ್ ಸಂತನ ಪ್ರಭಾವಳಿಯ ಸಮೇತ ಭಿತ್ತಿ ಚಿತ್ರದ ಕೇಂದ್ರದಲ್ಲಿ ಗೋಲ್ವಾಲ್ಕರ್; ಅವರ ಸುತ್ತ ಬಸವಣ್ಣ, ಕನಕದಾಸ, ವಿವೇಕಾನಂದ, ಭಗತ್‌ಸಿಂಗ್, ಅಂಬೇಡ್ಕರ್ ಇತ್ಯಾದಿ ಇತ್ಯಾದಿ ಮಹಾವ್ಯಕ್ತಿಗಳು ಚಿತ್ರಿಸಲ್ಪಡುತ್ತಾರೆ. ಇದೊಂದು ಮಹಾವ್ಯಂಗ್ಯವೆನ್ನಬೇಕು. ಮನುಧರ್ಮ ಶಾಸ್ತ್ರಾನುಸಾರವಾಗಿ ಭಾರತೀಯ ಸಮಾಜವನ್ನು ಪುನರ್ ರೂಪಿಸಬಯಸುವ, ಹಿಂದೂಗಳಲ್ಲದವರಿಗೆ ನಾಗರಿಕ ಹಕ್ಕನ್ನು ನಿರಾಕರಿಸಬೇಕೆನ್ನುವ ಗೋಲ್ವಾಲ್ಕರ್ ಎಲ್ಲಿ? ಬಸವಣ್ಣ, ಕನಕದಾಸರೆಲ್ಲಿ? ಎತ್ತಣಿಂದೆತ್ತ ಸಂಬಂಧ? ಭಗತ್‌ಸಿಂಗ್ ತಾನೊಬ್ಬ ನಾಸ್ತಿಕ ವಿಚಾರವಾದಿಯೆಂದು ಸ್ಪಷ್ಟವಾಗಿ ಘೋಷಿಸಿದ್ದಾರೆ. ಅಂಬೇಡ್ಕರ್ ಇಲ್ಲಿ ಸೇರ್ಪಡೆಯಾಗಿರುವುದಂತೂ ಪರಮ ವ್ಯಂಗ್ಯವೆನ್ನಬಹುದಾಗಿದೆ. ಬದುಕಿನುದ್ದಕ್ಕೂ ಶೂದ್ರಾತಿಶೂದ್ರರ ದಲಿತರ ಹಕ್ಕಿಗಾಗಿ ಹೋರಾಡಿದ ಅಂಬೇಡ್ಕರ್ ಮತ್ತು ವೈದಿಕರ ಶೋಷಕ ಗುಣವನ್ನು ಸ್ಪಷ್ಟವಾಗಿ ಎತ್ತಿ ತೋರಿಸಿದ ವಿವೇಕಾನಂದರೂ ಗೋಲ್ವಾಲ್ಕರ್ ಜೊತೆ ಸೇರುವುದೆಂತು? ಗಾಂಧೀಜಿಯವರನ್ನೂ ಗೋಲ್ವಾಲ್ಕರ್ ಚಿತ್ರದ ಜೊತೆ ಸೇರಿಸಿಲ್ಲವೆಂಬುದು ಸಂಘ ಪರಿವಾರಿಗಳ ಅಂತರಂಗದ ಹೊಯ್ದಾಟಕ್ಕೆ ಸಾಕ್ಷಿಯಾಗಿದೆ. ಗಾಂಧೀಜಿಯವರ ಕೊಲೆಗೆ ಸಂಚು ನಡೆಸಿದವರ ಹೆಸರಿನ ಪಟ್ಟಿಯಲ್ಲಿದ್ದ ಗೋಲ್ವಾಲ್ಕರ್ ಜೊತೆ, ಸಿದ್ಧಗಂಗಾಶ್ರೀಗಳ ಚಿತ್ರವಿರುವುದು ಎಂತಹ ಅಪಚಾರವೆಂಬುದನ್ನು ಅವರ ಭಕ್ತಾದಿಗಳೇ ಮನಗಾಣಬೇಕಾಗಿದೆ.

ತಮ್ಮ ಬದುಕಿನುದ್ದಕ್ಕೂ ಲಕ್ಷಾಂತರ ಬಡಮಕ್ಕಳಿಗೆ ಅವರ ಜಾತಿ, ಧರ್ಮವನ್ನು ಕೇಳದೆ ಅನ್ನ ಹಾಕಿ ಬೆಳೆಸಿ ವಿದ್ಯಾದಾನ ಮಾಡಿದ ನಮ್ಮ ಕಾಲದ ಮಹಾನ್ ಸಂತರೆನಿಸಿದ ಶ್ರೀ ಸಿದ್ಧಗಂಗಾಶ್ರೀಗಳನ್ನು ಶತಾಯುಷಿಯಾಗುತ್ತಿರುವ ಹೊತ್ತಿನಲ್ಲಿ ಫ್ಯಾಸಿಸ್ಟ್ ಮತಾಂಧ ವ್ಯಕ್ತಿಯೊಬ್ಬರೊಂದಿಗೆ ಸಮೀಕರಿಸುತ್ತಿರುವುದು ಯಾವ ನ್ಯಾಯ? ಶರಣ ಸಂಸ್ಕೃತಿಯ ವಾರಸುದಾರರೆಂದು ನಂಬಿಕೊಂಡಿರುವ ಲಿಂಗಾಯಿತರು ಕೇವಲ ರಾಜಕೀಯ ಅಧಿಕಾರಕ್ಕಾಗಿ ಹಿಂದೂತ್ವವಾದಿಗಳೊಡನೆ ಗುರುತಿಸಿಕೊಳ್ಳುತ್ತಿರುವುದು ನಮ್ಮ ಕಾಲದ ದೊಡ್ಡ ದುರಂತವೆನ್ನದೆ ವಿಧಿಯಿಲ್ಲ. ಹಿಂದೂತ್ವವಾದಿಗಳೊಂದಿಗೆ ಗುರುತಿಸಿಕೊಂಡಿರುವ ಲಿಂಗಾಯಿತ ಮಠಾಧೀಶರಲ್ಲಿ ಕೆಲವರು ಬಹುದೊಡ್ಡ ವಿದ್ವಾಂಸರು. ಶರಣ ಸಂಸ್ಕೃತಿಯ ಆಶಯ ಮತ್ತು ಚರಿತ್ರೆ ಅವರಿಗೆ ಗೊತ್ತಿಲ್ಲವೆಂದಲ್ಲ. ಆದರೂ ಅವರು ಈ ದುರಂತದ ಹಾದಿಯಲ್ಲಿ ಮುನ್ನುಗ್ಗುತ್ತಿದ್ದಾರೆ. ತಮ್ಮ ಶಿಷ್ಯರಿಗೆ ರಾಜಕೀಯ ಅಧಿಕಾರ ದೊರೆಯಲೆಂಬ ಏಕೈಕ ಆಸೆಯನ್ನು ಬಿಟ್ಟರೆ, ಬೇರಾವ ಘನ ಉದ್ದೇಶವೂ ಅವರಿಗಿಲ್ಲ. ಮುನ್ನೋಟವಿಲ್ಲದ ತಮ್ಮ ಈ ನಿಲುವಿನಿಂದಾಗಿ ಶರಣ ಸಂಸ್ಕೃತಿಯನ್ನೇ ಅವರು ಗೋಲ್ವಾಲ್ಕರ್‌ಗೆ ಬಲಿಪಶುವಾಗಿ ಅರ್ಪಿಸುತ್ತಿದ್ದಾರೆ.


ತತ್ಕಾಲೀನ ಲಾಭಕ್ಕಾಗಿ ಶಾಶ್ವತವಾದ ಕಳಂಕವನ್ನು ತಂದುಕೊಳ್ಳುವ ಈ ಬಗೆಯ ಆತುರದಿಂದಾಗಿಯೇ ಜಾತ್ಯತೀತ ಜನತಾದಳವು ಬಿಜೆಪಿ ಜೊತೆ ಸೇರಿ ಆಡಳಿತ ನಡೆಸುವುದಕ್ಕೆ ಪ್ರೇರೇಪಣೆಯಾಯಿತು. ಕರ್ನಾಟಕದ ರಾಜಕೀಯದಲ್ಲಿ ತಮ್ಮ ಜಾತ್ಯತೀತ ದೃಢ ನಿಲುವಿನಿಂದಾಗಿ ಅಜಾತಶತ್ರುವೆನಿಸಿದ್ದ ಮಾಜಿ ಪ್ರಧಾನಿ, ಈಗ ನಗೆಪಾಟಲಿಗೀಡಾಗಿದ್ದಾರೆ. ಇಂದು ರಾಜಕೀಯವಾಗಿ ಅವರಿಗೆ ಲಾಭವಾಗಿದ್ದರೂ ಚರಿತ್ರೆಯಲ್ಲಿ ಅವರ ಹೆಸರು ಹೇಗೆ ಉಲ್ಲೇಖಗೊಳ್ಳುತ್ತದೆ, ಎಂಬುದರ ಎಚ್ಚರ ಅವರಿಗಿಲ್ಲವೆಂಬುದು ಸ್ಪಷ್ಟ ಸಂಗತಿಯಾಗಿದೆ.

ಬೆಂಕಿ ಬಿದ್ದ ಮನೆಯಂತಾಗಿರುವ ಕರ್ನಾಟಕವನ್ನು ಉಳಿಸಬೇಕಾದರೆ, ನಿಜವಾದ ಜಾತ್ಯತೀತ ವಿಚಾರವಾದಿಗಳು ಒಗ್ಗೂಡಿ, ಹೋರಾಟಕ್ಕೆ ಅಣಿಯಾಗಬೇಕಾಗಿದೆ. ವಿರಾಟ್ ಹಿಂದೂ ಸಮಾವೇಶಗಳಿಗೆ ಪ್ರತಿಯಾಗಿ ಕೋಮು ಸೌಹಾರ್ದ ಸಮಾವೇಶಗಳನ್ನು ವ್ಯಾಪಕವಾಗಿ ಸಂಘಟಿಸಬೇಕು. ವೈದಿಕೇತರ ಧಾರ್ಮಿಕ ವರ್ಗದವರನ್ನು ಒಲಿಸಿಕೊಂಡು ಸಂಘ ಪರಿವಾರದ ಗುಪ್ತ ಅಜೆಂಡಾವನ್ನು ಅವರಿಗೆ ವಿವರಿಸಿ ಹೇಳಬೇಕು. ಜಾತ್ಯತೀತ ತತ್ವಕ್ಕೆ ಬದ್ಧವಾಗಿರುವ ಎಲ್ಲ ರಾಜಕೀಯ ಪಕ್ಷಗಳೂ ಒಟ್ಟಾಗಿ ಕೋಮುವಾದಿಗಳ ವಿರುದ್ಧ ಹೋರಾಟಕ್ಕೆ ತೊಡಗಬೇಕು. ಕೇವಲ ಓಟು ಗಳಿಸುವ ಜಾತಿವಾದಿ ರಾಜಕಾರಣವನ್ನು ಬದಿಗೊತ್ತಿ ಸೈದ್ಧಾಂತಿಕ ನೆಲೆಯ ವಿನೂತನ ರಾಜಕಾರಣಕ್ಕೆ ತೊಡಗಬೇಕು. ಆಗ ಮಾತ್ರ ಹಿಂದೂತ್ವವಾದಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಬಹುದು. ಇಲ್ಲದಿದ್ದರೆ ಕರ್ನಾಟಕವನ್ನು ಇಂದು ಕಾಡುತ್ತಿರುವ ಸಾಮಾಜಿಕ ಹಾಗೂ ರಾಜಕೀಯ ಅಸ್ಥಿರತೆಯಿಂದ ಯಾರೂ ಕಾಪಾಡಲಾಗುವುದಿಲ್ಲ. ಮುಂದಿನ ತರುಣ ಪೀಳಿಗೆ ತಮ್ಮ ಹಿರಿಯರ ಬಗೆಗೆ ಅಲ್ಪಸ್ವಲ್ಪ ಗೌರವ ಉಳಿಸಿಕೊಳ್ಳುವಂತಹ ರೀತಿಯಲ್ಲಿ ಸಮಕಾಲೀನ ಸಮಾಜದ ನಾಯಕರು ನಡೆದುಕೊಳ್ಳಬೇಕೆಂದು ನಿರೀಕ್ಷಿಸುವುದು ತಪ್ಪಾದೀತೆ?

ನಮ್ದು ಯಜಮಾನ್ರಿಗೆ ಇಷ್ಟು ಜನ ಬಂದ್ರು ಥ್ಯಾಂಕ್ಸ್



ಅತ್ತು ಕರೆದು ಆರತಿ ಮಾಡಿಸಿಕೊಂಡರು ಎನ್ನುವಂತೆ ಶಿವಮೊಗ್ಗ ಸಾಹಿತ್ಯ ಸಮ್ಮೇಳನಕ್ಕೆ, ಯದ್ದಿ ಎಂಬ ಎಡವಟ್ಟುರಾಯನ ಕಡೆಯಿಂದ ಮೂರಾವರ್ತಿ ಕರೆಸಿಕೊಂಡ ಕುಮಾರಸ್ವಾಮಿ ಕಡೆಗೂ ಶಿವಮೊಗ್ಗ ಸಾಹಿತ್ಯ ಸಮ್ಮೇಳನಕ್ಕೆ ಹೋಗಿ ಬಂದೇಬಿಟ್ಟರಂತಲ್ಲಾ, ಅಲ್ಲಿಗೆ ಹೋಗುವುದಕ್ಕೂ ಮುನ್ನ "ಈ ಹಾಳು ಸಾಯಿತ್ಯ ಸಮ್ಮೇಳನದಲ್ಲಿ ಏನು ಮಾತಾಡದು? ಅಟ್ ಲೀಸ್ಟ್ ಎನ್. ನರಸಿಂಹಯ್ಯನ ಯಾವುದಾದರೂ ಪುಸ್ತಕ ಓದಿದ್ದರೆ ಅದರ ಮೇಲಾದರೂ ಮಾತನಾಡಬಹುದಿತ್ತು. ಅದು ಬೇಡ ನಮ್ಮ ಆದಿ ಚುಂಚನಗಿರಿ ಸಂಸ್ಥಾನದ ಕವಿ ದೊಡ್ಡರಂಗೇಗೌಡರು ಬರೆದುದನ್ನಾದರೂ ಓದಿದ್ದರೆ ಅವರ ಹಾಡಿನ ಮೇಲಾದರೂ ಮಾತನಾಡಬಹುದಿತ್ತು. ಈಗೇನು ಮಾಡುವುದು" ಎಂದು ಚಿಂತಾಕ್ರಾಂತರಾಗಿ ಕುಳಿತಿರಬೇಕಾದರೆ, ಮೈಕ್ ಸಿಕ್ಕಿದರೆ ಸಾಕು ಕನಿಷ್ಠ ಎರಡೂವರೆ ಗಂಟೆ ಕೊರೆಯುವ ಅಧಿಕಾರಿಯೊಬ್ಬ "ಸಾರ್, ನೀವೇನೂ ಯೋಚಿಸಬೇಡಿ. ನಿಮಗೆ ನಾನು ಭಾಷಣ ಬರೆದುಕೊಡುತ್ತೇನೆ. ಅದನ್ನೇ ಉರು ಹೊಡೆದು ಮಾತನಾಡಿಬಿಡಿ" ಎಂದನಂತಲ್ಲಾ. ಖುಷಿಯಾದ ಕುಮಾರಣ್ಣ ಅಧಿಕಾರಿ ಬರೆದು ಕೊಟ್ಟ ಭಾಷಣವನ್ನು ಮುಟ್ಟಿಯೂ ನೋಡದೆ ನೇರವಾಗಿ ಸಾಹಿತ್ಯ ಸಮ್ಮೇಳನದಲ್ಲಿ ಓದತೊಡಗಿದಂತೆ ಜನರೆಲ್ಲಾ ಲಘು ಲಾಠಿ ಪ್ರಹಾರಕ್ಕೆ ತುತ್ತಾದವರಂತೆ ಹೊರಟುಬಿಟ್ಟರಂತಲ್ಲಾ. ಇದನ್ನು ಕಂಡು ಭಾಷಣ ಬರೆದುಕೊಟ್ಟ ಅಧಿಕಾರಿ ಜನರನ್ನು ಕೂರಿಸಲು ಯತ್ನಿಸುತ್ತಿದ್ದುದು ಮನಕರಗಿಸುವಂತಿತ್ತಂತಲ್ಲಾ, ಥೂತ್ತೇರಿ!



* * * * * *

ಶಿವಮೊಗ್ಗ ಸಾಹಿತ್ಯ ಸಮ್ಮೇಳನದಲ್ಲಿನ ಮೆರವಣಿಗೆಯ ಅದ್ದೂರಿತನ, ಸಾಲಿಕ್ಕಿದ ಜನಸ್ತೋಮ ನೋಡಿದ ನಮ್ಮ ನಿತ್ಯೋತ್ಸವದ ಕವಿ ನಿಸ್ಸಾರ್ ಈ ಜನ ಬಂದಿರುವುದು ತನ್ನನ್ನೇ ನೋಡಲೆಂದು ಭಾವಿಸಿ, ಬವಳಿ ಬಂದಂತಾಗಿ ಈಶ್ವರ, ಎಡೂರ, ಮತ್ತು ಕುಮಾರಸ್ವಾಮಿಯನ್ನು ಹಿಗ್ಗಾಮುಗ್ಗ ಹೊಗಳಿ ಬಿಸಾಕಿದರಂತಲ್ಲಾ. ಇತ್ತ ನಿಸ್ಸಾರ್‌ರವರ ಧರ್ಮಪತ್ನಿ ತಮ್ಮ ಪತಿಗೆ ಒದಗಿ ಬಂದ ಭಾಗ್ಯಕ್ಕೆ ತುಂಬಾ ಉತ್ಸಾಹಗೊಂಡು "ನಮ್ದು ಯಜಮಾನ್ರಿಗೆ ಇಷ್ಟು ಜನ ಬರ್ತರೆ ಅಂತ ಗೊತ್ತಿರಲಿಲ್ಲ. ತುಂಬ ಜನ ಬಂದಿದ್ದಾರೆ. ಅವ್ರುರಿಗೆ ಎಲ್ಲಾ ಥ್ಯಾಂಕ್ಸ್. ಹಾಗೆ ದೇವರಿಗೂ ಥ್ಯಾಂಕ್ಸ್" ಎಂದರಂತಲ್ಲಾ, ಥೂತ್ತೇರಿ!!

* * * * *


ಚಂದ್ರಶೇಖರ ಪಾಟೀಲ ನಡೆದುಕೊಂಡ ರೀತಿಯಿಂದ ರೋಸಿ ಹೋದ ಎಡೂರಪ್ಪನ ಪಟಾಲಂ "ಮುಂದೆ ಸಾಹಿತ್ಯ ಪರಿಷತ್ ಅಧ್ಯಕ್ಷನಾಗುವವನು ನಮ್ಮವನೇ ಆಗಿರಬೇಕು. ನಾವು ಹೇಳಿದಂತೆಯೇ ಕೇಳುವವನಾಗಬೇಕು. ಅಂತವನನ್ನು ಅಧ್ಯಕ್ಷರನನ್ನಾಗಿ ಮಾಡಿಕೊಳ್ಳೋಣ. ಸದ್ಯಕ್ಕೆ ಈ ಚಂಪಾ ಅಧಿಕಾರದಿಂದ ಇಳಿಯುವಂತೆ ಮಾಡಲು ಏನು ಮಾಡಬೇಕು" ಎಂದು ಚರ್ಚಿಸಿದವಂತಲ್ಲಾ, ಆಗ ಎಡೂರ "ಯಾವುದಕ್ಕೂ ಇಂತಹ ವಿಷಯಗಳಲ್ಲಿ ಎಕ್ಸ್‌ಪರ್ಟ್ ಆಗಿರುವ ನಮ್ಮ ಶಂಕರಮೂರ್ತಿಯನ್ನು ಕೇಳಿ ಹೇಳುತ್ತೇನೆ" ಎಂದು ಹೇಳಲಾಗಿ, ಇದನ್ನು ಕೇಳಿಸಿಕೊಳ್ಳಲಾಗದ ಚೆಡ್ಡಿಗಳು "ನಮ್ಮವರೇ ಆದ ಹರಿಕೃಷ್ಣ ಪುನರೂರ್ ಸಹಾಯ ಕೇಳಿದರೆ ಹೇಗೆ?" ಎಂದು ತರ್ಕಿಸಿ ಅದಿಗೆ ಕಂಟ್ರಾಕ್ಟರ ಥರ ಇರುವ ಪುನರೂರರನ್ನು ಕೇಳಲಾಗಿ ಆತ ಖು... ಯಿಂದ ಹಲ್ಲು ಬಿರಿದು "ನೀವು ಹೇಳುವುದು ಸಮಂಜಸವಾಗಿದೆ. ಮುಂದೆ ನಮ್ಮವರೇ ಆರಿಸಿಬಂದ... ಸಾಯಿತ್ಯ ಸಮ್ಮೇಳನವನ್ನು ಚಂದ ಮಾಡಬಹುದು... ಈಗ ಸದ್ಯಕ್ಕೆ ನಮ್ಮ ಎಲ್ಲಾ ಜಿಲ್ಲಾ ಅಧ್ಯಕ್ಷರ... ಪದಾಧಿಕಾರಿಗಳನ್ನು ಕರೆದು ನಾನು ಚಂಪಾ ಇಳಿಸುವ ಬಗ್ಗೆ ಚರ್ಚಿಸುತ್ತೇನೆ" ಎಂದು ಒದಿತಂತಲ್ಲಾ, ಥೂತ್ತೇರಿ!!

* * * * * *

"ಕನ್ನಡ ಸಾಹಿತ್ಯ ಸಮ್ಮೇ... ನಕ್ಕೆ ಮುಖ್ಯಮಂತ್ರಿ ಬಂದ... ರೆಷ್ಟು, ಬರದೇ ಇದ್ದರೆಷ್ಟು... ಇದೇನು ನಮ್ಮಪ್ಪನ ತಿಥಿ ಕಾರ್ಯವೇ?" ಎಂದ... ಅಸುರ ನಗೆ ನಕ್ಕ ಈಶ್ವರಪ್ಪನೆಂಬ ಯಬಡ, ತನ... ಭಾಷಣದ ಸಂದರ್ಭ ಬಂದಾಗ ಗುರಾಯಿಸುವಂ... ಕೈ ಆಡಿಸುತ್ತ "ಇವತ್ತು ಇಬ್ಬರು ರಾಷ್ಟ್ರಕವಿಯಾಗ... ವಂತಹ ಪರಿಸ್ಥಿತಿ ನಿರ್ಮಾಣವಾಗಿದೆ" ಎಂದುಬಿಟ... ರಂತಲ್ಲಾ, ಇಂತಹ ಪರಿಸ್ಥಿತಿ ಏಕಾಯಿತು, ಹೇಗಾಯಿತು... ಇದರ ಅನಿವಾರ್ಯತೆಯೇನು ಎಂದು ಈಶ್ವರಪ... ವಿವರಿಸುತ್ತಾನೆಂದು ಕಾದ ಜನಕ್ಕೆ ಮನವರಿಕೆಯಾದುದು... ನೆಂದರೆ ಈ ಬಕರಾ ಗೋವಿಂದ ಪೈ ಕೂಡ ರಾಷ್ಟ್ರಕ... ಯಾಗಿದ್ದರು ಎಂಬುದನ್ನೇ ಮರೆತು ಮಾತನಾಡುತ್ತಿದ್ದ... ಸಂತಲ್ಲಾ, ಥೂತ್ತೇರಿ!!

ಕೂಸು ಹುಟ್ಟುವುದಕ್ಕೆ ಮೊದಲೇ ಕುಲಾ... ಹೊಲಿಸಿಕೊಂಡು ಅದಕ್ಕೆ ಕೇಸರಿ ಬಣ್ಣದ ಗೊಂಡೆ... ಕಟ್ಟುವುದರಲ್ಲಿ ನಿಸ್ಸೀಮರಾದ ಚೆಡ್ಡಿಗಳು ಇನ್ನು ಹತ್ತು... ತಿಂಗಳು ಬಾಕಿ ಇರುವಂತೆಯೆ" ನಮ್ಮ ಮುಂದಿನ... ಮುಖ್ಯಮಂತ್ರಿ ಶ್ರೀಮಾನ್ ಎಡಿಯೂರಪ್ಪ" ಎಂದು... ಘೋಷಿಸಿ ಬಿಟ್ಟಿವೆಯಂತಲ್ಲಾ. ಇದರಿಂದ ಬಿಜೆಪಿಯ... ಅನಂತನ ಅಗ್ರಹಾರ ಬೆಚ್ಚಿ ಕೂತಿರುವುದಲ್ಲದೆ, ಅ... ಬಿಜಾಪುರದ ಸುಲ್ತಾನ್ ಬಸವರಾಜ ಯತ್ನಾಳ್ ಕೂಡ... ಮಂಕಾಗಿ ಹೋದರಂತಲ್ಲಾ. ಇನ್ನು ಹತ್ತು ತಿಂಗಳು... ಬಾಕಿ ಇರುವಂತೆಯೇ ಎಡೂರನನ್ನು ಮುಖ್ಯಮಂ... ಯಾಗಿ ಘೋಷಿಸಿದ ಘಟನೆಯನ್ನು ದತ್ತ ದೇವೇಗೌಡ... ಗಮನಕ್ಕೆ ತಂದು "ತಾವು ಏನಾದರೂ ಮಾಡಲೇಬೇಕು... ಸಾರ್. ಯಾಕಂದ್ರೆ ಎಡೆಯೂರಪ್ಪ ಮುಖ್ಯಮಂತ್ರಿಯಾ... ನಂತರ ನಡೆಯುವ ಚುನಾವಣಾ ಪ್ರಚಾರಕ್ಕೆ ಆ... ಮುಖ್ಯಮಂತ್ರಿಯಾಗಿಯೇ ಹೋಗುತ್ತಾನೆ. ಆ... ಕುಮಾರಣ್ಣನ ಕತೆ ಏನೂ? ಈಗೇನೊ ನಮಗೆ ಜ... ಸೇರುತ್ತಾರೆ. ಆಗ ಯಾರೂ ಸೇರುವುದಿಲ್ಲ. ವಿನಾಕಾರಣ... ನಾವು ಬಿಜೆಪಿಗಳ ಹಿಂದೆ ತಿರುಗುವಂತಾಗುತ್ತದೆ" ಎಂದು ಹೇಳಿದನಂತಲ್ಲಾ. ಕೂಡಲೇ ಗೌಡರು "ಯೋಚನೆ ಮಾಡಬೇಡ ದತ್ತ, ನಾನೀಗಾಗಲೇ ಎಂತೆಂ... ವರನ್ನು ಜೀರ್ಣಿಸಿಕೊಂಡಿದ್ದೇನೆ. ಸದ್ಯಕ್ಕೆ ಎಡೂರಪ್ಪ... ವಿಷಯದಲ್ಲಿ ನಾನು ಸಿಎಂಪಿ ಟ್ರಂಪ್ ಕಾರ್ಡ್... ಬಿಡುತ್ತೇನೆ. ಮುಂದೆ ಅದನ್ನೇ ದೊಡ್ಡದು ಮಾಡಿದ... ರಾಯ್ತು" ಎಂದರಂತಲ್ಲಾ, ಥೂತ್ತೇರಿ!!!

-ಯಾಹೂ



ತಿಮ್ಮೇನಹಳ್ಳಿ ತಮ್ಮಯ್ಯ

ತಿಮ್ಮೇನಹಳ್ಳಿಯ ದಾಯಾದಿ ಯುದ್ಧ ಹೊಡೆದಾಟದ ಮೂಲ ಹುಡುಗಿ ಜಗಳ

ಹೆಚ್ಚೆಂದರೆ ಹದಿನೆಂಟೋ ಇಪ್ಪತ್ತೋ ಇರಬೇಕು. ಯಾವ ಹುಡುಗರು ತಾನೇ ಈ ವಯಸ್ಸಿಗೆ ಕಿತ್ತಾಡೋಲ್ಲ. ಕ್ರಿಕೆಟ್ ಜಗಳ, ಗೋಲಿ ಜಗಳದಂತೆ ಈ ಹುಡುಗಿ ವಿಷಯದ ಕಚ್ಚಾಟವೂ ಹಾಗೇ ಮುಗಿದು ಹೋಗಿದ್ದರೆ ಮುಂದೊಮ್ಮೆ ತಿಮ್ಮೇನಹಳ್ಳಿ ಏನಾಗುತ್ತಿತ್ತೊ. ಆದರೆ ತಿಮ್ಮೇನಹಳ್ಳಿಗೆ ಯಾವ ಶಾಪವಿತ್ತೊ! ಆತನಕ ಅಣ್ಣತಮ್ಮಂದಿರಂತಿದ್ದ ತಮ್ಮಯ್ಯ ಮತ್ತು ಗೋವಿಂದನ ಮಧ್ಯೆ ಮಾರೇನಹಳ್ಳಿ ಜಗ್ಗ ದೊಡ್ಡದೊಂದು ಬಿರುಕಾಗಿ ಅವತರಿಸಿದ್ದ.



ತಿಮ್ಮೇನಹಳ್ಳಿ ಗೋವಿಂದ

ರಿವೇಂಜ್ ಕಿಲ್ಲಿಂಗ್ಸ್ 11


ರಾ. ಸೋಮನಾಥ್

ಊರೊಂದು ಬೆಳೆದಂತೆಲ್ಲ ಅದರದೇ ಆದ ರೋಗಗಳು ಕೂಡ ಉಲ್ಬಣಿಸುತ್ತ ಹೋಗುತ್ತವೆ. ತಿಮ್ಮೇನಹಳ್ಳಿಯ ಗೊಲ್ಲರ ಜಮೀನು ಕಿತ್ತು ಅಲ್ಲಿ ತಲೆ ಎತ್ತಿದ ಹೌಸಿಂಗ್ ಬೋರ್ಡ್, ಪ್ರಶಾಂತನಗರ ಮತ್ತು ಎಂ.ಸಿ. ಲೇಔಟ್ ಬಡಾವಣೆಗಳಿಗೆ ಎಲ್ಲೆಲ್ಲಿಂದಲೋ ಬಂದು ನೆಲೆಸಿದವರಲ್ಲಿ ಅತ್ಯಂತ ಖತರ್‌ನಾಕ್ ಹಿನ್ನೆಲೆಯಿದ್ದದ್ದು ರೌಡಿ ಬಂಡ ಉರ್ಫ್ ಕೃಷ್ಣನಿಗೆ. ಆತ ಶ್ರೀರಾಂಪುರದ ಮತ್ತೊಬ್ಬ ದೈತ್ಯ ಮಾಸ್ತಿಯ ಕಡುವೈರಿ.

ಪೈಪ್‌ಲೈನ್, ಕೋದಂಡರಾಂಪುರ, ಮಲ್ಲೇಶ್ವರ, ಶ್ರೀರಾಂಪುರ ಏರಿಯಾಗಳಲ್ಲಿ ತಾನೆಲ್ಲೇ ಕಂಡರೂ ದಂಡೆತ್ತಿ ಬಂದು ಹಾವಳಿಯಿಡುತ್ತಿದ್ದ ಮಾಸ್ತಿಗೆ ಅಂಜಿಕೊಂಡೇ ಬಂಡ ಎಂ.ಸಿ. ಲೇಔಟಿಗೆ ಬಂದು ಮನೆ ಮಾಡಿದ್ದ. ಯಾವತ್ತು ಮಾಸ್ತಿ ಬಂಡನ ಎಂ.ಸಿ. ಲೇಔಟಿನ ಮನೆಗೇ ನುಗ್ಗಲಿದ್ದಾನೆ ಎಂಬ ಸುದ್ದಿ ಬಂತೋ ಭೀತಿಗೆ ಬಿದ್ದ ಬಂಡ ತಿಮ್ಮೇನಹಳ್ಳಿಯ ಗರಡಿ ಪೈಲ್ವಾನ್ ವೆಂಕಟಾಚಲನ ನೆರವು ಕೇಳಿದ್ದೇ ಇಷ್ಟೆಲ್ಲಕ್ಕೂ ಮೂಲವಾಯಿತೆ?

ಒಂದಂತೂ ಸತ್ಯ. ತಿಮ್ಮೇನಹಳ್ಳಿಗೆ ರೌಡಿಯಿಸಂನ್ನು ಪರಿಚಯಿಸಿ ಕೊಟ್ಟದ್ದೇ ಈ ಬಂಡ. ಮಾಸ್ತಿಯ ವಿರುದ್ಧ ತಿಮ್ಮೇನಹಳ್ಳಿ ಗರಡಿಯ ಐವತ್ತು ಮಂದಿ ಹುಡುಗರನ್ನು ಒಟ್ಟು ಮಾಡಿದ ಪೈಲ್ವಾನ್ ವೆಂಕಟಾಚಲ ಅವರನ್ನು ಸತತ ಮೂರು ದಿನಗಳ ಕಾಲ ಬಂಡನ ಮನೆಯಲ್ಲಿಟ್ಟು ಎಣ್ಣೆ ಹೊಡೆಸಿದ. ಇದರ ವಾಸನೆ ಹಿಡಿದೇ ಮಾಸ್ತಿ ತೆಪ್ಪಗಾದ.

ಆಗ ತಿಮ್ಮೇನಹಳ್ಳಿ ಮಗ್ಗುಲಿಗೇ ಕೊಂಗರ ಗುಡಿಸಲು ಎಂಬ ಕಾಲೋನಿಯಿತ್ತು. ಕಲಾಸಿಪಾಳ್ಯದಲ್ಲಿದ್ದ ಕೆಲ ತಮಿಳು ನಿರಾಶ್ರಿತರನ್ನು ಸರ್ಕಾರ ಅಲ್ಲಿ ತಂದಿಟ್ಟಿತ್ತು. ಹಿಂದೆಲ್ಲೋ ವೇಶ್ಯಾವಾಟಿಕೆ ನಡೆಸಿಕೊಂಡಿದ್ದ ಸರೋಜಮ್ಮ ಎಂಬಾಕೆ ಅಲ್ಲಿಯೇ ಮೈಕಸುಬು ಕೇಂದ್ರವನ್ನು ತೆರೆದಳು. ರೌಡಿ ಮಾಸ್ತಿ ಆಕೆಗೆ ಹಳೇ ಗಿರಾಕಿ. ಸರೋಜಮ್ಮನ ಮೈದಂಧೆಗೆ ಪದೇಪದೇ ಮಾಸ್ತಿ ಬರುತ್ತಾನೆಂಬ ಮಾಹಿತಿ ಹೇಗೋ ಬಂಡನಿಗೆ ಸಿಕ್ಕಿದೆ. ಅದೇ ವೇಳೆಗೆ ವಿಜಯನಗರದ ಬಸ್‌ಸ್ಟ್ಯಾಂಡ್‌ನಲ್ಲಿದ್ದ ಅಶೋಕಾ ಹೋಟೇಲಿನಲ್ಲಿ ಯೂತ್ ಕಾಂಗ್ರೆಸ್ ಲೀಡರ್ ಟಿ. ಮರಿಯಪ್ಪ ಅಡ್ಡೆ ಹಾಕಿದ್ದ. ಆತನ ಎಡಗೈ ಬಲಗೈಯಂತಿದ್ದವರು ಡಿಂಗಲ್ ರಮೇಶ ಮತ್ತು ಟ್ವೆಲ್‌ಟೆನ್ ಪ್ರಕಾಶ. ಇವರಿಬ್ಬರೂ ಖತರ್‌ನಾಕ್ ಪಂಟರ್‌ಗಳೆ. ಬಂಡನಿಗೆ ತಿಮ್ಮೇನಹಳ್ಳಿ ಪೈಲ್ವಾನ್ ವೆಂಕಟಾಚಲನನ್ನು ಪರಿಚಯಿಸಿ ಕೊಟ್ಟದ್ದೂ ಇದೇ ಮರಿಯಪ್ಪನೇ!



ಬಂಡ

ಅದು 1980ರ ಕಾಲ. ಅದೊಮ್ಮೆ ಸರೋಜಮ್ಮನ ಮನೆಗೆ ಮಾಸ್ತಿ ಬಂದಿದ್ದಾನೆಂದು ಬಂಡನಿಗೆ ಸುದ್ದಿ ಬಂತು. ಬಂಡ, ಪೈಲ್ವಾನ್ ವೆಂಕಟಾಚಲ ಮತ್ತು ಮಾಗಡಿಯಿಂದ ಬಂದು ತಿಮ್ಮೇನಹಳ್ಳಿಯಲ್ಲಿ ಬಾಡಿಗೆ ಮನೆ ಮಾಡಿಕೊಂಡಿದ್ದ ಚಿಟ್ಟದ ಮುನಿ ಸೇರಿದ್ದೇ ಎಳನೀರು ಕತ್ತರಿಸುವವನಿಂದ ಮಚ್ಚೊಂದನ್ನು ಕಿತ್ತುಕೊಂಡಿದ್ದೇ ಸರೋಜಮ್ಮನ ಮನೆಯಿಂದ ಹೊರಬಿದ್ದ ಮಾಸ್ತಿಯನ್ನು ಹೌಸಿಂಗ್ ಬೋರ್ಡ್ ತನಕ ಅಟ್ಟಿಸಿಕೊಂಡು ಹೋಗಿ ಕೊಚ್ಚಿ ಕೊಂದರು.

ಆಗ ವಿಜಯನಗರ ಪೊಲೀಸ್ ಠಾಣೆಗೆ ಎಸ್.ಐ. ಆಗಿದ್ದ ಬಲರಾಮ್ ಎದುರು ಬಂಡ ಮತ್ತು ವೆಂಕಟಾಚಲರ ಜೊತೆ ಸತ್ತಿ ಮತ್ತು ಕಂಠಿ ಎಂಬಿಬ್ಬರು ರೌಡಿಗಳು ಸರೆಂಡರ್ ಆಗಿ ಚಿಟ್ಟದ ಮುನಿ ಕೇಸಿನಿಂದ ಸಲೀಸಾಗಿ ತಪ್ಪಿಸಿಕೊಂಡ. ಬಂಡನ ಜೊತೆ ವೆಂಕಟಾಚಲನೂ ಎರಡು ವರ್ಷ ಜೈಲು ಕಳೆದ. ಆತ ಬಿಡುಗಡೆಯಾಗಿ ಬಂದ ಎಂಬ ಸುದ್ದಿ ಗೊತ್ತಾದದ್ದೇ ತಡ ಸಾಕ್ಷಾತ್ ಕೊತ್ವಾಲ್ ರಾಮಚಂದ್ರನೇ ತಿಮ್ಮೇನಹಳ್ಳಿಗೆ ಬಂದು 'ನೀನ್ಯಾಕೆ ನನ್ನ ತಂಡಕ್ಕೆ ಸೇರ್ಕೋಬಾರ್ದು?' ಎಂದು ಆಹ್ವಾನ ಕೊಟ್ಟಿದ್ದ. ಆ ಹೊತ್ತಿಗೆ ವೆಂಕಟಾಚಲನ ಖದರ್ರೇ ಹಾಗಿತ್ತು.

ಆದರೆ ವೆಂಕಟಾಚಲ ಮಾತ್ರ ಕೊತ್ವಾಲನ ಆಹ್ವಾನವನ್ನು ನಯವಾಗೇ ತಿರಸ್ಕರಿಸಿ ಕ್ರಮೇಣ ತನ್ನ ಪಾಡಿಗೆ ತಾನಿದ್ದು ರೌಡಿಯಿಸಂನ್ನೇ ತೊರೆದುಬಿಟ್ಟ. ಹಾಗಂಥ ಬಂಡ ಸುಮ್ಮನಿರಬೇಕಲ್ಲ; ಸಿಕ್ಕಾಪಟ್ಟೆ ರೇಸು ಹುಚ್ಚು, ಜೊತೆಗೆ ವಿಪರೀತ ಸ್ತ್ರೀಲೋಲ. ಮಾಸ್ತಿ ಸತ್ತಾಗಲೇ ಆತನ ಶ್ರೀರಾಂಪುರದ ಪ್ರಳಯಾಂತಕ ಶಿಷ್ಯರಾದ ಸಿದ್ಧ, ಚೋಟು, ರಾಜೇಶ, ಕಿಟ್ಟಿ, ಕರಿಯ, ಕಾಳ ಮತ್ತು ಶಿವಾ ಮುಂತಾದವರೆಲ್ಲ ಬಂಡನ್ನ ತೆಗೆದೇ ತೆಗೀತೀವಿ ಎಂದು ಶಪಥ ಮಾಡಿದ್ದು ಕೂಡ ಬಂಡನಿಗೆ ಗೊತ್ತಿತ್ತು. ಹಾಗಿದ್ದೂ ನಿರ್ಲಕ್ಷ ಮಾಡಿ ಯಶವಂತಪುರದ ಗೋಪಾಲ್ ಥಿಯೇಟರ್ ಹಿಂಭಾಗದ ಇಸ್ಪೀಟ್ ಅಡ್ಡೆಯೊಂದರಲ್ಲಿ ಮಾಸ್ತಿಯ ಶಿಷ್ಯರ ಕೈಗೆ ಸಿಕ್ಕು ಬರ್ಬರವಾಗಿ ಕೊಲೆಯಾದ.

ಬಂಡನ ಜೊತೆಗಿದ್ದ ಜನರಲ್ ಮಾದೇವ, ರೇಜರ್ ರಮೇಶ, ಅರುಳ್ ಮತ್ತು ರಾಜೇಂದ್ರ ಮುಂತಾದ ಸಣ್ಣ ಗಾತ್ರದ ರೌಡಿಗಳು ಆತನ ಹತ್ಯೆಯ ನಂತರ ಇದೇ ಎಂ.ಸಿ. ಲೇಔಟಿನ ಮತ್ತೊಂದು ಭಾಗದಲ್ಲಿದ್ದ ರಾಬರಿ ಸೋಮನ ಜೊತೆ ಸೇರಿಕೊಂಡರು. ಬಂಡನ ತಮ್ಮ ರಾಜನೇ ಮರಿಬಂಡನೆಂಬ ಹೆಸರಲ್ಲಿ ಅಲ್ಲಲ್ಲಿ ಹಾವಳಿಯಿಡುತ್ತಿದ್ದನಾದರೂ ತಿಮ್ಮೇನಹಳ್ಳಿ ಮಾತ್ರ ಇದ್ಯಾವುದಕ್ಕೂ ಸಂಬಂಧವೇ ಇಲ್ಲದಂತೆ ತನ್ನ ಪಾಡಿಗೆ ತಾನಿತ್ತು.

1982 ರ ಹೊತ್ತಿಗೆ ಪಕ್ಕದ ತಿಮ್ಮೇನಹಳ್ಳಿ ಕಾಲೋನಿಯಲ್ಲಿ ಗಿಡಿಗಿಡಿ ಕೃಷ್ಣ ಎಂಬ ಮತ್ತೊಬ್ಬ [illegible] ತಲೆ ಎತ್ತಿದ. ಆತ ವಿದ್ಯಾರ್ಥಿ ನಾಯಕ ದಿವಾಕರ ಹೆಗಡೆಯ ಶಿಷ್ಯ. ಈತನ ಜೊತೆ ಎಂ.ಸಿ. ಲೇಔಟಿನ ಪಾತಕಿ ರಾಬರಿ ಸೋಮನೂ ಕೈಜೋಡಿಸಿ ದಾಸರಹಳ್ಳಿ, ವಿಜಯನಗರ, ಹೌಸಿಂಗ್ ಬೋರ್ಡ್‌ಗಳಲ್ಲಿ ವಿಪರೀತ ಹಾವಳಿ ಮಾಡುತ್ತಿದ್ದಾಗಲೂ ಇದ್ಯಾವುದಕ್ಕೂ ಸಂಬಂಧವೇ ಇಲ್ಲದಂತೆ ತಿಮ್ಮೇನಹಳ್ಳಿಯಿತ್ತು.



ಮಾರೇನಹಳ್ಳಿ ಜಗ್ಗಿ

ಆದರೆ 1989ರ ಹೊತ್ತಿಗೆ ಪುಡಿ ರೌಡಿ ಅನಂತಿ ಎಂಬಾತ ಬಿನ್ನಿಪೇಟೆಯನ್ನು ಖಾಲಿ ಮಾಡಿ ತಿಮ್ಮೇನಹಳ್ಳಿಗೆ ಬಂದು ಬಾಡಿಗೆಗೊಂದು ಮನೆ ಹಿಡಿದ. ಈತ ತಿಮ್ಮೇನಹಳ್ಳಿಗೆ ವಲಸೆ ಬಂದಿದ್ದು ಕೂಡ ಎಲ್ಲಿ ಚಾಮರಾಜಪೇಟೆಯ ರೌಡಿ ಹುಚ್ಚನಾಗ ತನ್ನನ್ನು ಕತ್ತರಿಸಿ ಎಸೆಯುತ್ತಾನೋ ಎಂಬ ಭೀತಿಯಿಂದ. ಅದಕ್ಕೆ ಬೇರೆಯದೇ ಕಾರಣವಿತ್ತು. ಹುಚ್ಚನಾಗನ ಬಲಗೈಯಂತಿದ್ದ ಶಿವಾ ಆಲಿಯಾಸ್ ಶಿವರಾಜ ಎಂಬ ರೌಡಿಯನ್ನು ಇದೇ ಅನಂತಿ, ಗೂಳಿ ಸೋಮ, ಗೋಪಾಲ, ಮೆಂಟಲ್ ವಾಸ, ಕ್ಯಾತ ಮತ್ತು ಖದರ್ ಲೋಕಿಯ ಜೊತೆ ಸೇರಿ ಚುಚ್ಚಿ ಕೊಂದಿದ್ದ.

ಅಲ್ಲೀತನಕ ಗೋಲಿ ಆಡಿಕೊಂಡಿದ್ದ ತಿಮ್ಮೇನಹಳ್ಳಿಯ ಹುಡುಗರಿಗೆ ರೌಡಿಯಿಸಂನ ಹುಚ್ಚು ಹಿಡಿಸಿದ್ದೇ ಈತ. ಸದ್ಯ ಯಾವುದೋ ಸುಪಾರಿ ಕೊಲೆ ಕೇಸಿನಲ್ಲಿ ಶಿಕ್ಷೆಗೀಡಾಗಿ ಜೈಲಿನಲ್ಲಿರುವ ಈ ಅನಂತಿ ಕೌನ್ಸಿಲರ್ ರಂಗಪ್ಪನ ಮಗ ತಮ್ಮಯ್ಯ ಮತ್ತು ಆತನ ದಾಯಾದಿ ಗೋವಿಂದನನ್ನು ಜೊತೆ ಹಾಕಿಕೊಂಡು ಸುತ್ತಲಾರಂಭಿಸಿದ. ಆ ಹೊತ್ತಿಗೆ ತಿಮ್ಮೇನಹಳ್ಳಿ ಗೋವಿಂದ ಸೀಮೆಎಣ್ಣೆ ಗಾಡಿ ತಳ್ಳಿಕೊಂಡು ಬೀದಿಬೀದಿ ಸುತ್ತಿ ವ್ಯಾಪಾರ ಮಾಡಿಕೊಂಡಿದ್ದ. ಕೌನ್ಸಿಲರ್ ರಂಗಪ್ಪನವರಿಗೆ ರಾಗಿ ಮಿಷಿನ್ ಇತ್ತು. ದಿವಾಕರ ಹೆಗಡೆಯನ್ನು ಕೊಂದಿದ್ದ ಮತ್ತೊಬ್ಬ ರೌಡಿ ತಂಬು ಎಂಬಾತನಿಗೆ ಈ ಅನಂತಿ ಶಿಷ್ಯ. ಮೊದಮೊದಲು ತಮ್ಮಯ್ಯ ಮತ್ತು ಗೋವಿಂದ ಒಟ್ಟೊಟ್ಟಿಗೇ ಅನಂತಿ ಜೊತೆ ಸುತ್ತಾಡಿಕೊಂಡಿದ್ದರು.



ಗಿಡಿಗಿಡಿ ಕೃಷ್ಣ

ಪಕ್ಕದಲ್ಲೇ ನ್ಯೂಪಬ್ಲಿಕ್ ಸ್ಕೂಲಿತ್ತು. ಅಲ್ಲಿನ ಎಸ್ಸೆಲ್ಸಿ ಹುಡುಗಿಯರನ್ನು ಕಿಚಾಯಿಸುವುದಕ್ಕೆಂದೇ ಮಾರೇನಹಳ್ಳಿ, ತಿಮ್ಮೇನಹಳ್ಳಿ, ಕಾಮಾಕ್ಷಿಪಾಳ್ಯದ ಪಡ್ಡೆ ಹುಡುಗರು ಬಂದು ಹಾವಳಿಯಿಡುತ್ತಿದ್ದರು. ಹಾಗೇ ನ್ಯೂಪಬ್ಲಿಕ್ ಸ್ಕೂಲ್‌ಗೆ ಬರುತ್ತಿದ್ದ ಪಡ್ಡೆಗಳ ಪೈಕಿ ತೀರ ವಿಚಿತ್ರ ಸ್ವಭಾವದಂತಿದ್ದವನು ಮಾರೇನಹಳ್ಳಿ ಜಗ್ಗ. ಆತ ಯಾರೋ ಎಸ್ಸೆಲ್ಸಿ ಓದುತ್ತಿದ್ದ ಹುಡುಗಿಯೊಬ್ಬಳಿಗೆ 'ಡವ್' ಹೊಡೆಯುತ್ತಿದ್ದ. ಜಗ್ಗನಿಗೆ ತಮ್ಮಯ್ಯ ಚಡ್ಡಿ ದೋಸ್ತು.

ಅನಂತಿಯ ಸಹವಾಸಕ್ಕೆ ಬಿದ್ದು ಯಾಪ್ಯಾವುದೋ ಏರಿಯಾಕ್ಕೆ ನುಗ್ಗಿ ದಾಂಧಲೆ ಮಾಡೋದು, ಹುಚ್ಚ ನಾಗನನ್ನು ಹೊಡಿತೀವಿ ಎಂದು ಕಂಡಕಂಡಲ್ಲಿ ಹಾವಳಿಯಿಡೋದು ಶುರು ಹಚ್ಚಿಕೊಂಡ ತಿಮ್ಮೇನಹಳ್ಳಿಯ ಹುಡುಗ ಪ್ರತಿನಿತ್ಯ ಕುಡಿತ, ಮಟನ್ ಊಟಕ್ಕೆ ಅಭ್ಯಾಸವಾಯಿತು. ಸಣ್ಣಪುಟ್ಟ ಡೀಲುಗಳಿಗೆ ಕೈಯಿಟ್ಟು ಚಿಲ್ಲರೆ ಖಮಾಯಿಸುವುದೂ ಮಾಮೂಲಾಯಿತು. ಹುಡುಗರು ಎಲ್ಲಕ್ಕೂ ಸೈ ಅಂತ ಹೊರಜಗತ್ತಿಗೆ ಗೊತ್ತಾದರೆ ಕೇಸುಗಳು ಅವಾಗಿಯೇ ಹುಡುಕಿಕೊಂಡು ಬರುತ್ತವೆ. ಹಾಗೇ ಸುಪಾರಿ ಕೊಲೆ ಕೇಸೊಂದನ್ನು ಆ ಕಾಲಕ್ಕೆ ಹೆಸರಾಂತ ಗ್ರಾನೈಟ್ ಉದ್ಯಮಿಯಾಗಿದ್ದ ರಿಚರ್ಡ್ಸ್ ಅನಂತಿಯ ಮೂಲಕ ತಮ್ಮಯ್ಯನಿಗೆ ಕೊಟ್ಟ. ರಿಚರ್ಡ್ಸ್ ಸಂಬಂಧಿಯೊಬ್ಬಳನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದ ಲಂಪಟನೊಬ್ಬನನ್ನು ತಮ್ಮಯ್ಯ, ಹರಿ, ಲೀಟ್ರು ಮೋಹನ ಮುಂತಾದವರು ಸದಾಶಿವನಗರದಲ್ಲಿ ಅಟ್ಟಾಡಿಸಿ ಕೊಂದರು.

ಈ ಹತ್ಯೆಯಲ್ಲಿ ಭಾಗವಹಿಸಬೇಕಿದ್ದ ಗೋವಿಂದ ಹೊರಡುವ ಹೊತ್ತಿಗೆ ಕುಡಿದು ಮಲಗಿಬಿಟ್ಟಿದ್ದರಿಂದ ತಂಡ ಆತನನ್ನು ಬಿಟ್ಟು ಹೋಗಿ ಕೆಲಸ ಮುಗಿಸಿತ್ತು. ಸುಪಾರಿ ಯಶಸ್ವಿಯಾಗಿತ್ತಾದರಿಂದ ಗ್ರಾನೈಟ್ ಕುಳ ರಿಚರ್ಡ್ಸ್‌ನಿಂದ ತಮ್ಮಯ್ಯನಿಗೆ ಅಷ್ಟಿಷ್ಟು ದುಡ್ಡು ಬಂದಿತ್ತು. ತನ್ನನ್ನು ಬೇಕಂತಲೇ ಕೊಲೆಗೆ ಕರೆದೊಯ್ದಿಲ್ಲ ಎಂದು ತಮ್ಮಯ್ಯನ ವಿರುದ್ಧ ಗೋವಿಂದ ಮುನಿಸಿಕೊಂಡ. ಅದೇ ಹೊತ್ತಿಗೆ ಮತ್ತೊಂದು ಯಡವಟ್ಟಾಗಿತ್ತು. ಮಾರೇನಹಳ್ಳಿಯ ಕೇಬಲ್ ಶಿವರಾಜನಿಗೂ, ಜಗ್ಗನಿಗೂ ಆ ಹೊತ್ತಿಗಾಗಲೇ ಹೊಡೆದಾಟವಾಗಿತ್ತು. ಶಿವರಾಜನಿಗೆ ಗೋವಿಂದ ಚಡ್ಡಿದೋಸ್ತು. ಹೇಗೂ ತನ್ನ 'ಡವ್' ನೋಡಕ್ಕೆ ಅಂತ ಜಗ್ಗ ತಿಮ್ಮೇನಹಳ್ಳಿ ನ್ಯೂಪಬ್ಲಿಕ್ ಸ್ಕೂಲಿಗೆ ಬರುತ್ತಾನೆ. ಆತನ ಜೊತೆ ಮೂರ್ನಾಲ್ಕು ಹುಡುಗರೂ ಇರ್ತಾರೆ. ಇದೇ ಟೈಮು ಕಾದು ಹುಡುಗಿಯ ಕಡೆಯವರು ಅಂತ ಹೇಳಿಕೊಂಡು ಜಗ್ಗನಿಗೆ ನಾಲ್ಕು ಬಾರಿಸಿಬಿಡಿ ಎಂದು ಕೇಬಲ್ ಶಿವರಾಜ ಗೋವಿಂದನಿಗೆ ಪ್ಲಾನ್ ಹಾಕಿ ಕೊಟ್ಟ.

ಇಷ್ಟಾಗಿದ್ದೇ ತಡ ಗೋವಿಂದ, ಸೂರಿ, ಅರುಣ, ರವಿ ಮುಂತಾದವರು ನ್ಯೂಪಬ್ಲಿಕ್ ಸ್ಕೂಲ್ ಗ್ರೌಂಡಿನಲ್ಲಿ ಕಾದಿದ್ದೇ ತನ್ನ ಹುಡುಗಿಯನ್ನು ನೋಡಲು ಬಂದಿದ್ದ ಜಗ್ಗನನ್ನು ಹಿಡಿದು ಸಮಾ ಬಾರಿಸಿಬಿಟ್ಟರು. ಅಷ್ಟಕ್ಕೂ ಆ ಹೊತ್ತಿಗೆ ಈ ಹುಡುಗರ ವಯಸ್ಸಾದರೂ ಎಷ್ಟಿತ್ತು?


ಹೆಚ್ಚೆಂದರೆ ಹದಿನೆಂಟೋ ಇಪ್ಪತ್ತೋ ಇರಬೇಕು. ಯಾವ ಹುಡುಗರು ತಾನೇ ಈ ವಯಸ್ಸಿಗೆ ಕಿತ್ತಾಡೋಲ್ಲ. ಕ್ರಿಕೆಟ್ ಜಗಳ, ಗೋಲಿ ಜಗಳದಂತೆ ಈ ಹುಡುಗಿ ವಿಷಯದ ಕಚ್ಚಾಟವೂ ಹಾಗೇ ಮುಗಿದು ಹೋಗಿದ್ದರೆ ಮುಂದೊಮ್ಮೆ ತಿಮ್ಮೇನಹಳ್ಳಿ ಏನಾಗುತ್ತಿತ್ತೊ. ಆದರೆ ತಿಮ್ಮೇನಹಳ್ಳಿಗೆ ಯಾವ ಶಾಪವಿತ್ತೊ! ಆತನಕ ಅಣ್ಣತಮ್ಮಂದಿರಂತಿದ್ದ ತಮ್ಮಯ್ಯ ಮತ್ತು ಗೋವಿಂದನ ಮಧ್ಯೆ ಮಾರೇನಹಳ್ಳಿ ಜಗ್ಗ ದೊಡ್ಡದೊಂದು ಬಿರುಕಾಗಿ ಅವತರಿಸಿದ್ದ.

ಜಗ್ಗನಿಗೆ ಒದೆಕೊಟ್ಟ ಗೋವಿಂದನನ್ನು ಮೊದಲು ಅಟಕಾಯಿಸಿಕೊಂಡವನು ಜಗ್ಗನ ಬಲಗೈ ಬಂಟನಂತಿದ್ದ ತಿಮ್ಮೇನಹಳ್ಳಿ ಕಾಲೋನಿಯ ಹರಿ. ಆತನೂ ತಮ್ಮಯ್ಯನ ಚಡ್ಡಿದೋಸ್ತಿ. ಹರಿಯ ಜೊತೆ ಕುಮಾರ್, ಅನಂತಿ, ಅತ್ತಿಗುಪ್ಪೆಸ್ವಾಮಿ, ಹನುಮಂತನಗರದ ಕೋಳಿ ರಾಜೇಶ ಮುಂತಾದ ಕಿಡಿಗೇಡಿ ಹುಡುಗರ ಹಿಂಡೇ ಗೋವಿಂದನ ವಿರುದ್ಧ ಕತ್ತಿ ಮಸೆಯಲಾರಂಭಿಸಿತು. ಮತ್ತು ಈ ಸಣ್ಣ ಕಿಡಿಯೇ ಇಡೀ ತಿಮ್ಮೇನಹಳ್ಳಿಯ ಸರ್ವನಾಶಕ್ಕೆ ಮುನ್ನುಡಿಯಾಗಿತ್ತು.

(ಮುಂದುವರೆಯುತ್ತದೆ)

ಸಿರಿಗನ್ನಡಂ ಗೆಲ್ಗೆ; ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ-ಬಿ.ಎಂ.ಶ್ರೀ

ನಿಜವಾಗ್ಲೂ ಗತಿಗೆಟ್ಟೋೋರು ಅಂದ್ರೆ ಇವುರೆ ಕಣೊ



ವಾಟಿಸ್ಸೆ ತಲೆಕಂಡ ಕೂಡಲೆ ಜುಮ್ಮಿ ತರಾಟೆಗೆ ತೆಗೆದುಕೊಂಡಳು.

"ಅಲ್ಲಾ ಕಂಡ್ರ ಶಿವೊಗ್ಗದಲ್ಲಿ ಏನೇನೊ ನ್ಯಡಿತಂತೆ. ದಿನ ಪೇಪ್ರಲ್ಲಿ ಟಿವಿಲ್ಯಲ್ಲ ಬತ್ತಾ ಅದಂತೆ. ನೀನು ಮಾತ್ರ ಏನೂ ಹೇಳಲೇಯಿಲ್ಲ ಯಾಕ್ಲ?" ಎಂದಳು.

"ನೋಡಕ್ಕ ನಾನು ಯಾವುದ್ಕೆ ಎಷ್ಟು ಇಂಪಾರ್‌ಟೆಂಟ್ ಕೊಡಬೇಕೊ ಅಷ್ಟನೆ ಕೊಡದು. ನೆಗ್‌ಲೆಟ್ ಮಾಡೋ ಅಂತ ಸುದ್ದಿಯ ಯಾಕೇಳ್ಳಿ, ನೀನೆ ಹೇಳು?" ಎಂದ ವಾಟಿಸ್ಸೆ.

"ಶಿವೊಗ್ಗದಲ್ಲಿ ಏನ್ನಡಿತೊ ಏನೊ ಇಲ್ಲಿ ಬಜೆಪಿವು ಚಂದ್ರುಸೇಕ್ರ ಪಟೇಲ ಅನ್ನೋನು ರಾಜೀನಾಮೆ ಕೊಡಬೇಕು ಅಂತರಲ್ಲ ಯಾಕ್ಲ?"

"ಯಾರಕ್ಕ ಅಂಗಂದೋರು?"

"ಆ ಕುಳ್ಳೆಗೌಡನುಡುಗ ಅನಂತ."

"ಆ ಬಡ್ಡೆತ್ತುದ್ಕೆ ಸಾಯಿತ್ಯ ಅಂದ್ರೇನು ಮದ್ಲೆ ಗೊತ್ತಿಲ್ಲ, ಅದರ ಸಮ್ಮೇಳನ ಗೊತ್ತಿಲ್ಲ, ಅವುನಿಗ್ಯಾಕಂತೆ ಚಂದ್ರಶೇಖರನ ರಾಜೀನಾಮೆ?" ಎಂದ ಉಗ್ರಿ.

"ಅವುನೇನೊ ಕುಮಾರಸ್ವಾಮಿಗೂ ಎಡೂರಪ್ಪನಿಗೂ ಅವುಮಾನ ಮಾಡಿದನಂತೆ."

"ಅದವುಮಾನಲ್ಲ ಕಣಕ್ಕ ಅವುರ ಯೇಗ್ತಿಗೆ ತಕ್ಕಂಗೆ ನ್ಯಡಿಸಿಗಂಡವುರೆ."

"ಯೇಗ್ತಿಗೆ ತಕ್ಕಂಗೆ ಅಂದ್ರೆ ಏನರ್ಥ?"

"ಈಗ ಕುಮಾರಸ್ವಾಮಿಗೂ ಸಾಯಿತ್ಯಕೂ ಏನೇನೂ ಸಮಂಧಯಿಲ್ಲ. ಎಡೂರನಿಗೂ ಸಾಯಿತ್ಯಕೂ ಯಣ್ಣೆ ಸೀಗೆಕಾಯಿ ಇದ್ದಂಗೆ. ಅವುನು ಜಸ್ಟ ಲೈಕೆ ಆಕ್ಸಿದ್ದಂಗೆ (ox). ಇಂತವರ ಸಾಯಿತ್ಯ ಸಮ್ಮೇಳನ ಮಾಡೋನು ಏನು ಕೇಳಬೇಕೂ?"

"ಯಾರ್ನ ಕರಿಬೇಕು ಯಾರ್ನ ಬುಡಬೇಕು ಅಂತ ಕೇಳಬೇಕಾಗಿತ್ತಂತೆ."

"ಕುಮಾರಸ್ವಾಮಿ ಕೇಳಿದ್ರೆ ನಮ್ಮಪ್ಪ ಉದ್ಘಾಟನೆ ಮಾಡ್ತನೆ ನಾನು ಸಮಾರೋಪ ಮಾಡ್ತಿನಿ ಅನ್ನೊನು. ಇನ್ನು ಎಡೂರನ್ನ ಕೇಳಿದ್ರೆ ಆ ಗೌರಿ ಲಂಕೇಶ್ ಬದ್ಲಿಗೆ ನಮ್ಮ ಶೋಭ ಕರಂದ್ಲಾಜೆ ಕರಿರಿ ಅನ್ನೋನು. ಇಂಥೋರ ಕೇಳಿ ಸಾಯಿತ್ಯ ಸಮ್ಮೇಳನ ಮಾಡಕ್ಯಾದತೇನಕ್ಕ?"

"ಅದ್ಕೆ ಎಡೂರಪ್ಪ ಸಿಟ್ಟಾಗಿ ಇನ್ನೊಂದು ಮಾಡ್ತಿನಿ ಅಂತ ವಂಟಿದ್ದನಂತೆ" ಎಂದ ಉಗ್ರಿ.

"ಅದು ಸಾಯಿತ್ಯ ಸಮ್ಮೇಳನ ಅಲ್ಲ ಕಣೊ ಬಜೆಪಿ ಉತ್ಸವ ಮಾಡ್ತನಂತೆ. ಮಾಡಿಕಳ್ಳಿ, ಅದಲ್ಲ ನನ್ನ ಅಬ್ ಜಕ್ಸನ್ನು ಸಾಯಿತ್ಯ ಸಭೆಗೂ, ಜಾತಿಪಾತಿ ಅಂತ ಜಗಳ ತಂದು ಮಡಗೋರಿಗೂ ಏನು ಸಮಂಧ ಅಂತ?"

"ಅಂಗರೆ ಜಾತಿ ಬುಟ್ಟೋರು ಸಾಯಿತ್ಯ ಸಮ್ಮೇಳನ ಮಾಡ್ತರೆ ಅನ್ನು?"

"ಅದೂ ಅಲ್ಲ, ನಾನೇಳದೇನಪ್ಪ ಅಂದ್ರೆ, ಈ ಬಜೆಪಿಗಳು ಸಾಬುರ ಕಂಡ್ರೆ ಸಯಿಸದಿಲ್ಲ, ಕೆಳಜಾತಿ ಕಂಡ್ರೆ ದ್ವೇಷ ಮಾಡ್ತವೆ. ಒಟ್ಟನಲ್ಲಿ ಮನುಷ್ಯ ದ್ವೇಷಿಗಳು. ಈ ಮನುಷ್ಯ ದ್ವೇಷಿಗಳನ್ನು ಸಾಯಿತ್ಯ ಸಾರಾ ಸಗಟಾಗಿ ರಿಜೆಕ್ಟ್ ಮಾಡ್ತದೆ. ಇಂತ ನೀವು ಗೌರಿ ಲಂಕೇಶ್ ಸಾಯಿತ್ಯ ಸಭೆಗೆ ಬರಬಾರ್ದು ಆ ಕಲ್ಕುಳಿ ವಿಠಲ ಹೆಗಡೆ ಬರಬಾರ್ದು ಅಂದ್ರೆ ಸಾಯಿತಿಗಳು ನಗಾಡದಿಲವೇನೊ?"

"ಗೌರಿ ಲ್ಯಂಕೇಸ್ ಅಂದ್ರೆ ಲ್ಯಂಕೇಸನ ಮಗಳೇನ್ಲ?" ಎಂದ ಸೀರ

"ಊ ಚಿಗಪ್ಪ."

"ಅವುಳ್ಯಾಕ್ ಸಾಯಿತಿ ಸಮ್ಮೇಳನಕೆ ಹೋಗಬಾರ್ದು? ಅವುರಪ್ಪನೂ ಸಾಯಿತಿಯಲವೆ?"

"ಅವುರಪ್ಪ ಸಾಯಿತಿ ಸರಿ. ಇವುಳು ನಕ್ಸಲೇಟರ್ ಜ್ವತಿಗೆ ಮಾತಾಡ್ತಳಂತೆ."

"ಇಸಿಸಿ, ಪೇಪ್ರನೋರು ಯಲ್ಲಾರ ಜ್ವತೆಲೂ ಮಾತಾಡ್ತರಪ್ಪ."

"ಅದೆಯಪ್ಪ, ಅನಾಮತ್ತು ಮಸೀದಿ ಕೆಡಗಿದೋರ ಜ್ವತೆ ಈ ಬಡ್ಡೆತ್ತವು ಮಾತಾಡದಿಲವೆ. ಅದ್ನೆ ಮುಂದಿಟಕಂಡು ಉಳದ ಸಾಯಿತಿಗಳು ಈ ಮನಿಮುರುಕ್ರು ಸಾಯಿತ್ಯ ಸಮ್ಮೇಳನದಲ್ಲಿ ಕಾಣ್ಸಿಗಂಡ್ರೆ ನಾವು ಬರದಿಲ್ಲ ಅಂದಿದ್ರೆ ಆಗ ಇವುರ ಮಾನ ಏನಾಯ್ತಿತ್ತೂ" ಎಂದ ಉಗ್ರಿ.

"ಅಕ್ಚುವಲಿ ಸುಮಾರು ಜನ ಸಾಯಿತಿಗಳು ಅದ್ಕೆ ಹೋಗಲಿಲವಂತೆ ಕಣೊ ಉಗ್ರಿ. ಅಲ್ಲಿಗೋದ್ರೆ ಈ ಎಡೂರ ಈಶ್ವರ ಶಂಕರಮೂರ್ತಿ ಮಕ ನೋಡಬೇಕಾಯ್ತದೆ ಅಂತ ಸುಮಾರು ಜನ ಸಾಯಿತಿಗಳು ಶಿವೊಗ್ಗಕ್ಕೆ ಹೋಗಲೇಯಿಲವಂತೆ. ಇದಕಿಂತ ಅವುಮಾನಬೇಕೆ ಅವುಕೆ?"

"ಅದೇನು ಮಾತಾಡ್ತಿರಿ ಬುದ್ದಿಲ ಆಟೊತ್ತಿಂದವ. ಆ ದ್ಯಾವೇಗೌಡುನ್ನ ಪಾರ್ಟಿಯಿಂದ ಯಾರೊ ತಗದಾಕಿದರಂತೆ ಅದೇಳಿ?" ಎಂದ ಕಾಳಮಾವ.

"ಓಹೊ ನಮ್ಮ ದ್ವಡಪ್ಪನಿಗೆ ದ್ಯಾವೇಗೌಡನ ಸುದ್ದಿ ಬೇಕಾಗ್ಯದೆ. ನೀನೇನು ಹೆದರಬ್ಯಾಡ ದ್ವಡಪ್ಪ ನಿಮ್ಮ ದ್ಯಾವೇಗೌಡ್ರ ಆಕ್ಟಿಂಗು ಒಳ್ಳೆ ಕ್ಲೈಮಾಕ್ಸ್ ಲೆವೆಲ್ಲಿಗೆ ಬಂದದೆ, ಡೋಂಟು ವರಿ" ಎಂದ ವಾಟಿಸ್ಸೆ.

"ಅದೇನು ಸರಿಯಾಗೇಳ್ಳ?"

"ನಿಮ್ಮ ದ್ಯಾವೇಗೌಡನ ಪಾರ್ಟಿ ಇಲ್ಲಿಂದ ಡಿಲ್ಲಿಗಂಟ ಅದೆ ಅಂತ ನಮಿಗೆ ಗೊತ್ತೇಯಿರಲಿಲ್ಲ ದ್ವಡಪ್ಪ, ಆ ಡಿಲ್ಲಿಲ್ಲಿರೋರಿಗೆ ಇವುನು ಏನೊ ನಮ್ಮುಡುಗ ಆ ಬಜೆಪಿಗಳ ಜೊತೆ ಸೇರಿಕಂಡು ತೆಪ್ಪು ಮಾಡ್ಯದೆ ಅದ್ಕೆ ನಾನೆ ಅವುನು ಅವುನ ಜ್ವತೆ ಇರೋರ ಮನೆಯಿಂದ ವರಗಾಕಿದ್ದಿನಿ ಅಂತ ಸುಳ್ಳೇಳಿ ಕಂಡೇ ಬಂದ."

"ಸುಳ್ಯಾಕೇಳ್ಯನು ನ್ಯಡಿದಿದ್ದೆ ಅದಲವೆ?"

"ಸರಿ ನಿನ್ನ ಮಾತಿನಂಗೆ ಆಗ್ಲಿ. ಆದ್ರೆ ದ್ಯಾವೇಗೌಡ ಮಾಡಿದ್ದು ಡ್ರಾಮ ಅಂತ ಅವುರಿಗೂ ಗೊತ್ತಾಯ್ತಂತೆ. ಅದ್ಕೆ ಅವುರು ಇವುನನ್ನ ಪಾರ್ಟಿಯಿಂದ ತಗದಾಕಿದ್ರು, ಅದ್ಕು ಮದ್ಲು ಇವುನೇ ಅವುರ ತಗದತ್ತಗೆ ಯಸ್ದಿದ್ದ."

"ಅಲ್ಲಿಗೇನಾದಂಗಾಯ್ತು?"



"ಏನೂ ಆಗಿಲ್ಲ. ಮನೆ ಯಾರಿಗೆ ಸೇರಬೇಕು ಸಿಂಬಲ್ಲು ಯಾರಿಗೆ ಸೇರಬೇಕು ಅನ್ನೊ ಜಗಳ ಕಂಟಿನ್ಯೂ ಆಯ್ತದೆ. ಈಗ ಇಲ್ಲಿ ಸಿಂಧ್ಯಾ ನಿಮ್ಮ ದ್ಯಾವೇಗೌಡ್ರ ವಿರುದ್ಧ ಹೋರಾಡ್ತನಂತೆ."

"ಅಂಗರವುನೂ ದ್ಯಾವೇಗೌಡ್ರ ವಿರುದ್ಧ ಆದ್ನೆ?"

"ದ್ಯಾವೇಗೌಡ್ರ ಜ್ವತೆ ಯಾರಿದ್ದರು ದ್ವಡಪ್ಪ? ಯಲ್ಲಾ ಆಗ್ಲೆ ಗೂಡಾರ ಕೂದು ಓಡಕ್ಕೆ ತಯಾರಾಗಿದ್ರಂತೆ. ಅವುರನ್ನೆಲ್ಲ ಹಿಡಿದು ತಗಂಡೋಗಿ ಅದೆಲ್ಲಿ ಕೂಡಾಯ್ಕಂಡಿದ್ದು ಕುಡಿಸಿ ತಿನ್ನಿಸಿ ಸ್ಯೆಟು ಕೊಟ್ಟು ಸೂಟು ಕೇಸು ಕೊಟ್ಟು ಕರಕಂಡು ಬರೋ ವಿಜ... ಡಾಗ್ಯದೆ."

"ಜೆಡಿಎಸ್ ಯಮ್ಮೆಲ್ಲೆಗಳಿಗಂತು ಹಬ್ಬ ಕಣ... ವಾಟಿಸ್ಸೆ" ಎಂದ ಉಗ್ರಿ.

"ನಿಜ ಕಣೊ ಅದೇನು ಪುಣ್ಯ ಮಾಡಿ ಶಾಸಕ... ಗಿದ್ರೊ ಯದೆಮ್ಯಾಗಲ ಬ್ಯಣೆ ಕರಗದಂಗೆ ಆರಾಮ... ಸುಖವಾಗ್ಯವುರೆ. ಯಮ್ಮೆಲ್ಲೆಗಳು ಇಷ್ಟು ಸುಖವಾ... ಯಾವಾಗ್ಲೂ ಇರಲಿಲ್ಲ ನಾನು ಕಂಡಂಗೆ."

"ಅದೆ ಜೆಡಿಎಸ್‌ನಿಂದ ವರಗಿರೋರು ಕತೆ ಬ್ಯಾಡ..."

"ಅದರ ಸುದ್ದಿ ಯಾಕೇಳ್ತಿ, ಇತ್ತಗಿ ಕೈಲಿ ಕಾಸಿ... ಅಧಿಕಾರಿಗಳು ಹೇಳಿದ ಮಾತ ಕೇಳ್ತಯಿಲ್ಲ, ಪಾ... ಅವುರಗೋಳ ಬ್ಯಾಡ ಕಣೊ" ಎಂದು ವಾಟಿಸ್ಸೆ ಕನಿ... ತೋರಿದ.

"ರೂರಲ್ ಯಲಕ್ಸನ್ನಲ್ಲಿ ಬಜೆಪಿ ಜ್ವತೆ ಸೇರದ... ಅಂದವುನೆ ದ್ಯಾವೇಗೌಡ?" ಎಂದ ಉಗ್ರಿ.

"ಬಜೆಪಿಲಿ ದ್ಯಾವೇಗೌಡರತ್ರ ಬರೊ ಜನಿರವಾಗ ಇನ್ನ ಅವುರ ಜ್ವತೆ ಯಾಕ್ ಸೇರಿಕತ್ತನೊ?"

"ನಿಜವಾಗ್ಲೂ ಗತಿ... ಟ್ಟೋೋರು ಅಂದ್ರೆ ಈ ಬಜ... ಗಳು ಕಣೊ ವಾಟಿಸ್ಸೆ."

"ಎಜ್ಜಾಟ್ಲಿ ಕರಟ್ ಕಣ... ಎಂಭತ್ತು ಜನ ಎಮ್ಮೆಲ್ಲೆ... ಮಡಿಕಂಡು ಕೇವಲ ಮು... ತ್ಯೆದು ಜನ ಎಮ್ಮೆಲ್ಲೆ... ಪಾರ್ಟಿಯೋರು ಕೊಟ್ಟ... ಈಸಗತ್ತವೆ, ಅವುಮಾನ ಸಯ... ತವೆ, ಬಾ ಅಂದ್ರೆ ಬತ್ತವೆ, ಬು... ಅಲ್ಲಾಡುಸ್ತವೆ. ಥೂ ಅವುರ... ರಾಜಕಾರಣ ಅನ್ನಕ್ಯಾದತೇ... ಉಗ್ರಿ."

"ದ್ಯಾವೇಗೌಡ್ರು, ಇ... ಅವುರ ಯಂತ್ಯಂತ ಆಟ ಆ... ಸ್ತನೆ ನೋಡ್ತಯಿರು."

"ಏನಾರ ಆಟ ಆಡುಸ್ಲಿ, ಆ ಎಡೂರಪ್ಪ ಅ... ಯಡವಟ್ಟನ್ನು ಮುಖ್ಯಮಂತ್ರಿ ಮಾಡದೆವೋದ್ರೆ ಸಾ... ಕಣೊ. ಯಾಕೆ ಅಂದ್ರೆ, ಸರಸ್ವತಿ ಸಭೆಗೆ ಗಲ... ಮಾಡೋರ ನುಗುಸ್ತನೆ ಅಂದ್ರೆ ಇಟೀಸ್ ಸೇಂ ಅವರ್ ಕನ್ನಡ ಲಿಟರೇಚರ್ ಕಲ್ಚರ್."

-ಬಿ. ಚಂದ್ರೇಗ...

Zero Hour ಮುನ್ನಿ

1. 'ದೇವೇಗೌಡರಿಗೆ ಬಿಜೆಪಿ ಟಾಂಗ್': ಸುದ್ದಿ
   - a) ಚೆಡ್ಡಿಗಳು ಟಾಂಗ್ ಅಂದ್ರೆ ಲಾಂಗ್ ಎತ್ತಿಕೊಳ್ತಾರೆ ಗೌಡ್ರು
   - b) ಗೌಡ, ಚೆಡ್ಡಿಗಳು ಕನ್ನಡಿಗರಿಗೇ ಟಾಂಗ್ ಕೊಡ್ತಾ ಇರೋದು ಸುದ್ದಿನೇ ಆಗಲ್ವೆ....
   - c) ಟಾಂಗ್ ಅಲ್ಲ; ಇದು ಕಳ್ಳರ ಸಾಂಗು, ಡಿಂಗ್‌ಡಾಂಗು
   - d) ಈ ಪಡಪೋಶಿ ಸರ್ಕಾರಕ್ಕೆ ನಾವ್ಯಾವಾಗ ಟಾಂಗ್ ಕೊಡೋದು
2. ಕೈಗಾರಿಕಾ ಒಕ್ಕೂಟದಿಂದ ಯುಪಿಎ ಸರ್ಕಾರಕ್ಕೆ ಹತ್ತಕ್ಕೆ ಆರೂವರೆ ಮಾರ್ಕ್ಸ್ ಅಂತೆ?
   - a) ಒಂದ್ ಸ್ಲಾಟು ಟಿಟ್ ಹಾಕದ ಈ ಕೈಗಾರಿಕೋದ್ಯಮಿಗಳ್ಯಾರು ಮಾರ್ಕ್ಸ್ ಕೊಡಲು...
   - b) ಕೈಗಾರಿಕೋದ್ಯಮಿಗಳ ಮುಂದೆ ಬಾಗಿ ನಿಂತಿರುವ ಯುಪಿಎ ಸರ್ಕಾರ ಎಂಬ ಮನೆಹಾಳ ವಿದ್ಯಾರ್ಥಿಗೆ zero hour ನಲ್ಲಿ zero ಮಾರ್ಕ್ಸ್
   - c) ಈ ಕೈಗಾರಿಕಾ ಒಕ್ಕೂಟದವರು ಬುದ್ಧದೇವರ ಮಾರ್ಕ್ಸಿಸ್ಟ್ ಸರ್ಕಾರಕ್ಕೆ ಸ್ಪೆಷ್ ಮಾರ್ಕ್ಸ್ ಕೊಟ್ಟಿದ್ದಾರೇನೊ...
   - d) Any how, ಈಗ ಮಾರ್ಕ್ಸ್‌ಗಳೆಲ್ಲ ಕೈಗಾರಿಕಾ ಒಕ್ಕೂಟದವರ ಕೈಲಿ ಇವೆ ಅಂದಂಗಾಯ್ತು.
3. ಗೋಮಾಂಸ ತಿಂದಿದ್ದಕ್ಕೆ ರವಿಶಾಸ್ತ್ರಿಯ ಮೇಲೆ ಬ್ರಾಹ್ಮಣ ಭಜರಂಗಿಗಳ ಕೇಸ್ ಅಂತೆ?



   - a) ಭಜರಂಗಿಗಳು ಗೋವಿನ ತರಹ ಮೇವು ತಿಂತಾವೇನೋ....
   - b) ತಲೆ ತಿನ್ನೋ ಬ್ರಾಹ್ಮಣ ಭಜರಂಗಿಗಳ ಪ್ರಕಾರ ದತ್ತಾತ್ರೇಯನ ನಾಯಿ ತಿನ್ನಬಹುದೆ?
   - c) ಈಗ್ಲಾದ್ರೂ ತಲೆಮಾಂಸ ತಿನ್ನೋ ಶೂದ್ರ ಭಜರಂಗಿಗಳಿಗೆ ಬುದ್ಧಿ ಬರುತ್ತಾ...
   - d) ಪುಳಿಯೊಗರೆ ತಿನ್ನುವ ಜಾವಗಲ್ ಶ್ರೀನಾಥನಿಗೆ 'ಭಾರತ ರತ್ನ' ಕೊಡಿ ಅಂದಿಲ್ಲವಲ್ಲ...
4. 'ಪಶ್ಚಿಮ ಬಂಗಾಳದಲ್ಲಿ ಕೃಷಿ ಅಭಿವೃದ್ಧಿ ಪೂರ್ತಿ ಆಗಿದೆ. ಈಗ ಕೈಗಾರಿಕಾಭಿವೃದ್ಧಿ ಕಡೆ ಗಮನ ನೀಡಬೇಕು'-ಕನ್ನಡ ಕಾಮ್ರೇಡ್. ಕಾಮೆಂಟ್ ಮಾಡಿ
   - a) ಹೌದ್ಹೌದು, ಅಲ್ಲಿಯ ರೈತರೀಗ ಮಿಲೇನಿಯರ್ಸ್!
   - b) ಅಲ್ಲಿ ಪೂರ್ತಿಯಾಗಿರೋದು ಕೃಷಿ ಅಭಿವೃದ್ಧಿಯಲ್ಲ; ಬ್ರಾಹ್ಮಣ ಕಾಮ್ರೇಡ್‌ಗಳ ಅಭಿವೃದ್ಧಿ
   - c) ಬುದ್ಧ ದೇವರಿಗೆ `business man of the year' ಪ್ರಶಸ್ತಿ ಕೊಡ್ತಾರಂತೆ ಎಕನಾಮಿಕ್ ಟೈಮ್ಸ್‌ನವರು
   - d) ಸಿಂಗೂರೀಗ ನುಂಗಣ್ಣರ ತುತ್ತಾಗಿ 'ಐಕ್ಯರಂಗ'ದಲ್ಲಿ ಚರ್ಚೆ ನಡೆಸಿದ್ದಾರೆ ಕನ್ನಡ ಕಾಮ್ರೇಡ್‌ಗಳು...
5. ಮತ್ತೆ ಅಯೋಧ್ಯೆ ವಿಷಯ ಎತ್ತಿಕೊಳ್ಳುತ್ತಾರಂತೆ ಬಿಜೆಪಿಗಳು?
   - a) ಜನ ಕೈಗೆ ಚಪ್ಪಲಿ ಎತ್ತಿಗೊಳ್ತಾರೇನೊ....
   - b) ಎತ್ತಿಕೊಳ್ಲಿ ಬಿಡು; ಎತ್ತಿಕೊಂಡು ಮತ್ತೊಮ್ಮೆ ಮುಗ್ಗರಿಸಿ ಬೀಳಲಿ ಚೆಡ್ಡಿಗಳು....
   - c) ಇಲ್ಲಿ ಬಾಬಾಬುಡನ್‌ಗಿರಿ ವಿಷಯ ಎತ್ತಿದ ಚೆಡ್ಡಿಗಳನ್ನು ಜನ ಮುಳ್ಳಯ್ಯನಗಿರಿಗೆ ಕಳಿಸಿದ್ದು ಗೊತ್ತಿಲ್ವಂತೆ
   - d) 'ಸೀತಾಯಣ' ಓದಿದ ಮೇಲೆ ಶ್ರೀರಾಮನಿಗೆ ಯಾರು ಕೇರ್ ಮಾಡ್ತಾರೆ?

ಉತ್ತರಗಳು: 1.b 2.d 3.c 4.d 5.b

ಹಲೋ ವೆಂಕಾ,




ಸಮ್ಮಿಶ್ರ ಸರ್ಕಾರದ ಕಾರ್ಯಕ್ರಮ ಗೌಡರು ಕಟ್ಟುನಿಟ್ಟಾಗಿ ಪಾಲಿಸಿದ್ರ ನಾವ್ಹೂ ಪಾಲಿಸ್ತೀವಿ ಅಂದಿಯಲ್ಲಾ? ಹೌದ್ದಲ್ಲೇ ಮಗ್ನಾ ವೆಂಕಾ, ಇಬ್ರೂ ಸೇರಿ 'ಸಮ್ಮಿಶ್ರವಾಗಿ' ತಿಂತಾನೇ ಇದೀರಾ... ಈಗ ಅದೇನು ಕಾರ್ಯಕ್ರಮ ಪಾಲಿಸ್ತಿರ್ಯಪ್ಪ... ಕಟ್ಟಾ ಜೊತೆ ನೆಲಾ... ನುಂಗೋದೂ (ಅ) ಸಾಮಾನ್ಯ ಕಾರ್ಯಕ್ರಮ ನಿನ್ನ... ಅಲ್ಲಿ ಸೆಂಟ್ರಲ್‌ನ್ಯಾಗ ಕೃಷ್ಣಾ ನೀರು ಆಂಧ್ರಕ್ಕೆ ಅಂತೀದಿ..... ಇಲ್ಲಿ ಬಂದು ಕಾವೇರಿ ನಾಡಿನ್ಯಾಗ ಭೂಮಿ ಗುಳುಂ ಮಾಡ್ತಿದಿ... ಬಾಳಾ ಲಫಂಗಂದ... ಲಫಂಗದಿ ನೀ ಆಂಧ್ರ ದೊಂಗುಲು....


ಗೌಡ್ರೇ ಕಳ್ರು, ನೀ ನಾಯ್ಡು ಅಂತೂ ಮಹಾಕಳ್ಳ.... ಇಬ್ರೂ ಸೇರಿ ಸಾಮಾನ್ಯ ಕಾರ್ಯಕ್ರಮ ಪಾಲಿಸೋದು ಅಂದ್ರ ಕರ್ನಾಟಕನ ಮಾರೋದು.... ನಿನ್ ಸಾಮಾನ್ಯ ಕಾರ್ಯಕ್ರಮಾನೂ ಬ್ಯಾಡ, ಅಸಾಮಾನ್ಯ ಕಾರ್ಯಕ್ರಮಾನೂ ಬ್ಯಾಡ... ಮೊದ್ಲು ಕರ್ನಾಟಕದಿಂದ ರೈಟ್ ಹೇಳು ವೆಂಕಾ...

-ಇತಿ ಮುನ್ನಿ ಧಾರವಾಡ

ಒಂದು ಬೀಜಮಾತು...

ಖಾಕಿ ಗುಂಡಿಗೆ
ಕೆಂಪು ಸೂರ್ಯ (ದಿನಕರ)
ಸಾಯುವುದಿಲ್ಲ;
ಅವನೆಂದಿಗೂ ಅಮರನೇ.






ಸೆಪ್ಟಂಬರ್ 11, 1988

ನಾಯಕನ ಜಾತಿ

ತಮಾಷೆ ಎನ್ನಿಸುತ್ತದೆ. ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ ಪಟ್ಟದಿಂದ ಇಳಿದಿದ್ದಕ್ಕೆ ಬ್ರಾಹ್ಮಣರು ದುಗುಡಗೊಂಡಿದ್ದಾರೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಒಬ್ಬ ಮುಖ್ಯಮಂತ್ರಿಯಾದರೆ ಆತನ ಜಾತಿಗೆ ಯಾವ ಯಾವ ರೀತಿಯಲ್ಲಿ ಸಹಾಯವಾಗುತ್ತದೋ ನನಗೆ ಗೊತ್ತಿಲ್ಲ. ಮಾನಸಿಕವಾಗಿ? ಅದು ತಮ್ಮ ಜಾತಿಗೆ ಸಂದ ಗೌರವ, ತಮ್ಮ ಜಾತಿಯ ಹಿರಿಮೆಯ ದ್ಯೋತಕ ಅನ್ನಿಸುತ್ತದೆಯೆ? ಅದು ಮೂರ್ಖತನ. ಮುಖ್ಯಮಂತ್ರಿಯೊಬ್ಬ ತನ್ನ ಜಾತಿಯವರನ್ನು ಕಟ್ಟಿಕೊಂಡು ಓಡಾಡಿದರೆ, ಜಾತಿಯ ಮಠ, ವಿದ್ಯಾಸಂಸ್ಥೆಗಳು ಇತ್ಯಾದಿಗಳಿಗೆ ಮಾತ್ರ ನೆರವಾದರೆ ನಾಶವಾಗುತ್ತಾನೆ. ಮುಖ್ಯಮಂತ್ರಿಗೆ ಕಿಂಚಿತ್ತಾದರೂ ಹೊಣೆಗಾರಿಕೆ ಇದ್ದರೆ ಆತ ನಿಜವಾದ ಹೆತ್ತ ತಾಯಿಯಂತೆ ಮೊದಲು ಎತ್ತಿ ಸಾಂತ್ವನಗೊಳಿಸಬೇಕಾದ್ದು ದುರ್ಬಲ ಮಗುವನ್ನು, ತನ್ನ ನೆರವು ಬೇಕಾದ ಅಸಹಾಯಕ ಜನರನ್ನು, ಆತನಲ್ಲಿ ನಾಯಕತ್ವದ ಲವಲೇಶವಾದರೂ ಗುಣ ಇದ್ದರೆ ಜಾತೀಯತೆ, ಸಣ್ಣತನ, ಭ್ರಷ್ಟತೆಯ ಕಟ್ಟುಗಳಿಂದ ಜನರನ್ನು ಮುಕ್ತಗೊಳಿಸುತ್ತ ಹೋಗಬೇಕು.

ನಾನು ತಿಳಿದಿರುವಂತೆ, ಜಾತಿ ಪದ್ಧತಿಯ ವಿವಿಧ ಸ್ತರಗಳಲ್ಲಿ ಮೇಲಕ್ಕೆ ಹೋದಂತೆಲ್ಲ ಮೇಲುಜಾತಿ ಎನ್ನಿಸಿಕೊಂಡವರು ಜಾತೀಯತೆಯಿಂದ ಪೂರ್ತಿಯಾಗಿ




ರೊಂದಿಗೆ ವ್ಯವಹರಿಸುವುದು ಕಷ್ಟ. ಅವರ ವಾದ: ಬ್ರಾಹ್ಮಣರು ವಾಸ್ತವದಿಂದ ದೂರ ಸರಿದು ಮಣ್ಣಿನ ಹಂಗಿನಿಂದ ಮುಕ್ತರಾಗಿಯೇ ಬೆಳೆದು ಸಂಕೀರ್ಣಮತಿಯವರೂ, ಬರಡು ಜಾಣತನದವರೂ ಆಗಿರುತ್ತಾರೆ; ಹರಿಜನರು ತಲತಲಾಂತರದಿಂದ ನೊಂದು, ಅವಮಾನ ಅನುಭವಿಸಿ ವಿಚಿತ್ರ ವ್ಯಕ್ತಿಗಳಾಗಿರುತ್ತಾರೆ. ನನ್ನ ಅನುಭವದಂತೆ, ಬ್ರಾಹ್ಮಣರಲ್ಲಿನ ಬರಡುತನ ಆಗಾಗ ಗೋಚರಿಸಿದರೂ ಹರಿಜನರಲ್ಲಿ ವಿಚಿತ್ರ ನೋವು, ದಿಟ್ಟತೆಯನ್ನು ಕಂಡಿದ್ದೇನೆ; ವಿನೋದ ಗುಣ ಮತ್ತು ಕ್ರಿಯಾಶೀಲತೆ ಕಂಡಿದ್ದೇನೆ. ಇದನ್ನು ನಾನು ಬ್ರಾಹ್ಮಣರನ್ನು ಛೇಡಿಸುವುದಕ್ಕಾಗಿಯಾಗಲಿ, ಹರಿಜನರನ್ನು ಮೆಚ್ಚಿಸುವುದಕ್ಕಾಗಿಯಾಗಲಿ ಹೇಳುತ್ತಿಲ್ಲ. ಇವತ್ತಿಗೂ ಅಮೂರ್ತ ಬೌದ್ಧಿಕ ಸಾಹಸಗಳಲ್ಲಿ ಬ್ರಾಹ್ಮಣರು ಅದ್ಭುತ ವ್ಯಕ್ತಿಗಳಾಗಿ ಕಾಣುತ್ತಾರೆ; ಹಾಗೆಯೇ ಮೂರ್ತ ಜಗತ್ತಿನಲ್ಲಿ ದುರ್ಬಲರಾಗಿ ಕಾಣುತ್ತಾರೆ. ಅವರ ಬೌದ್ಧಿಕ ಸಾಹಸದ ಮಿತಿಯನ್ನು ಕೂಡ ಎರಡನೆಯ

ಮುಕ್ತರಾಗಿರಬೇಕು. ತಮ್ಮ ಜಾತಿಯವನು ಮುಖ್ಯಮಂತ್ರಿಯಾದರೆ ಆತನ ಬಗ್ಗೆ ವಿಶೇಷವಾಗಿ ನಿಷ್ಠುರರಾಗಿರಬೇಕು; ಆತ ಭ್ರಷ್ಟನೂ ಸ್ವಜನಪಕ್ಷಪಾತಿಯೂ ಆಗಿದ್ದರೆ ಅವನು ಇಡೀ ರಾಜ್ಯದ ಜನತೆಗೆ ಅವಮಾನಕರ ಎಂಬುದನ್ನು ತಿಳಿಯ ಹೇಳಬೇಕು. ಮೇಲುಜಾತಿಯ ಬಹುಪಾಲು ಜನಕ್ಕೆ ಮುಖ್ಯಮಂತ್ರಿಯಿಂದ ಮಾನಸಿಕ ಆಸರೆಯಾಗಲಿ, ಆರ್ಥಿಕ ನೆರವಾಗಲಿ ಬೇಕಾಗುವುದಿಲ್ಲ; ಅಗತ್ಯವಾಗಕೂಡದು.

ಕೆಲವರು ಹೇಳಿದ್ದು ಕೇಳಿದ್ದೇನೆ-ನಮ್ಮಲ್ಲಿ ವಿಷಾದಕರ ಸಂಗತಿ ಯಾವುದೆಂದರೆ, ಉಚ್ಚ ಜಾತಿ ಅನ್ನಿಸಿಕೊಂಡ ಬ್ರಾಹ್ಮಣರು ಮತ್ತು ಕೆಳಜಾತಿ ಅನ್ನಿಸಿಕೊಂಡ ಹರಿಜನ ದೌರ್ಬಲ್ಯವೇ ನಿಯಂತ್ರಿಸುತ್ತದೆ.

ಈ ಟಿಪ್ಪಣಿಯಲ್ಲಿ ನಾನು ಕಂಡ ಒಂದು ಮೋಜಿನ ಸಂಗತಿ ಹೇಳುತ್ತೇನೆ. ಇದು ಹರಿಜನರ ಯುವಕರ ಬಗ್ಗೆ ಸ್ವಲ್ಪ ವಿವರಿಸುತ್ತದೆ.

ನಾನು ಕಂಡ ವಿಚಾರವಂತ ಹುಡುಗರ, ಸ್ನೇಹಮಯ ತರುಣರ ಗುಂಪು ಅದು. ನಾನು ಚಿತ್ರದುರ್ಗದ ಅವರ ಸಭೆಗೆ ಹೋಗಿದ್ದೆ. ದಲಿತ ಸಂಘರ್ಷ ಸಮಿತಿಯವರು ಅಂಬೇಡ್ಕರ್ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಏರ್ಪಡಿಸಿದ್ದ ಸಭೆ. ಸಭೆಗೆ ಮುಂಚೆ ಮತ್ತು ಆಮೇಲೆ ನನ್ನೊಂದಿಗೆ ಮಾತಾಡುವ ಕುತೂಹಲ ಅವರಿಗೆ. ಎಂದಿನಂತೆ ಮನಸ್ಸಿಗೆ ಆಗ ಹೊಳೆದಿದ್ದನ್ನೆಲ್ಲ ಮಾತಾಡಿದೆವು. ಹಳಸಲು ವಿಚಾರಗಳಿರಲಿಲ್ಲ, ಒಬ್ಬರಿಗೊಬ್ಬರು ಮೆಚ್ಚಿಸಬೇಕೆಂಬ ಕಾತರವಿರಲಿಲ್ಲ, ಕೆಲವರು ಹುಡುಗರು ತಮ್ಮ ಕಷ್ಟಗಳನ್ನು ಹೇಳಿಕೊಂಡರು; ಇವತ್ತಿಗೂ ಪ್ರಬಲವಾಗಿರುವ ಹಳ್ಳಿಯ ಪಾಳೇಗಾರಿಕೆಯ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಮಾತಿಗೆ ಬಂದು ಹೆಗಡೆಯ ಬಗ್ಗೆ ಚರ್ಚೆಯಾಯಿತು.




ನಾನು ಸಹಜವಾಗಿಯೇ, "ಹೆಗಡೆ ಹೋಗಿ ರಾಚಯ್ಯ ಮುಖ್ಯಮಂತ್ರಿಯಾದರೆ ಹೇಗೆ? ನಿಮಗೆ ಖುಷಿಯಾಗುತ್ತ?" ಅಂದೆ. ಒಕ್ಕೊರಲಿನಿಂದ 'ನೋ' ಅಂದರು. ಆ ಸೂಚನೆ ಅವರಿಗೆ ತಮಾಷೆಯ, ಅವಾಸ್ತವದ ಸೂಚನೆಯಾಗಿತ್ತು; ಅಲ್ಲದೆ ರಾಚಯ್ಯ ಅವರ ಆಸಕ್ತಿಗಳನ್ನು ರಕ್ಷಿಸಲಾರರು ಎಂಬ ಇಂಗಿತವಿತ್ತು. ರಾಚಯ್ಯ ಕಾಂಗ್ರೆಸ್ ರೂಪಿಸಿದ ರಾಜಿ ರಾಜಕಾರಣಿ ಎಂಬ ಗ್ರಹಿಕೆ ಇತ್ತು.

ಬೊಗ್ಗೆ ದಲಿತ ಸಂಘರ್ಷ ಸಮಿತಿಯ ಸಭೆಯೊಂದರಲ್ಲಿ ಕೆಲವರು ಮಾತಾಡಿದ್ದನ್ನು ನಮ್ಮ ಎಚ್.ಎಲ್. ಕೇಶವಮೂರ್ತಿ ವರದಿ ಮಾಡಿದ್ದನ್ನು ನೀವು ಓದಿರಬಹುದು. ಭೂಮಿಯ ಒತ್ತುವರಿ ಮತ್ತು ಮಾಲೀಕತ್ವದ ಬಗ್ಗೆ ಹೆಗಡೆ, ಬೊಮ್ಮಾಯಿ ತರಬೇಕೆಂದಿದ್ದ ಸುಗ್ರೀವಾಜ್ಞೆಯ ವಿರುದ್ಧ ದಲಿತರು ಪ್ರತಿಭಟಿಸಿದರು. ಹೆಗಡೆಯವರಿಗೆ ಮುತ್ತಿಗೆ ಹಾಕಿದರು. ಹೆಗಡೆ ತಲೆ ತಪ್ಪಿಸಿಕೊಂಡು ಓಡಬೇಕಾಯಿತು. ಇದಾಗಿ ಕೆಲವು ದಿನಗಳ ಬಳಿಕ ಮುಖ್ಯಮಂತ್ರಿತ್ವದ ಪ್ರಶ್ನೆ ಬಂತು. ಹೆಗಡೆಯವರ ಉತ್ತರಾಧಿಕಾರಿಯಾ ಬಿ. ರಾಚಯ್ಯನವರ ಹೆಸರು ಕೂಡ ಇತ್ತು. ಕೊನೇ ಗಳಿಗೆಯಲ್ಲಿ ರಾಚಯ್ಯ ಸ್ಪರ್ಧೆಯಿಂದ ಹೊರಬರುವಂತೆ ಒತ್ತಾಯವಾಯಿತು. ರಾಚಯ್ಯ ನೊಂದುಕೊಂಡು ಮಾತಾಡಿ ಮೇಲು ಜಾತಿಗಳನ್ನು ಕಟುವಾಗಿ ಟೀಕಿಸಿದರು. ಆಗ ದಲಿತ ಸಂಘರ್ಷ ಸಮಿತಿಯವರು ರಾಚಯ್ಯನವರ ಪರವಾಗಿ, ಮೇಲ್ಜಾತಿಯವರ ವಿರುದ್ಧ ಪ್ರತಿಭಟಿಸಬೇಕೆಂದು ತೀರ್ಮಾನಿಸಿದ್ದರು. ಆದರೆ ರಾಚಯ್ಯ ಒತ್ತುವರಿ ಭೂಮಿಯ ಬಗ್ಗೆ ಸಂಪುಟದಲ್ಲಿ ಚರ್ಚೆಯಾಗುವಾಗ "ನಾನು ಏನನ್ನೋ ಓದ್ತಾ ಇದ್ದೆ-ಗಮನಿಸಲೇ ಇಲ್ಲ!" ಅಂದರಂತೆ. ಇದು ಗೊತ್ತಾಗಿ ರಾಚಯ್ಯನವರ ಪರವಾದ ಪ್ರತಿಭಟನೆ ಕೈಬಿಡಲಾಯಿತಂತೆ.

ನಾನು ಹೇಳುತ್ತಿರುವುದೇನೆಂದರೆ, ಒಂದು ಗುಂಪಿನ ನಾಯಕತ್ವಕ್ಕೂ ಅಲ್ಲಿರುವ ಸದಸ್ಯರಿಗೂ ಇರುವ ವ್ಯತ್ಯಾಸ; ರಾಚಯ್ಯ ಸಾಮಾನ್ಯ ಸದಸ್ಯರಿಗೆ ಬೇಡವಾಗಿ ಕಂಡರೆ, ನಾಯಕರಿಗೆ ಬೇಕಾಗಿ ಕಾಣುತ್ತಾರೆ.

ಅಲ್ಲದೆ, ದೇವೇಗೌಡರಂಥವರಿಗೂ ರಾಚಯ್ಯನವರಿಗೂ ಅಷ್ಟು ವ್ಯತ್ಯಾಸವಿಲ್ಲ ಎಂಬುದು ಗುಟ್ಟಾಗಿಯೇ ಉಳಿಯುತ್ತದೆ. ಒಂದು ಜಾತಿಯು ನಾಯಕನನ್ನು ಯಾವ ಯಾವ ಕಾರಣಕ್ಕೆ ಆ ಜಾತಿಯವರು ಇಷ್ಟಪಡುತ್ತಾರೆ ಎಂಬುದೂ ನಿಗೂಢವಾಗಿಯೇ ಉಳಿಯುತ್ತದೆ. ■

ನಾನು ಶ್ರೀಮಂತರ ಕಷ್ಟ ತಿಳ್ಕೋಬೇಕು, ಸಿ.ಎಂ. ಮನೇಲಿ ಮಲಗಿದ್ರೆ ಹೆಂಗೆ?



ಸಾಬಿಯಾ ಬೇಗಂ, ದೇವದುರ್ಗ
ಕೂಲಿಗಾಗಿ ಕಾಳು, ಪ್ರೀತಿಗಾಗಿ?
* ಗೋಳು.

ಸಂದೇಶ್ ಕುಮಾರ್, ಮಂಡ್ಯ
ನಾವು ಕಾಣುವುದಕ್ಕಿಂತ ಫೋಟೋದಲ್ಲಿ ಚೆನ್ನಾಗಿ ಕಾಣುವಂತಿದ್ದರೆ?
* ಆಗಲೂ ಜೀವನ ಏನು ಬದಲಾಗುತ್ತಿರಲಿಲ್ಲ.

ಶಶಿಕಲಾ. ಜಿ, ಶಿವಮೊಗ್ಗ
ಗಾಂಧೀಜಿಗೂ ನಿಗೂಢ ಪ್ರೇಮಿ ಇದ್ದಳಂತೆ?
* ಸಾವರ್ಕರ್‌ಗೆ ನಾಥುರಾಮ್ ಗೋಡ್ಸೆ ಎಂಬ ನಿಗೂಢ ಪ್ರಿಯಕರ ಇದ್ದಾಗ ಅದೇನು ಮಹಾ, ಬಿಡಿ.

ಬಿ. ಕುಮಾರಸ್ವಾಮಿ, ಗದಗ
ಕಲ್ಲರಳಿ ಹೂವಾಯ್ತಾ?
* ಗಾಂಧಿನಗರದಲ್ಲಿ ಮೊಗ್ಗುಗಳೇ ಅರಳುತ್ತಿಲ್ಲ, ಇನ್ನು ಕಲ್ಲು ಹೂವಾಗುತ್ತಾ?

ವಿ.ಎಲ್. ಪುಷ್ಪ, ಬೆಂಗಳೂರು
ಜೆಡಿಎಸ್‌ನಿಂದ ಉಚ್ಚಾಟಿಸಲ್ಪಟ್ಟಿರುವ ದೇವೇಗೌಡರ ಗತಿ?
* ಹಾಯಿ, ಅವರ ಗತಿ ಇರಲಿ, ಕರ್ನಾಟಕದ ಗತಿ ಬಗ್ಗೆ ಯೋಚಿಸು.

ಅಕ್ಬರ್ ಸಿ ಕಾಲಿಮಿರ್ಚಿ, ಭಾಗ್ಯನಗರ
ಈ ಬಿಜೆಪಿಯವರಿಗೆ ದೇಶದ ಅಭಿವೃದ್ಧಿಗಿಂತ ದೇವಾಲಯಗಳ ಹುಚ್ಚೇ ಏಕೆ?
* ದೇವಸ್ಥಾನಗಳಲ್ಲಿ 'ಪ್ರಸಾದ' ಪುಕ್ಕಟೆ ಸಿಗುತ್ತೆ ಅಂತ.

ಎಸ್. ಶಶಿಧರ, ದಾವಣಗೆರೆ
'ಗೌರಿ ದೇಶಕ್ಕೆ ಮಾರಿ' ಎಂದು ಚೆಡ್ಡಿಗಳು ಚೀರಾಡಿದವಲ್ಲ?
* ಚೆಡ್ಡಿಗಳ ಪಾಲಿಗೆ ಮಾರಿಯಾಗುವುದೊಂದೇ ಈ ದೇಶ ಉಳಿಸುವ ದಾರಿ ಅಂತಾಳೆ ಗೌರಿ.

ಶೃತಿ ಎಸ್. ರಮೇಶ್, ಮೈಸೂರು
ಐವತ್ತು ಲಕ್ಷ ಸುರಿದು ಕರೆತಂದಿರುವ ಮಲ್ಲಿಕಾ ಶೆರಾವತ್‌ಳಲ್ಲಿ ಇರುವುದಾದರೂ ಏನು?
* 'ಜೋಗಿ'ಯ ಹುಚ್ಚು!

ಇಂದಿರಾ ಶ್ರೀಧರ್, ದಾವಣಗೆರೆ
ಶಿವಮೊಗ್ಗೆಯ ಸಮ್ಮೇಳನದಲ್ಲಿ ಸಾಹಿತ್ಯ-ರಾಜಕೀಯ-ನಕ್ಸಲ್‌ವಾದಗಳ ಜಿದ್ದಾಜಿದ್ದಿನಲ್ಲಿ ಗೆದ್ದಿದ್ದು ಯಾವುದು?
* ಪ್ರಜಾಪ್ರಭುತ್ವ.

ಟಿ.ಎಸ್. ಸ್ವಾಮಿ, ಹೊಸಪೇಟೆ
ಬಂಗಾರಪ್ಪ ಸೋಲಿಲ್ಲದ ಸರದಾರ, ಕುಮಾರಸ್ವಾಮಿ?
ಕೋಟಿಗೆಷ್ಟು ಸೊನ್ನೆ ಎಂಬುದೂ ಗೊತ್ತಿಲ್ಲದ ಕುಬೇರ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ತಂದೆ-ತಾಯಿಗೆ ನಮಸ್ಕರಿಸಬೇಕು, ಹೆಂಡ್ತಿ-ಮಕ್ಕಳಿಗೆ?
* ಪುರಸ್ಕರಿಸದಿದ್ದರೆ ತಿರಸ್ಕರಿಸುತ್ತಾರೆ.

ಎಂ. ಶಿವಸ್ವಾಮಿ, ಬೆಂಗಳೂರು
ನಮ್ಮಲ್ಲಿರುವ ಸಮಾಜಘಾತಕರನ್ನು ಬಗ್ಗು ಬಡಿಯುವುದು ಹೇಗೆ?
* ದೇವೇಗೌಡರ ಫ್ಯಾಮಿಲಿ ಬಗ್ಗೆ ಕೇಳುತ್ತಿದ್ದೀರಾ?

ಮಂಚಾಲಿ ಗುರುರಾಜಾಚಾರ್, ಬಳ್ಳಾರಿ
ಕುಮಾರಸ್ವಾಮಿಯವರು ಹಳ್ಳಿಯಲ್ಲಿರುವುದು ಪಟ್ಟಣವೆಂದರೆ ಭಯದಿಂದಲೋ ಅಥವಾ ಹಳ್ಳಿಯ ಜನರು ಬುದ್ಧಿವಂತರಲ್ಲಾ ಎಂದೋ?
* ಎರಡೂ ಅಲ್ಲ, ಅನಿತನ ಕಾಟದಿಂದ ತಪ್ಪಿಸಿಕೊಳ್ಳಲು ಎಂಬ ಪುಕಾರು ಹಬ್ಬಿದೆ.

ಖಲಂದರ್ ಅಜೀಜ್, ಜಾವಗಲ್
ಬರ್ತಾ ಬರ್ತಾ ಎಂ.ಪಿ. ಪ್ರಕಾಶ್ ಚೆಡ್ಡಿ ತೊಡುವ ಸಂಪೂರ್ಣ ಲಕ್ಷಣವಿದೆಯಲ್ಲಾ?
* ಚೆಡ್ಡಿ ತೊಟ್ಟರೂ "ಇಲ್ರೀ ಇದು ಪ್ಯಾಂಟು" ಎಂದು ವಾದಿಸುವ ಕಲೆ ಅವರಿಗೆ ಗೊತ್ತಿದೆ!


ಕೆ.ವಿ. ಚಂದ್ರಜ್ಯೋತಿ, ತುಮಕೂರು
ನಾನು ಶ್ರೀಮಂತರ ಕಷ್ಟ ತಿಳ್ಕೋಬೇಕು, ಸಿ.ಎಂ. ಮನೇಲಿ ಮಲಗಿದ್ರೆ ಹೆಂಗೆ?
* ಅಲ್ಲಿ ಅನಿತಾಳ ಶೋಕ ಮತ್ತು ನಿಖಿಲ್‌ನ ಶೋಕಿ ಜಾಸ್ತಿ ಇರುತ್ತೆ.

ಬಹುಮಾನಿತ ಪ್ರಶ್ನೆ

ಛೀ ತುಂಟಿ!

ಮುದಿ ದಂಪತಿಗಳು ಕಿಕ್ಕಿರಿದಿದ್ದ ಬಸ್ ಒಂದನ್ನು ಹತ್ತಿದರು. ಸ್ವಲ್ಪ ಸಮಯದ ನಂತರ ಒಂದು ಸೀಟ್ ಖಾಲಿಯಾದಾಗ ಮುದುಕ ತನ್ನ ಹೆಂಡತಿಗೆ ಬಿಟ್ಟುಕೊಟ್ಟ. ಆದರೆ ಆತ ಹಾಗೆ ಮಾಡಿದ್ದು ಅವಳ ಮೇಲಿನ ಅನುಕಂಪದಿಂದಲ್ಲ, ಬದಲಾಗಿ ಬಸ್‌ನಲ್ಲಿ ತುಂಬಿದ್ದ ಯುವತಿಯರ ಹತ್ತಿರ ತಾನು ನಿಲ್ಲಲು!

ಬಸ್ ಸಾಗುತ್ತಿದ್ದಂತೆ, ಬ್ರೇಕ್ ಹೊಡೆಯುತ್ತಿದ್ದಂತೆ ತನ್ನ ಮುಂದಿದ್ದ ಯುವತಿಯ ಬೆನ್ನಿಗೆ ತನ್ನ ಮೈ ತಾಕಿಸುತ್ತಾ ಮುದುಕ ಆನಂದಪಡುತ್ತಿದ್ದ. ಮುದುಕ ಆಕಸ್ಮಿಕವಾಗಿ ಹೀಗೆ ಮಾಡುತ್ತಿರಬಹುದು ಎಂದು ಯುವತಿ ಸುಮ್ಮನಿದ್ದರೆ, ಇದನ್ನೆಲ್ಲಾ ಗಮನಿಸಿದ ಮುದುಕಿ ಮುಜುಗರದಲ್ಲಿ ಮುಳುಗಿ ಹೋದಳು. ಹುಡುಗಿಯ ಅದೃಷ್ಟವೋ, ಮುದುಕನ ದುರಾದೃಷ್ಟವೋ, ಮೂವರೂ ಒಂದೇ ಸ್ಟಾಪಿನಲ್ಲಿ ಇಳಿದರು. ಹಾಗೆ ಇಳಿಯುತ್ತಿದ್ದಂತೆ ಹುಡುಗಿ ಮುದುಕನ ಕಪಾಳಕ್ಕೆ ಒಂದು ಬಾರಿಸಿ "ನನ್ನ ನಿತಂಬಗಳನ್ನು ಚಿವುಟುತ್ತೀಯಲ್ಲಾ ನಿನಗೆ ನಾಚಿಕೆ ಆಗಲ್ವಾ?" ಎಂದಳು.



ಆದರೆ ಮುದುಕ "ನಾನು..... ನಾನು..... ನಿನ್ನನ್ನು ಚಿವುಟಿಯೇ ಇಲ್ಲ" ಎಂದ.

"ಹೌದು, ಇವನು ನಿನ್ನನ್ನು ಚಿವುಟಲಿಲ್ಲ" ಎಂದ ಮುದುಕಿ "ನಿನ್ನನ್ನು ಚಿವುಟಿದ್ದು ನಾನು. ಬಸ್‌ನಲ್ಲಿ ಆತ ನಿನಗೆ ಏನು ಮಾಡಿದ ಅಂತ ನೋಡಿದೆ. ಅವನಿಗೆ ಬುದ್ಧಿ ಕಲಿಸಲೆಂದೇ ನಾನು ನಿನ್ನನ್ನು ಚಿವುಟಿದೆ. ನೀನು ಇವನಿಗೆ ಬಾರಿಸಿದೆ, ಧನ್ಯವಾದಗಳು" ಎಂದಳು.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಸದ್ದಾಂಗೆ ಗಲ್ಲು ಶಿಕ್ಷೆ, ಬುಶ್‌ಗೆ ಏನು ಶಿಕ್ಷೆ?


ಡಿಸೆಂಬರ್ 27ರ ಸಂಚಿಕೆಯ ನಮ್ಮ ಪ್ರಶ್ನೆ: ಇನ್‌ಫೋಸಿಸ್ ಸ್ವರ್ಗದಲ್ಲಿ ಕಟ್ಟಡ ಕಾರ್ಮಿಕರಿಗೆ ಜಾಗ ಸಿಗುವುದು ಯಾವಾಗ?
ನಿಮ್ಮ ಉತ್ತರ: ಇನ್‌ಫೋಸಿಸ್ ಸ್ವರ್ಗಸ್ಥವಾದಾಗ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಬಸವರಾಜ್ ಟೆಕ್ಸ್ಟರ್, ಗುಲ್ಬರ್ಗಾ

ರಾಜ್ಯ ಬಿಜೆಪಿ ಎಂದರೇನೇ ಅನಂತ್‌ಕುಮಾರ್ ಎಂಬ ಮಾತು ಮಾತ್ರ ಸುಳ್ಳಾಗಿದೆ. ಕೇವಲ ಒಂದೇ ವರ್ಷದಲ್ಲಿ ಅಧಿಕಾರವೆಂಬುದು ರಾಜ್ಯ ಬಿಜೆಪಿಯ ಮೂಲ ಸ್ವರೂಪವನ್ನೇ ಬದಲಾಯಿಸಿಬಿಟ್ಟಿದೆ. ಸದ್ಯ ಬಿಜೆಪಿಯೆಂದರೇನೇ ಅನಂತ್ ಎದುರಾಳಿಗಳಾದ ಯಡ್ಡಿ ಮತ್ತವರ ಆಪ್ತೆ ಶೋಭಾ ಕರಂದ್ಲಾಜೆ ಎಂಬಂಥಾಗಿ ಅನಂತ್ ತಬ್ಬಲಿಯಾಗಿದ್ದಾರೆ.

ಅನಂತಿ ಪಾಡು ನಾಯಿ ಪಾಡು

ತಬ್ಬಲಿಯು ನೀನಾದೆ ಮಗನೆ..!




ಇಷ್ಟರಲ್ಲೇ ಅನಂತ್‌ಕುಮಾರ್ ಬಜೆಪಿ ಬಿಡುತ್ತಾರಾ? ಬಿಟ್ಟರೆ ಯಾವ ಪಕ್ಷಕ್ಕೆ ಹೋಗುತ್ತಾರೆ? ಅಥವಾ ರಾಜಕೀಯ ಸನ್ಯಾಸವೊಂದೇ ಅವರಿಗುಳಿದ ಏಕೈಕ ಮಾರ್ಗವಾ?

ಬಹುಶಃ ಹತಾಶೆಗೆ ಬಿದ್ದ ಅನಂತ್‌ಕುಮಾರ್ ಅನುಯಾಯಿಗಳೇ ಈ ಥರದ ಹುಯಿಲೆಬ್ಬಿಸುತ್ತಿದ್ದಾರಾ?


ಗೊತ್ತಿಲ್ಲ, ರಾಜ್ಯ ಬಜೆಪಿ ಎಂದರೇನೇ ಅನಂತ್ ಕುಮಾರ್ ಎಂಬ ಮಾತು ಮಾತ್ರ ಸುಳ್ಳಾಗಿದೆ. ಕೇವಲ ಒಂದೇ ವರ್ಷದಲ್ಲಿ ಅಧಿಕಾರವೆಂಬುದು ರಾಜ್ಯ ಬಜೆಪಿಯ ಮೂಲ ಸ್ವರೂಪವನ್ನೇ ಬದಲಾಯಿಸಿ ಬಿಟ್ಟಿದೆ. ಸದ್ಯ ಬಜೆಪಿಯೆಂದ ರೇನೇ ಅನಂತ್ ಎದುರಾಳಿಗಳಾದ ಯಡ್ಡಿ ಮತ್ತವರ ಆಪ್ತೆ ಶೋಭಾ ಕರಂದ್ಲಾಜೆ ಎಂಬಂಥಾಗಿದೆ ಯೆಂದರೆ; ನಿನ್ನೆ ಮೊನ್ನೆಯ ತನಕ ಅವರ ಹಿಂಬಾಲಕರಂತಿದ್ದ ಈಶ್ವರಪ್ಪ, ಜಗದೀಶ್ ಶೆಟ್ಟರ್, ಆರ್. ಅಶೋಕ್ ಥರದವರೇ ಕೈಕೊಟ್ಟು ಯಡ್ಡಿ ಪಾಳಯಕ್ಕೆ ಜಗಿದಿದ್ದಾರೆಂದರೆ ಮತ್ತು ಆ ಕಾಲದಿಂದಲೂ ಅನಂತ್ ಬೆನ್ನಿಗಿದ್ದ ಆರೆಸ್ಸೆಸ್ ಏಕಾಏಕಿ ಯಡ್ಡಿಯ ತೆಕ್ಕೆಗೆ ಬಿದ್ದಿದೆಯೆಂದರೆ; ಅದು ಅಧಿಕಾರದ ವ್ಯಾಮೋಹವಾ ಅಥವಾ ಅನಂತ್ ಗ್ರಹಚಾರವಾ?

ರಾಜ್ಯ ಬಜೆಪಿಯನ್ನು ಅಧಿಕಾರದ ಸಮೀಪಕ್ಕೆ ಕರೆತಂದಿದ್ದರಲ್ಲಿ ಸರಿಸುಮಾರು 79 ಮಂದಿ ಶಾಸಕರು ಮತ್ತು 17 ಮಂದಿ ಲೋಕಸಭಾ ಸದಸ್ಯರನ್ನು ಗೆಲ್ಲಿಸುವಲ್ಲಿ ಯಡ್ಡಿಗಿಂತಲೂ ಅನಂತ್ ಪಾಲೇ ದೊಡ್ಡದೆಂಬುದರಲ್ಲಿ ಎರಡು ಮಾತಿಲ್ಲ. ಇಂಥಾ ಅನಂತ್‌ರನ್ನೇ ಓವರ್‌ಟೇಕ್ ಮಾಡಿದ ಯಡ್ಡಿಗೆ ಆವತ್ತು ಜಾತಿ ಬಿಟ್ಟರೆ ಬಂಡವಾಳ ತಾನೇ ಏನಿತ್ತು? ಧರ್ಮಸಿಂಗ್ ಮುಖ್ಯಮಂತ್ರಿಯಾದಾಗಲೂ ಅಷ್ಟೇ; ಯಡ್ಡಿ ವಿರೋಧ ಪಕ್ಷದ ನಾಯಕನಾಗುವುದಕ್ಕೇ ಸಾಕಷ್ಟು ಪಲ್ಟಿ ಹೊಡೆಯಬೇಕಾಯಿತು.

ಬಹುಶಃ ತನ್ನ ಹುಟ್ಟುಹಬ್ಬದ ಪ್ರಯುಕ್ತ ಅರಮನೆ ಆವರಣದಲ್ಲಿ ಸುತ್ತೂರು, ಸಿದ್ಧಗಂಗಾ, ತರಳಬಾಳು ಇತ್ಯಾದಿ ಲಿಂಗಾಯತ ಜಗದ್ಗುರುಗಳನ್ನು ಸೇರಿಸಿ ಲಿಂಗಾಯತರನ್ನು ಎತ್ತಿಕಟ್ಟದೇ ಹೋಗಿದ್ದರೆ, ಯಡ್ಡಿ ವಿರೋಧಿ ನಾಯಕ ಕೂಡ ಆಗುವುದು ಕಷ್ಟವಿತ್ತು.


ಯಡಿಯೂರಪ್ಪ


ಶೋಭಾ ಕರಂದ್ಲಾಜೆ


ಜಯದೇವ್

ಅಂಥಾದ್ದರಲ್ಲಿ ಯಾವತ್ತು ಉಪಮುಖ್ಯಮಂತ್ರಿ ಗಾದಿ ಯಡ್ಡಿಯ ಪಾಲಾಯಿತೋ ಪರಿಸ್ಥಿತಿಯೇ ಉಲ್ಟಾ ಹೊಡೆದು ಅನಂತಿ ಪಾಡು ನಾಯಿಪಾಡಾಯಿತೆಂದರೆ?

ಯಡ್ಡಿ ಮಾಡಿದ ಚಮತ್ಕಾರವಾದರೂ ಏನು?

ಯಾವ ಜಗದೀಶ್ ಶೆಟ್ಟರ್‌ರನ್ನು ಯಡ್ಡಿ ವಿರುದ್ಧ ರಾಜ್ಯ ಬಜೆಪಿ ಅಧ್ಯಕ್ಷಗಾದಿಗೆ ಅನಂತ್ ತಂದಿದ್ದರೋ ಅದೇ ಶೆಟ್ಟರ್ ಟಾಂಗ್ ಕೊಟ್ಟು ಯಡ್ಡಿ ಜೊತೆ ಚಕ್ಕಂದಕ್ಕಿಳಿದದ್ದು ಅನಂತ್ ಪಾಲಿನ ದೊಡ್ಡ ದುರಂತ. ಶೆಟ್ಟರ್ ಕಂದಾಯ ಮಂತ್ರಿಯಾಗುತ್ತಿದ್ದಂತೆ ಆ ಹುದ್ದೆಗೆ ಬಸನಗೌಡ ಪಾಟೀಲ್ ಯತ್ನಾಳರನ್ನು ತರಲಾಗದೇ ಹೋದದ್ದು ಅನಂತಿಯ ಎರಡನೇ ದುರಂತ. ಇಂಥ ಸೋಲುಗಳ ಪರಮಾವಧಿಯೆಂಬಂತೆ ಆರೆಸ್ಸೆಸ್ ದಕ್ಷಿಣ ಪ್ರಾಂತೀಯ ಕ್ಷೇತ್ರ ಪ್ರಚಾರಕ ಮೈ.ಚು.ಜಯದೇವ ಕೂಡ ಈತನಕ ಅನಂತ್ ಬೆನ್ನಿಗಿದ್ದವರು ಏಕಾಏಕಿ ಯಡ್ಡಿ ಬೆಂಬಲಕ್ಕೆ ನಿಂತುಬಿಟ್ಟಿದ್ದಾರೆ.

ಒಂದೆಡೆ ಅಧಿಕಾರವಿಲ್ಲ, ಮತ್ತೊಂದೆಡೆ ಸಂಘ ಪರಿವಾರವೂ ಜೊತೆಗಿಲ್ಲ, ಕುಮಾರ್ ಸಂಪುಟದ ಯಾವೊಬ್ಬ ಬಜೆಪಿ ಮಂತ್ರಿಯೂ ತನ್ನತ್ತ ಕಣ್ಣೆತ್ತಿ ಕೂಡ ನೋಡುವುದಿಲ್ಲ, ಇನ್ನು ಹೈಕಮಾಂಡ್ ವಿಷಯಕ್ಕೆ ಬಂದರೆ ಅಲ್ಲಿ ತನ್ನ ನಾಯಕ ಅಡ್ವಾಣಿಯ ಪರಿಸ್ಥಿತಿಯೇ ಹೀನಾಯ. ಏನೆಲ್ಲಾ ಸರ್ಕಸ್ ಮಾಡಿಯೂ ಸದಾನಂದಗೌಡರನ್ನು ರಾಜ್ಯ ಬಜೆಪಿ ಅಧ್ಯಕ್ಷಗಿರಿಯಿಂದ ಅನಂತ್ ಕೈಯಲ್ಲಿ ಇಳಿಸಲಾಗಲಿಲ್ಲವೆಂದರೆ; ಅಲ್ಲಿಗೆ ಏನು ತಾನೇ ಉಳಿದಂತಾಯ್ತು.

ರಾ. ಸೋಮನಾಥ್

ಇದು ಅನಂತ್‌ಕುಮಾರ್ ಪಡಿಪಾಟಲಾದರೆ ಅವರನ್ನು ಈ ಸ್ಥಿತಿಗೆ ತಂದ ಉಪಮುಖ್ಯಮಂತ್ರಿ ಯಡಿಯೂರಪ್ಪನವರದು ವಿಜಯೋನ್ಮಾದ. ಇಲ್ಲಿಗೆ ವರ್ಷದ ಹಿಂದಷ್ಟೇ ಬಜೆಪಿಗೆ ವಿದಾಯ ಹೇಳಿ ಜೆಡಿ(ಎಸ್) ಜೊತೆ ಕೈಜೋಡಿಸುವಷ್ಟು ಹತಾಶೆಗಿಳಿದಿದ್ದರು ಯಡಿಯೂರಪ್ಪ. ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಹೆಚ್.ಕೆ. ಪಾಟೀಲರ ಜೊತೆ ದೆಹಲಿಗೂ ಹೋಗಿ ಕಾಂಗ್ರೆಸ ಬಾಗಿಲನ್ನೂ ತಟ್ಟಿದ್ದರು. ಅದೃಷ್ಟ ಒದ್ದು ಬಂದಿತ್ತು. ಉಪಮುಖ್ಯಮಂತ್ರಿಯಾದದ್ದೇ ತಡ ಅನಂತ್ ಪಾಳಯದ ಶೆಟ್ಟರ್, ಅಶೋಕ್, ಈಶ್ವರಪ್ಪ, ಕಟ್ಟಾ ಎಲ್ಲರೂ ಯಡ್ಡಿಗೆ ಹತ್ತಿರವಾದರು. 35ರಷ್ಟಿದ್ದ ಯಡ್ಡಿಯವರ ಶಾಸಕರ ಸಂಖ್ಯೆ ಇದ್ದಕ್ಕಿದ್ದಂತೆ ಐವತ್ತಕ್ಕೇರಿಸಿತು.

ಇಷ್ಟೆಲ್ಲಕ್ಕೂ ಕಾರಣವಾದದ್ದು ಮಾತ್ರ ಅಧಿಕಾರ ಮತ್ತು ಭ್ರಷ್ಟಾಚಾರ ಎಂಬುದೇ ಇಲ್ಲಿನ ಪರಮ...

ಯಡ್ಡಿಯ ಅತೀ ದೊಡ್ಡ ದೌರ್ಬಲ್ಯವೆಂದರೆ ... ಶೋಭಾ ಕರಂದ್ಲಾಜೆ ಮತ್ತು ಅವರ ತಾಕತ್ತಿನ ಮೂಲ... ಆಕೆಯೇ ಎಂಬುದು ಕೂಡ ಅಷ್ಟೇ ಸತ್ಯ!

ಅಧಿಕಾರಕ್ಕೆ ಬರುತ್ತಿದ್ದಂತೆ ಯಡ್ಡಿ-ಶೋಭಾ ಜೋ... ಮೊದಲು ಕೈ ಇಕ್ಕಿದ್ದು ಆರೆಸ್ಸೆಸ್ ಹುತ್ತಕ್ಕೆ. ಸದ್ಯ ... ಆರೆಸ್ಸೆಸ್‌ನ ದಕ್ಷಿಣ ಭಾರತದ ಮುಖ್ಯಸ್ಥ ಮೈ... ಜಯದೇವ ಜಾತಿಯಲ್ಲಿ ಲಿಂಗಾಯತ. ಆಂಧ್ರ, ಕೇ... ಕರ್ನಾಟಕ ಮತ್ತು ತಮಿಳುನಾಡಿನಂಥ ನಾಲ್ಕು ರಾಜ್ಯ... ಈತನೇ ಮುಖ್ಯಸ್ಥ.


ಜಯದೇವ ಜಾತಿಯಲ್ಲಿ ಲಿಂಗಾಯತ. ಜೊ... ಡಿಸಿಎಂ ಗಾದಿಗೇರಿದ ಎರಡೇ ತಿಂಗಳಿಗೆ ಯ... ಶೋಭಾ ಜೋಡಿ ಜಯದೇವರ ಕೈಗೆ ಒ... ಕೋಟಿಯ ಗಂಟನ್ನೂ ಇಟ್ಟುಬ... ಸಾಲದ್ದಕ್ಕೆ, ವಾಸ್ತು ನೆಪವ... ಮಲ್ಲೇಶ್ವರದ ಬಜೆಪಿ ಕಛೇರಿಯ... ತನ್ನ ಸಂಬಂಧಿಯೊಬ್ಬರ ಬಂಗಲೆಗೆ ಸ್ಥಳಾಂತ ... ಶೋಭಕ್ಕ ತನ್ನಪ್ಪನ ಆಸ್ತಿಯೆಂಬಂತೆ ಮಲ್ಲೇಶ್ವರದ ಬ... ಕಛೇರಿಯನ್ನೇ ಆರೆಸ್ಸೆಸ್‌ಗೆ ವಹಿಸಿಕೊಟ್ಟರು. ಆರೆ... ತೃಪ್ತಿಗೆ ಇನ್ನೇನು ಬೇಕು?

"ಕೇಂದ್ರ ವಿಮಾನಯಾನ ಖಾತೆ ಮಂತ್ರಿಯಾಗಿ... ಏರೋಪ್ಲೇನ್ ಖರೀದಿ ಹಗರಣದಲ್ಲಿ ಅನಂತ್‌ಕುಮ... ಮುನ್ನೂರು ಕೋಟಿ ದೋಚಿದ್ದರಲ್ಲಾಗಲಿ, ಅನ... ಹುಡ್ಕೋ ಕರ್ಮಕಾಂಡದಲ್ಲಿ ಹೊಡೆದ ಕೊಳ್ಳೆಯಲ್ಲಾ... ಅನಂತ್‌ಕುಮಾರ್ ನಯಾ ಪೈಸೆಯನ್ನೂ ಆರೆಸ್... ಅಂತ ಕೊಟ್ಟವರಲ್ಲ." ಎಂಬುದು ಚೆಡ್ಡಿಗಳ ಆರೋ... ಆದರೆ ಯಡ್ಡಿ-ಶೋಭಾ ಜೋಡಿ ಕರೆಯ... ಕಾಮಧೇನು. ಲಾಭ-ನಷ್ಟದ ಲೆಕ್ಕ ಹಾಕಿಯೇ ಆರೆ... ಯಡ್ಡಿ ಬೆನ್ನಿಗೆ ನಿಂತಿತ್ತು.

ಮುಖ್ಯಸ್ಥ ಜಯದೇವರೇ ಯಡ್ಡಿ ಬೆನ್ನಿಗೆ ನಿಂತಮೇ... ಆರೆಸ್ಸೆಸ್‌ನ ದಕ್ಷಿಣ ಪ್ರಾಂತ ಮುಖ್ಯಸ್ಥ ದಾ.ಮ. ರವೀ...

ಶಿಖಂಡಿಗಳ ಜೊತೆ ಆಂಧ್ರದ ದೊಂಗಲು

ನಿನ್ನೆಮೊನ್ನೆಯ ತನಕ ಅನಂತ್ ಬಣದ ಪರವಾಗೇ ಇದ್ದ ವೆಂಕಯ್ಯನಾಯ್ಡು ಇದ್ದಕ್ಕಿದ್ದಂತೆ ಯಡ್ಡಿ ಪಾಳಯದ ಸಮರ್ಥಕನಾಗಿದ್ದಕ್ಕೆ ಕಾರಣಗಳೇ ಬೇರೆ.






ಹೀಗೆ ಅನಂತಿ ಪರವಾಗಿದ್ದ ಖದೀಮ ವೆಂಕಯ್ಯನನ್ನು ಯಡ್ಡಿ ಪರವಾಗಿ ಬಗ್ಗಿಸಿದವನು ಭಾರೀ ಕೈಗಾರಿಕಾ ಮಂತ್ರಿ ಕಟ್ಟಾ ನಾಯ್ಡು. ಹುಟ್ಟಾ ನೆಲಗಳ್ಳನ ಕೈಗೆ ಭಾರೀ ಕೈಗಾರಿಕಾ ಖಾತೆ ಮತ್ತು ರೈತರ ಸಾವಿರಾರು ಎಕರೆ ಭೂಮಿ ಕಿತ್ತು ಕೈಗಾರಿಕೋದ್ಯಮಿಗಳಿಗೆ ಧಾರೆಯೆರೆಯುವ ನಿರಂಕುಶಾಧಿಕಾರದ ಕೆಐಎಡಿಬಿಯಂಥ ಆಯುಧಗಳು ಸಿಕ್ಕಿಬಿಟ್ಟರೆ ರಾಜ್ಯವನ್ನು ದೇವರು ಕೂಡ ಕಾಪಾಡಲಾರ. ಸದ್ಯ ಕಟ್ಟಾ ಮಾಡುತ್ತಿರುವುದೂ ಇದನ್ನೇ. ಹೊಸ ಕೈಗಾರಿಕಾ ನೀತಿಯ ಘೋಷಣೆಯ ದಿನವೇ 25 ಸಾವಿರ ಎಕರೆ ರೈತರ ಭೂಮಿ ಕಿತ್ತುಕೊಳ್ಳುತ್ತೇನೆಂದು ಕಟ್ಟಾ ಘೋಷಿಸಿಬಿಟ್ಟ. ಹಾಗೇ ಬೆಂಗಳೂರು ಸುತ್ತಮುತ್ತಲ ಕಂಡಕಂಡ ಕೃಷಿ ಭೂಮಿಯನ್ನೆಲ್ಲ ಕೆಐಎಡಿಬಿಯಿಂದ ನೋಟಿಫೈ ಮಾಡಿಸಿದ.

ಹೀಗೆ ಕಿತ್ತ ಭೂಮಿಯಲ್ಲಿ ಮುನ್ನೂರು ಎಕರೆ ಜಮೀನು ಆಂಧ್ರದ ದೊಂಗ ವೆಂಕಯ್ಯನ ಜಿಎಂಆರ್ ಕಂಪೆನಿಗೆ ಕಟ್ಟಾ ಕೊಟ್ಟ. ಅದೂ ಎಕರೆಗೆ ಆರು ಕೋಟಿಯಿದ್ದರೆ ಕಟ್ಟಾ ಕೇವಲ ಒಂದು ಕೋಟಿಗೆ ವೆಂಕಯ್ಯನ ಬಾಯಿಗೆ ಹಾಕಿದ್ದ. ಆಂಧ್ರದ ಐದು ಪ್ರಮುಖ ಬಲ್ಲಿದರುಗಳಿಗೆ ನೂರೆಂಬತ್ತು ಎಕರೆಯನ್ನು ವೆಂಕಯ್ಯನಿಗೇ ನಿಂತು ಕಟ್ಟಾ ಮೂಲಕ ಯಡ್ಡಿ ಕೊಡಿಸಿಕೊಟ್ಟ. ಆಂಧ್ರದ ಭೂಗಳ್ಳರಾದ ವೆಚ್ಚರೆಡ್ಡಿ, ಕುಮಾರಸ್ವಾಮಿ ರೆಡ್ಡಿ ಹಿಂದೆ ದೇಶಪಾಂಡೆಯ ಮೂಲಕ ನೆಲ ದೋಚಿದಂತೆ ವೆಂಕಯ್ಯನನ್ನು ಮುಂದಿಟ್ಟು ರೈತರ ಭೂಮಿ ಕೊಳ್ಳೆ ಹೊಡೆದರು.

ಇಷ್ಟೆಲ್ಲಾ ಕೊಟ್ಟೂ ವೆಂಕಯ್ಯ ಬೆಂಗಳೂರಿಗೆ ಬಂದಾಗಲೆಲ್ಲ ತಂಗಲಿಕ್ಕೆಂದು ಲೀ ಮೆರಿಡಿಯನ್ ಹೋಟೆಲ್ ಪಕ್ಕದ ಸುಮೀತ್ ಅಪಾರ್ಟ್‌ಮೆಂಟಿನಲ್ಲೊಂದು ಫ್ಲಾಟನ್ನೂ ಕಟ್ಟಾ ನಾಯ್ಡು ಕೊಡಿಸಿಕೊಟ್ಟ. ಇನ್ನು ಯಡ್ಡಿ ತನ್ನ ಕಾಣಿಕೆಯೆಂದು ವೆಂಕಯ್ಯನ ಜಿಎಂಆರ್ ಕಂಪೆನಿಗೊಂದು ಸಕ್ಕರೆ ಫ್ಯಾಕ್ಟರಿಯನ್ನೂ, ಜಲ ವಿದ್ಯುತ್ ಪ್ರಾಜೆಕ್ಟನ್ನೂ ಮಂಜೂರು ಮಾಡಿಸಿ ಈ ಪೈಕಿ ಸಕ್ಕರೆ ಕಾರ್ಖಾನೆಗೆ ತಾವೇ ಪಾರ್ಟ್‌ನರ್ ಆಗಿಬಿಟ್ಟರು. ಶಿವಮೊಗ್ಗದಲ್ಲಿ ವೆಂಕಯ್ಯ ಕಟ್ಟುವ ಸಕ್ಕರೆ ಕಾರ್ಖಾನೆಗೆ ತನ್ನ ಜೊತೆ ಕೆಪಿಎಸ್‌ಸಿಯ ಸದಸ್ಯ ರುದ್ರೇಗೌಡನನ್ನೂ ಯಡ್ಡಿ ಪಾಲುದಾರನನ್ನಾಗಿಸಿಕೊಂಡರು. ಹೇಳಿಕೇಳಿ ಅದು ಮುನ್ನೂರು ಕೋಟಿಯ ಶುಗರ್ ಫ್ಯಾಕ್ಟರಿ. ಅದಕ್ಕೆಂದು ಬಂಟ ರುದ್ರೇಗೌಡ ಲೋಕಸೇವಾ ಆಯೋಗದಲ್ಲಿ ಲೂಟ ಶುರು ಹಚ್ಚಿಕೊಂಡಿದ್ದಾನೆ.

ಲೆಕ್ಕಾಚಾರ ಹೇಗಿದೆಯೆಂದರೆ ನಾಯ್ಡು-ಯಡ್ಡಿಗಳ ಸಕ್ಕರೆ ಕಾರ್ಖಾನೆಯಲ್ಲಿ ಮೊಲಾಸ್ಸಿಸ್ಸು ಉತ್ಪತ್ತಿಯಾದರೆ ಅದು ಯಡ್ಡಿ-ಈಶ್ವರಪ್ಪ ಜೋಡಿಯ ಡಿಸ್ಟಿಲ್ಲರಿಗೆ ಬಂದುಬೀಳುತ್ತದೆ. ಸಕ್ಕರೆ ಹೆಸರಲ್ಲಿ ಮೊಲಾಸ್ಸಿಸ್ಸು ಡಿಸ್ಟಿಲ್ಲರಿಯಲ್ಲಿ ವಿಸ್ಕಿ ರಮ್ಮು!

ಶಿವಮೊಗ್ಗದ ಶಿಖಂಡಿಗಳ ಜೊತೆ ಆಂಧ್ರದ ದೊಂಗ ಬಲು ಅಪರೂಪದ ಜೋಡಿಯಂತೂ ಖಂಡಿತಾ ಅಲ್ಲ.



ವೆಂಕಯ್ಯನಾಯ್ಡುಗೆ ಕಟ್ಟಾ ಕೊಡಿಸಿರುವ 'ಸುಮಿತ್' ಅಪಾರ್ಟ್‌ಮೆಂ...

ದಲಿತ ಖೋಟಾಕ್ಕೂ ಜಿದ್ದಾಜಿದ್ದಿ

ಸಚಿವ ಸಂಪುಟದ ವಿಸ್ತರಣೆಯಾದರೆ ಬಜೆಪಿಯ ಇಬ್ಬರ ಪೈಕಿ ಒಂದು ಮಹಿಳೆಗೂ ಮತ್ತೊಂದು ದಲಿತರಿಗೂ ಸಲ್ಲಬೇಕು. ಬಿಜೆಪಿಯ ಮಹಿಳೆಯರ ಪೈಕಿ ವಿಮಲಾಗೌಡ ಪಕ್ಷಕ್ಕಾಗಿ ಜೀವ ತೇದವರು. ಜೊತೆಗೆ ಅನಂತ್ ನಿಷ್ಠೆ, ಸೀನಿಯಾರಿಟಿಯಲ್ಲೂ ಅವರಿಗೇ ಸಲ್ಲಬೇಕು. ಆದರೆ ಯಡ್ಡಿ-ಗೌಡರಿಗೆ ಕರಂದ್ಲಾಜೆಯನ್ನೇ ಮಂತ್ರಿ ಮಾಡುವ ಮರಾತೆ.

ಪರಿಶಿಷ್ಟರ ಪೈಕಿ ಮಂತ್ರಿಯಾಗುವ ಎಲ್ಲಾ ಯೋಗ್ಯತೆಯಿರುವುದು ಮೂಡಿಗೆರೆಯ ಶಾಸಕ ಕುಮಾರಸ್ವಾಮಿಗೆ. ಇವತ್ತಿಗೂ ಹೆಂಚಿನ ಮನೆಯಲ್ಲಿದ್ದು, ಬೇರೆಲ್ಲಾ ಬಜೆಪಿ ಶಾಸಕರಂತೆ ಮುಖ್ಯಮಂತ್ರಿಯಿಂದ ಸೈಟು ಕೂಡ ಗಿಟ್ಟಿಸಲಾಗದೇ ಏಗುವ ಕುಮಾರಸ್ವಾಮಿಗೆ ಮಂತ್ರಿಗಿರಿ ತಪ್ಪಿಸಲು ಅನಂತ್ ಬಣ ಬೀದರ್‌ನ ರಾಜೇಂದ್ರ ವರ್ಮನನ್ನು ಎತ್ತಿಕಟ್ಟಿದೆ. ಅದು ಮಿಸ್ಸಾದರೆ ಯಾವುದಕ್ಕೂ ಇರಲೆಂದು ಡಿ.ಎಸ್. ವೀರಯ್ಯನನ್ನು ಛೂ ಬಿಟ್ಟಿದೆ. ಇಲ್ಲಿ ಒಳಿತು ಕೆಡುಕಿಗಿಂತಲೂ ಯಾರು ಯಾರಿಗೆ ನಿಷ್ಠರೆಂಬುದೇ ಪ್ರಶ್ನೆಯಾಗಿದೆಯೆಂದರೆ ಬಜೆಪಿಗೂ ಕಾಂಗ್ರೆಸ್ಸಿಗೂ ಏನು ವ್ಯತ್ಯಾಸ ಬಂತು?

◀ ಕರ್ನಾಟಕ ಪ್ರಾಂತ ಪ್ರಚಾರಕ ಮಂಗಳೂರಿನ ಕಲ್ಲಡ್ಕ ಪ್ರಭಾಕರ ಭಟ್ಟ, ಬೌದ್ಧಿಕ್ ಪ್ರಮುಖ ಕಲ ನರಹರಿಥರದವರೆಲ್ಲ ಶೋಭಕ್ಕನಿಗೇ 'ಜೈ' ಎಂದುಬಿಟ್ಟರು. ಇಷ್ಟಾದ ಮೇಲೆ ಪಕ್ಕಾ ಬಂಟ ಜಗದೀಶ್ ಶೆಟ್ಟರ್ ತಾನೇ ಹೇಗೆ ಅನಂತ್ ಬೆನ್ನಿಗಿದ್ದಾರು? ಸಾಕಿ ಬೆಳೆಸಿದ್ದಲ್ಲ ಅನಂತಿಯೇ ಆದರೂ ಮಂತ್ರಿಗಿರಿ ಮುಖ್ಯ. ಜೊತೆಗೆ ಸಹೋದರ ಪ್ರದೀಪ್‌ಶೆಟ್ಟರ್ ಮತ್ತು ಮಂಗಳೂರಿನ ರಮೇಶ್ ಶೆಟ್ಟಿ ಪಾಲುದಾರಿಕೆಯ ಮಧುರಾ ಬಿಲ್ಡರ್ಸ್ ಈ



ಜಗದೀಶ್ ಶೆಟ್ಟರ್ | ಡಿ.ವಿ. ಸದಾನಂದಗೌಡ | ಈಶ್ವರಪ್ಪ | ರಾಮಚಂದ್ರೇಗೌಡ

ಹೊತ್ತಿಗಾಗಲೇ ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ದಂಧೆಗೆ ಕೈಹಾಕಿತ್ತು. ಯಲಹಂಕ ಸಮೀಪದ ಮೂವತ್ತೆಕರೆಯ ಬಿಡಿಎ ಲ್ಯಾಂಡು ಮತ್ತು ಸರ್ಜಾಪುರ ರಿಂಗ್ ರಸ್ತೆಯಲ್ಲಿ ಶೆಟ್ಟರ್ ಕಣ್ಣಿಟ್ಟಿದ್ದ ಇಪ್ಪತ್ತೆಕರೆಯ ಮತ್ತೊಂದು ಬಿಡಿಎ ಫ್ಲಾಟು ದಕ್ಕಬೇಕೆಂದರೆ ಅದಕ್ಕೆ ಯಡ್ಡಿ ಕೃಪೆಯಿರಲೇಬೇಕು.

ಇಂಥ ಲೆಕ್ಕ ಹಾಕಿಯೇ ಶೆಟ್ಟರ್ ಗುರು ಅನಂತ್ ನಿಷ್ಠೆಗೆ ವಿದಾಯ ಹೇಳಿಬಿಟ್ಟರು. ಇನ್ನು ಈಶ್ವರಪ್ಪನವರಿಗೆ ಅದೃಷ್ಟವೋ ಎಂಬಂತೆ ತಮ್ಮಿಬ್ಬರ ಪಾಲುದಾರಿಕೆಯಲ್ಲಿ ಶಿವಮೊಗ್ಗದಲ್ಲೊಂದು ಡಿಸ್ಟಿಲ್ಲರಿ ತೆಗೆಯೋಣ ಎಂಬ ಪ್ರೊಪೋಸಲ್ಲನ್ನೂ ಈಶ್ವರಪ್ಪನವರ ಮುಂದಿಟ್ಟ ಯಡ್ಡಿ ಅದಕ್ಕೆಂದು ನೂರು ಕೋಟಿಯ ಪ್ರಾಜೆಕ್ಟನ್ನೂ ಸಿದ್ಧಪಡಿಸಿದ್ದಾರೆ. ಈ ಹೊತ್ತಿಗಾಗಲೇ ಗೊಬ್ಬರದ ಏಜೆನ್ಸಿ, ಟ್ರಾಕ್ಟರ್ ಏಜೆನ್ಸಿ, ಮೊಬೈಲ್ ಏಜೆನ್ಸಿ, ಶಿವಮೊಗ್ಗದಲ್ಲಿ ಲ್ಯಾಂಡು, ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟು ಎಲ್ಲಕ್ಕೂ ಕೈಹಾಕಿದ್ದ ಈಶ್ವರಪ್ಪ ಅನಂತ್ ನಿಷ್ಠೆಗೆ ಬಿದ್ದು ಇದೆಲ್ಲವನ್ನೂ ಕಳೆದುಕೊಳ್ಳುವ ದಡ್ಡರಂತೂ ಅಲ್ಲವೇ ಅಲ್ಲ.

ಯಾರೇ ಕೈಬಿಟ್ಟರೂ ಆರೋಗ್ಯ ಮಂತ್ರಿ ಅಶೋಕ್ ತನ್ನ ಕೈಬಿಡಲಾರ ಎಂಬುದು ಅನಂತ್ ನಂಬಿಕೆಯಾಗಿತ್ತು. ಆದರೆ ಅಶೋಕ್‌ಗೆ ಉಭಯ ಸಂಕಟ. ಆರೋಗ್ಯ ಇಲಾಖೆಯ ಇನ್ನೂರು ಕೋಟಿಯ ಔಷಧಿ ಖರೀದಿ ಪ್ರಾಜೆಕ್ಟಿಗೆ ಹಣಕಾಸು ಮಂತ್ರಿ ಯಡ್ಡಿಯ ಕೃಪೆ ಬೇಕೇಬೇಕು. ಅಶೋಕ್ ಅಲ್ಲದೆ ಪಶುಸಂಗೋಪನಾ ಮಂತ್ರಿ ರೇವೂ ನಾಯಕ್ ಬೆಳಮಗಿ, ಸಿ.ಎಂ. ಉದಾಸಿ, ನಾಗರಾಜ ಶೆಟ್ಟಿ, ಶಂಕರಮೂರ್ತಿ, ಶಿವಾನಂದ ನಾಯ್ಕ್ ಇತ್ಯಾದಿ ಮಂತ್ರಿಗಳ್ಯಾರಿಗೂ ಅನಂತ್ ಸಂಘ ಬೇಕಿಲ್ಲ. ಶೋಭಕ್ಕನ ಕಣ್ಣು ತಪ್ಪಿಸಿ ಅನಂತ್ ಜೊತೆ ಮಾತಾಡುವುದಕ್ಕೂ ಭಯ. ಇದ್ದುದರಲ್ಲಿ ವಿ.ಎಸ್. ಆಚಾರ್ಯಮತ್ತು ಶಶಿಕಾಂತ್ ನಾಯಕ್ ತಟಸ್ಥರಾಗಿದ್ದಾರೆ ನಿಜ. ಇವರಿಗೂ ಯಡ್ಡಿಯ ಭಯ ಇದ್ದದ್ದೇ.



ಆರೆಸ್ಸೆಸ್ ಪಾಲಾದ ಬಿಜೆಪಿ ಕೇಂದ್ರ ಕಚೇರಿ

ನೀರಾವರಿ ಖಾತೆ ಕೊಡಿಸಿದ್ದೇ ಯಡ್ಡಿ. ಶಿವಮೊಗ್ಗದ ಸುತ್ತಮುತ್ತ ಈಶ್ವರಪ್ಪ ಖರೀದಿಸಿದ ಲ್ಯಾಂಡು, ಅವರ ಮಗಳ ಹೆಸರಿಗೆ ಕೆಐಎಡಿಬಿಯಿಂದ ಮಂಜೂರಾದ ಕೋರಮಂಗಲ ರಿಂಗ್‌ರಸ್ತೆಯ ಜಮೀನು ಎಲ್ಲವೂ ಯಡ್ಡಿ ಕೃಪೆಯಿಂದಲೇ ಬಂದಿದ್ದು.


ಇಡೀ ಸಚಿವ ಸಂಪುಟದಲ್ಲಿ ಅನಂತ್ ಪರ ದನಿಯೆತ್ತುವ ಒಬ್ಬನೇ ಒಬ್ಬ ಮಂತ್ರಿಯಿಲ್ಲ. ಪಕ್ಷದ ಹಿಡಿತ ಕೂಡ ಅನಂತ್ ಕೈತಪ್ಪಿದೆ. ತೀರ ಇತ್ತೀಚೆಗೆ ಆಯಾ ಜಿಲ್ಲೆಗಳ ಬಜೆಪಿ ಅಧ್ಯಕ್ಷರ ನೇಮಕಾತಿಯಲ್ಲೂ ಯಡ್ಡಿ-ಶೋಭಾ ಜೋಡಿಯ ಕೈಯೇ ಮೇಲಾಗಿದೆ. ತನ್ನ ಛೇಲಾಗಳು, ಯಡ್ಡಿಗೆ ನಿಷ್ಠರಾದವರನ್ನೇ ಶೋಭಾ ಕರಂದ್ಲಾಜೆ ಬಜೆಪಿ ಜಿಲ್ಲಾಧ್ಯಕ್ಷರನ್ನಾಗಿ ನೇಮಿಸಿದ್ದು, ಇಪ್ಪತ್ತೇಳು ಜಿಲ್ಲೆಗಳ ಪೈಕಿ ಅನಂತ್ ಬಣದ ಏಳೋ-ಎಂಟೋ ಮಂದಿಗೆ ಮಾತ್ರ ಜಿಲ್ಲಾಧ್ಯಕ್ಷತೆ ದಕ್ಕಿದ್ದು ಯಡ್ಡಿಗಿಂತಲೂ ಪಕ್ಷದ ಮೇಲೆ ಶೋಭಕ್ಕನ ಪ್ರಭಾವವನ್ನೇ ಇಮ್ಮಡಿಗೊಳಿಸಿತು.

ಸದ್ಯ ಅನಂತ್ ಜೊತೆ ಧೈರ್ಯವಾಗಿ ಗುರುತಿಸಿಕೊಳ್ಳುವವರೆಂದರೆ ಮಂತ್ರಿಗಿರಿಯಿಲ್ಲದೆ ಕಂಗೆಟ್ಟ ಪಿ.ಸಿ. ಮೋಹನ್, ಸಿ.ಟಿ. ರವಿ, ಸುನೀಲ್ ಕುಮಾರ್, ಲಿಂಬಾವಳಿ, ಪ್ರಕಾಶ್ ಖಂಡ್ರೆ ಮುಂತಾದ ಅತೃಪ್ತ ಶಾಸಕರು ಮಾತ್ರ. ಇಂತಹ ಇಪ್ಪತ್ತೆರಡು ಮಂದಿ ಶಾಸಕರನ್ನು ಕಟ್ಟಿಕೊಂಡು ದೆಹಲಿ ದಂಡಯಾತ್ರೆಗೆ ಹೋದರೆ ಅಲ್ಲೂ ಅನಂತ್‌ಗೆ ಮುಖಭಂಗವಾಯ್ತು. ಬಿಜೆಪಿ ವರಿಷ್ಠರಾದ ಓಂಪ್ರಕಾಶ್ ಕೋಯ್ಲಿ, ಸಂಜಯ್ ಜೋಷಿ, ವೆಂಕಯ್ಯ ನಾಯ್ಡು, ಬಾಳಾ ಆಪ್ಟೆ ಇತ್ಯಾದಿಗಳೆಲ್ಲರಿಗೂ ಸದಾನಂದ ಗೌಡರನ್ನು ಇಳಿಸಿ ಎಂದು ಅನಂತ್ ಅನುಯಾಯಿಗಳು ಮನವಿ ಮಾಡಿದ್ದೇ ಮಾಡಿದ್ದು. ಈ ಪೈಕಿ ಬಾಳಾ ಆಪ್ಟೆಗೆ ಮೊದಲಿನಿಂದಲೂ ಅನಂತ್ ಕಂಡರೆ ಹೊಟ್ಟೆ ಉರಿ. ಜೊತೆಗೆ ಅರುಣ್ ಜೈಟ್ಲಿ, ಸುಷ್ಮಾ ಸ್ವರಾಜ್, ರಾಜನಾಥ್ ಸಿಂಗ್ ತರದ ಬಿಜೆಪಿಯ ಸೆಕೆಂಡ್ ಲೈನ್ ಲೀಡರುಗಳಿಗೆ ಅನಂತ್ ತರದ ಮದ್ರಾಸಿಯೊಬ್ಬನನ್ನು ಅಡ್ವಾಣಿಯೇ ನಿಂತು ಬೆಳೆಸುತ್ತಿರುವುದು ಹೊಟ್ಟೆಯೊಳಕ್ಕೆ ಖಾರ ಕಲಿಸಿದಂತಾಗಿದೆ.

ಒಂದೆಡೆ ಅನಂತ್ ಪರ ಶಾಸಕರ ಬೇಡಿಕೆಗೂ ತಲೆದೂಗಿದ ಬಾಳಾ ಆಪ್ಟೆ, ಮತ್ತೊಂದೆಡೆಯಿಂದ ಯಡ್ಡಿಗೆ ಫೋನಾಯಿಸಿ ದಿಲ್ಲಿಯಲ್ಲಿ ನಿಮ್ಮ ತಾಕತ್ತನ್ನೂ ತೋರಿಸಿಬಿಡಿ ಎಂದು ಛೂ ಬಿಟ್ಟಿದ್ದ. ಇಷ್ಟಾಗಿದ್ದೇ ತಡ ಹೊನ್ನಾಳಿ ಶಾಸಕ ರೇಣುಕಾಚಾರ್ಯ, ಎಮ್ಮೆಲ್ಸಿ ಮನೋಹರ ಮಸ್ಕಿ, ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಶಾಬಾದ್ ಶಾಸಕ ಸುನೀಲ ಯಲ್ಲಾಪೂರ್, ಮಾಲೂರಿನ ಕೃಷ್ಣಯ್ಯ ಶೆಟ್ಟಿ, ಬಸವರಾಜು ಮುಂತಾದ 40 ಮಂದಿ ಶಾಸಕರ ಹಿಂಡು ದೆಹಲಿಗೆ ದಾವಿಸಿದ್ದೇ ಸದಾನಂದ ಗೌಡರನ್ನೇ ಮುಂದುವರೆಸಿ ಎಂದು ಇನ್ನೊಂದು ರೌಂಡ್ ಮನವಿ ಮಾಡುತ್ತಾ ಸಾಗಿತು. ಅನಂತ್ ಸರ್ಕಾರ ಉರುಳಿಸಲು ಯತ್ನಿಸುತ್ತಿದ್ದಾರೆಂದು ಚಾಡಿಯನ್ನೂ ಚುಚ್ಚಿತು.

ಕೊನೆಗೂ ಸದಾನಂದಗೌಡರನ್ನು ಇಳಿಸುವುದು ಅನಂತ್ ಕೈಲಾಗಲೇ ಇಲ್ಲ. ತನ್ನವರನ್ನೇ ಬಹುಸಂಖ್ಯೆಯಲ್ಲಿ ಜಿಲ್ಲಾಧ್ಯಕ್ಷರನ್ನಾಗಿಸುವುದಕ್ಕೂ ಆಗಿಲ್ಲ. ಬಿಜೆಪಿ ರಾಷ್ಟ್ರೀಯ ಪರಿಷತ್ತಿಗೆ ತನಗೆ ನಿಷ್ಠರಾದವರನ್ನೇ ಆಯ್ದು ಕಳಿಸುವ ಆಶೆಗೂ ಯಡ್ಡಿ ಕಲ್ಲು ಹಾಕಿದ್ದಾರೆ. ನಿಗಮ ಮಂಡಳಿಗಳಲ್ಲಾದರೂ ತನ್ನ ನಿಷ್ಠರಿಗೆ ಸ್ಥಾನ ಸಿಗಬಹುದೆಂದರೆ ಅದಕ್ಕೂ ಯಡ್ಡಿ ತಡೆಯೊಡ್ಡುತ್ತಾರೆ. ಅಧಿಕಾರ, ಭ್ರಷ್ಟಾಚಾರ ಮತ್ತು ದುಡ್ಡಿನ ದೌಲತ್ತಿನ ಮುಂದೆ ಅನಂತ್ ಅಳಲು ಅರಣ್ಯರೋಧನದಂತಾಗಿದೆ. ವ್ಯತ್ಯಾಸವೆಂದರೆ ಅಧಿಕಾರವಿದ್ದಾಗ ಅನಂತ್ ಹಂಚಿ ತಿನ್ನಲಿಲ್ಲ. ಆದರೆ ಯಡ್ಡಿಗೆ ತಿನ್ನುವುದೂ ಗೊತ್ತು, ತಿನ್ನಿಸುವುದೂ ಗೊತ್ತು ಮತ್ತು ಅದೇ ಆತನ ತಾಕತ್ತು. ಮುಂದೊಮ್ಮೆ ಇಡೀ ಬಿಜೆಪಿ ಯಡ್ಡಿಯ ಮನದನ್ನೆ ಶೋಭಕ್ಕನ ನಿಯಂತ್ರಣಕ್ಕೊಳಪಟ್ಟರಂತೂ ಇನ್ನೂ ಗಮ್ಮತ್ತು! ●

ಯುಪಿ ಚುನಾವಣೆಗೆ ಇನ್ನೂರು ಕೋಟಿ



ಬಿಜೆಪಿ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ ಮೂಲತಃ ಅನಂತ್‌ಕುಮಾರ್ ವಿರೋಧಿಯೇನಲ್ಲ. ಸದಾನಂದಗೌಡರನ್ನೇ ರಾಜ್ಯ ಬಿಜೆಪಿ ಅಧ್ಯಕ್ಷಗಾದಿಯಲ್ಲಿ ಮುಂದುವರೆಸಲು ಅವರಿಗೆ ವಿಶೇಷ ಕಾರಣ ಕೂಡ ಇರಲಿಲ್ಲ. ಯಡ್ಡಿ ಪಟಾಲಂನ ಅಷ್ಟೂ ಮಂತ್ರಿಗಳ ಭ್ರಷ್ಟಾಚಾರದ ಬಗ್ಗೆ ಅನಂತ್ ಬಣದ ಚರಂತಿ ಮಠ, ಸವ್ಪುರ ಮತ್ತು ಲಿಂಬಾವಳಿ ಸೇರಿಕೊಂಡೇ ಹೈಕಮಾಂಡ್‌ಗೆ ದೂರಿತ್ತಿದ್ದರು. ಈ ಪೈಕಿ ಭಾರೀ ಕೈಗಾರಿಕಾ ಮಂತ್ರಿ ಕಟ್ಟಾ ಸುಬ್ರಮಣ್ಯ ನಾಯ್ಡು ಕೆಐಎಡಿಬಿಯ ಹೆಸರಲ್ಲಿ ಬಡರೈತರ ಭೂಮಿ ಕಿತ್ತು ಆಂಧ್ರದ ಭೂಗಳ್ಳರಿಗೆ ಕೊಟ್ಟ ಬಗ್ಗೆ ದಾಖಲೆಗಳ ಪಟ್ಟಿಯನ್ನೇ ರಾಜನಾಥ್ ಸಿಂಗ್ ಕೈಗಿಟ್ಟಿದ್ದರು.

ರಾಮಚಂದ್ರಗೌಡ ಮತ್ತು ಶೋಭಾ ಕರಂದ್ಲಾಜೆ ಸೇರಿ ಖರೀದಿಸಿದ ಭೂಮಿಗಳ ಬಗ್ಗೆ, ಯಡ್ಡಿ ಶಿವಮೊಗ್ಗ ಮತ್ತು ಬೆಂಗಳೂರು ಸುತ್ತಮುತ್ತ ಖರೀದಿಸಿದ ಆಸ್ತಿಗಳ ಬಗ್ಗೆ, ಈಶ್ವರಪ್ಪ, ಶೆಟ್ಟರ್, ಸದಾನಂದಗೌಡರು ನಡೆಸಿದ ಅಕ್ರಮ ಆಸ್ತಿಗಳ ಬಗ್ಗೆಯೂ ಅನಂತ್ ಬಣ ಕೇಂದ್ರ ವರಿಷ್ಠರ ಗಮನ ಸೆಳೆದಿತ್ತು. ಸಿಂಗಲ್ ನಂಬರ್ ಲಾಟರಿಕೋರರಿಂದ ಲಾಟರಿಮಂತ್ರಿ ರಾಮಚಂದ್ರಗೌಡರು ಪಡೆಯುತ್ತಿದ್ದ ವೀಕ್ಲಿ 50 ಲಕ್ಷದ ಹಫ್ತಾ ಮತ್ತು ಕರ್ನಾಟಕದಲ್ಲಿ ಲಾಟರಿ ವಿರೋಧಿಸಿ ಬಿಜೆಪಿ ನಡೆಸಿದ ಹೋರಾಟಗಳನ್ನೂ ಹೈಕಮಾಂಡ್ ಗಮನಕ್ಕೆ ತರಲಾಗಿತ್ತು.

ಇಂಥ ಕಾರಣಗಳನ್ನಿಟ್ಟೇ ನಿಷ್ಕ್ರಿಯ ಸದಾನಂದಗೌಡರನ್ನು ಇಳಿಸಿ ಆ ಜಾಗಕ್ಕೆ ಯತ್ನಾಳರನ್ನು ತರುವುದು ಅನಂತ್ ಉದ್ದೇಶವಾಗಿತ್ತು. ದುರಂತವೆಂದರೆ ಬಿಜೆಪಿ ಹೈಕಮಾಂಡೇ ರಾಜ್ಯದ ಲೂಟಿಗೆ ಕೈ ಜೋಡಿಸಿಬಿಟ್ಟಿತು. ಎಲ್ಲಕ್ಕೂ ಮಿಗಿಲಾಗಿ ಯಡ್ಡಿ ಗ್ಯಾಂಗಿನ ಹಿತಕಾಯುವುದು ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್‌ಗೇ ಅನಿವಾರ್ಯವಾಗಿತ್ತು. ಸದಾನಂದಗೌಡರನ್ನೇ ಮುಂದುವರಿಸಿದ್ದೇ ಆದರೆ ಬರುವ ಫೆಬ್ರವರಿಯ ಉತ್ತರ ಪ್ರದೇಶದ ಚುನಾವಣೆಗೆ ಇನ್ನೂರು ಕೋಟಿ ರೂಪಾಯಿ ಗಂಟು ಮಾಡಿಕೊಡುತ್ತೇವೆಂದು ಯಡ್ಡಿ-ಗೌಡರು ರಾಜನಾಥ್ ಸಿಂಗ್ ಕಿವಿಕಚ್ಚಿಬಿಟ್ಟರು.

ಹೇಗೂ ಯುಪಿ ಚುನಾವಣೆಗೆ ದುಡ್ಡು ಬೇಕು. ಈ ಬಾರಿ ಶತಾಯಗತಾಯ ಅಲ್ಲಿ ಬಿಜೆಪಿಯನ್ನು ಗೆಲ್ಲಿಸಬೇಕು. ಅದಕ್ಕೆ ಕರ್ನಾಟಕವನ್ನೇ ಕೊಳ್ಳೆ ಹೊಡೆದರೆಷ್ಟು, ಸಿಂಗಲ್ ನಂಬರ್ ಲಾಟರಿಯನ್ನೇ ಇಟ್ಟರೆಷ್ಟು ಅಂತೂ ಬಿಜೆಪಿ ಹೈಕಮಾಂಡಿಗೆ ದುಡ್ಡು ಮುಖ್ಯ. ಅದಕ್ಕೇ ಯಡ್ಡಿ ಹೇಳಿದ್ದಕ್ಕೆಲ್ಲ ರಾಷ್ಟ್ರಾಧ್ಯಕ್ಷ ರಾಜನಾಥ್ ತಲೆದೂಗುತ್ತಿದ್ದಾರೆ. ಅನಂತ್ ಬಣ ಅವರ ಕಣ್ಣಿಗೆ ವಿಲನ್‌ಗಳಂತೆ ಕಾಣುತ್ತಿದೆ.

ಇನ್ನೂರು ಕೋಟಿಯೆಂದರೆ ಕಮ್ಮಿಯಾ? ●



ಕರ್ನಾಟಕಕ್ಕೊಬ್ಬಳು ಜಯಲಲಿತಾ?

ಉಪಮುಖ್ಯಮಂತ್ರಿ ಯಡ್ಡಿ ಕರ್ನಾಟಕದ ಪಾಲಿಗೆ ಮತ್ತೊಬ್ಬ ಎಂಜಿಆರ್ ಅಥವಾ ಎನ್‌ಟಿಆರ್ ಆಗದೇ ಹೋದರೂ ಕರ್ನಾಟಕಕ್ಕೊಬ್ಬಳು ಜಯಲಲಿತಾಳನ್ನೋ ಲಕ್ಷ್ಮಿ ಶಿವಪಾರ್ವತಿಯನ್ನೋ ಖಂಡಿತಾ ಕೊಡುತ್ತಾರೆ!

ಇದು ಕೇವಲ ಅನಂತ್ ಬಣದ ಜೋಕಷ್ಟೇ ಅಲ್ಲ. ಶೋಭಾ ಕರಂದ್ಲಾಜೆಯನ್ನು ಪಕ್ಷದ ಮಟ್ಟದಲ್ಲಿ ಯಡಿಯೂರಪ್ಪ ಪೋಷಿಸುತ್ತಿರುವ ರೀತಿಯೇ ಇದನ್ನು ಸಮರ್ಥಿಸುತ್ತದೆ. ಯಕಶ್ಚಿತ್ ನರ್ಸ್ ಆಗಿದ್ದ ಕರಂದ್ಲಾಜೆಗೂ ಯಡ್ಡಿಗೂ ಸಂಬಂಧ ಕೂಡಿಸಿಕೊಟ್ಟಿದ್ದು ಲಾಟರಿ ಮಂತ್ರಿ ರಾಮಚಂದ್ರಗೌಡರು. ಅಲ್ಲಿಯತನಕ ಉಡುಪಿ ಸಂಸದ ಐ.ಎಂ. ಜಯರಾಮ ಶೆಟ್ಟಿಯವರ ಬಾಲಬಡುಕಿಯಂತಿದ್ದ ಕರಂದ್ಲಾಜೆ ಯಡ್ಡಿಗೆ ಅದೇನು ಮೋಡಿ ಮಾಡಿದಳೋ, ಪರಿಚಯವಾದ ಆರೇ ತಿಂಗಳಿಗೆ ಆಕೆಯನ್ನು ರಾಜ್ಯ ಬಿಜೆಪಿ ಕಾರ್ಯದರ್ಶಿಯನ್ನಾಗಿ ಯಡ್ಡಿ ನೇಮಿಸಿಬಿಟ್ಟರು. ಬೆನ್ನಿಗೇ ಎಮ್ಮೆಲ್ಸಿ ಪದವಿಯನ್ನೂ ಕರುಣಿಸಿದರು. ಎಮ್ಮೆಲ್ಸಿಯಾದ ಆರೇ ತಿಂಗಳಿಗೆ ರಾಜ್ಯ ಕಾರ್ಯದರ್ಶಿ ಹುದ್ದೆಯಿಂದ ರಾಜ್ಯ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೇರಿಸಿದರು.

ಯಡ್ಡಿ ಉಪಮುಖ್ಯಮಂತ್ರಿಯಾದ ವರ್ಷಕ್ಕೇ ಜೆಪಿ ನಗರದಲ್ಲೊಂದು ಬಂಗಲೆ, ಡಾಲರ್ಸ್ ಕಾಲೋನಿಯಲ್ಲಿ ಮತ್ತೊಂದು ಬಂಗಲೆ, ಮೂರು ಕಾರು, ಸಹೋದರನಿಗೆ ಸಂಪದ್ಭರಿತ ವೈನ್ಸ್ ಎಲ್ಲವೂ ಕರಂದ್ಲಾಜೆಯ ತಿಜೋರಿಯನ್ನು ತುಂಬಿಸಿತು. ಲಾಟರಿ ಮಂತ್ರಿ ರಾಮಚಂದ್ರಗೌಡರ ಜೊತೆ ಸೇರಿ ದೇವನಹಳ್ಳಿಯಲ್ಲಿ ನಲವತ್ತೆಕರೆ, ನೆಲಮಂಗಲದಲ್ಲಿ ಎಂಬತ್ತೆಕರೆ ಭೂಮಿ ಖರೀದಿಸಿದಳು. ರಾಮಚಂದ್ರಗೌಡರ ಮಂತ್ರಿ ನಿವಾಸವೇ ಆಕೆಯ ಡೀಲಿಂಗ್ ಅಡ್ಡೆಯಾಯಿತು.

ಸದ್ಯ ಇಡೀ ಬಿಜೆಪಿಯನ್ನು ಆವರಿಸಿರುವ ನಂಬಿಕೆಯೆಂದರೆ ಸಾಕ್ಷಾತ್ ಡಿಸಿಎಂ ಕೈಯಿಂದಲೂ ಆಗದ ಕೆಲಸಗಳನ್ನೆಲ್ಲ ಶೋಭಕ್ಕ ಮಾಡಿಕೊಂಡುತ್ತಾಳೆ! ಅದಕ್ಕೆ ಲೇಟೆಸ್ಟ್ ಉದಾಹರಣೆಯೇ ಬಿಜೆಪಿ ಜಿಲ್ಲಾಧ್ಯಕ್ಷರ ನೇಮಕಾತಿ. ಚಿತ್ರದುರ್ಗಕ್ಕೆ ತನ್ನ ಚೇಲಾ ಸುರೇಶನನ್ನೂ, ಚಿಕ್ಕಮಗಳೂರಿಗೆ ಶಿಷ್ಯ ಬೋಜೇಗೌಡನನ್ನೂ ಅಧ್ಯಕ್ಷರನ್ನಾಗಿ ನೇಮಿಸಿದ್ದೇ ಶೋಭಕ್ಕ. ಚಾಮರಾಜನಗರಕ್ಕೆ ಬಿಜೆಪಿ ಜಿಲ್ಲಾಧ್ಯಕ್ಷನಾದ ಸುಂದರ್, ಮೈಸೂರು ಜಿಲ್ಲಾಧ್ಯಕ್ಷ ಆರ್ಕೆಸ್ವಾ ಮಂಜು, ತುಮಕೂರಿನ ಕಿರಣ್‌ಕುಮಾರ್ ಮುಂತಾದವರೆಲ್ಲ ಯಡ್ಡಿಗಿಂತಲೂ ಕರಂದ್ಲಾಜೆಗೇ ಅಧಿಕ ನಿಷ್ಠರು. ಉಳಿದಂತೆ ಅನಂತ್ ಬಣದ ಅನೇಕರನ್ನು ಕೆಳಕ್ಕಿಳಿಸಿ ಬಹುತೇಕ ಯಡ್ಡಿ ನಿಷ್ಠರನ್ನೇ ಜಿಲ್ಲಾಧ್ಯಕ್ಷರನ್ನಾಗಿ ಮಾಡಿದ್ದಾಳೆ ಕರಂದ್ಲಾಜೆ. ಈಕೆಯನ್ನೇ ಬಿಜೆಪಿ ರಾಷ್ಟ್ರೀಯ ಪರಿಷತ್ತಿಗೆ ಕಳಿಸಲು ಸದ್ಯ ಯಡ್ಡಿ ಪಟ್ಟು ಹಿಡಿದಿದ್ದಾರಾದರೂ ಅದನ್ನು ಅನಂತ್ ಗುಂಪು ಇನ್ನಿಲ್ಲದಂತೆ ಪ್ರತಿಭಟಿಸುತ್ತದೆ.

ಪರಿಸ್ಥಿತಿ ಹೀಗೇ ಮುಂದುವರಿಯಿತೆಂದರೆ ಮುಂಬರುವ ನಿಗಮ ಮಂಡಳಿಗಳ ನೇಮಕಾತಿಯಲ್ಲೂ ಕರಂದ್ಲಾಜೆಯ ಶಿಷ್ಯರೇ ಸಿಂಹಪಾಲು ಗಿಟ್ಟಿಸುತ್ತಾರೆ. ಅದಕ್ಕೆಂದು ಬಿಜೆಪಿಯ ಅನೇಕ ಕಾರ್ಯಕರ್ತರು ಈಗಿನಿಂದಲೇ 'ಶೋಭಾಯಾತ್ರೆ', 'ಶೋಭಾಭಜನೆ'ಯಲ್ಲಿ ನಿರತರಾಗಿದ್ದಾರೆ. ಆರೆಸ್ಸೆಸ್ ಮುಖ್ಯಸ್ಥರಾದ ಮೈ.ಚ. ಜಯದೇವ, ಹಾ.ಮ. ರವೀಂದ್ರ, ಕಲ್ಲಡ್ಕ ಪ್ರಭಾಕರ ಭಟ್ಟರೇ ಬಹಿರಂಗವಾಗಿ ಆಕೆಯನ್ನು ಸಮರ್ಥಿಸುತ್ತಾರೆಂದರೆ ಮುಂದೊಮ್ಮೆ ಇಡೀ ಬಿಜೆಪಿಯೇ ಈಕೆಯ ಕೈವಶವಾದರೆ ಅಚ್ಚರಿಯೇನಿಲ್ಲ.

ಕರ್ನಾಟಕಕ್ಕೊಬ್ಬಳು ಜಯಲಲಿತಾ ಬಂದರೆ, ಮತ್ತೊಬ್ಬಳು ಲಕ್ಷ್ಮೀ ಶಿವಪಾರ್ವತಿಯನ್ನು ಕಾಣುವ ದೌರ್ಭಾಗ್ಯ ಕನ್ನಡಿಗರಿಗಿದ್ದರೆ ತಡೆಯುವವರ್ಯಾರು?

ದಿನಕರ್ ನಕ್ಸಲ್ ಆಗಿದ್ದೇಕೆ?

ತಾನೊಬ್ಬ ನಕ್ಸಲೈಟ್ ಆಗಬೇಕು, ಮನೆ ತೊರೆದು ಬಂದೂಕೆತ್ತಿಕೊಂಡು ಅನ್ನ ನೀರಿಲ್ಲದೇ ಕಾಡು ಮೇಡು ಸುತ್ತಬೇಕು ಮತ್ತು ಹೀಗೆ ಸರ್ಕಾರದ ಗುಂಡಿಗೆ ಸಿಲುಕಿ ಸಾಯಬೇಕೆಂದು ಯಾವ ಮನುಷ್ಯ ತಾನೇ ಬಯಸಿಯಾನು?

ಆದರೆ ಹಾಗೆನ್ನೆ ಬಡಬೇಕಲ್ಲ! ಆತನನ್ನು ಓರ್ವ ನಕ್ಸಲ್ ಯೋಧನನ್ನಾಗಿ ಮಾಡಿದ್ದೂ ಅಲ್ಲದೇ ಅವನನ್ನು ಗುಂಡಿಟ್ಟು ಕೊಲ್ಲುವತನಕ ಅದು ಬಿಡಲಿಲ್ಲ. ಆತನೇ ಕಾಮ್ರೇಡ್ ದಿನಕರ್!

ದಿನಕರ್ ಮಲೆಕುಡಿಯ ಆತನ ಪೂರ್ತಿ ಹೆಸರು. ವಯಸ್ಸಿನ್ನೂ ಮೂವತ್ತಾಗಿರಲಿಲ್ಲ. ಇದೇ ಡಿಸೆಂಬರ್ 25 ರ ರಾತ್ರಿ ಕುದುರೆಮುಖ ಕಾಡಿನ ಕೇಸಮುದಿ ಎಂಬ ಕುಗ್ರಾಮದಲ್ಲಿ ನಕ್ಸಲ್ ನಿಗ್ರಹದಳದ ಗುಂಡಿಗೆ ಬಲಿಯಾದ ದಿನಕರ್‌ಗೆ ತನ್ನ ಸಾವು ಕೂಡ ಹೀಗೇ ಸಂಭವಿಸುತ್ತದೆ ಎಂಬುದರ ಪರಿವೆಯಿತ್ತೆ? ಅದಕ್ಕಿಂತಲೂ ಮುಖ್ಯವಾಗಿ ಈ ಥರದ ಹೋರಾಟವೊಂದು ಆತನಿಗೆ ಅನಿವಾರ್ಯವಾಯಿತೆ? ಅಂಥಾದೊಂದು ಮಾನಸಿಕ ಸ್ಥಿತಿಗೆ ಆತನ ತಂದೆತಾಯಿ ಸಹೋದರರೆಲ್ಲರೂ, ಮೊದಲೇ ಸಜ್ಜಾಗಿದ್ದರೆ?

ದಿನಕರ್ ಹುಟ್ಟಿ ಬೆಳೆದು ಹೋರಾಡಿದ ಬೆಳ್ತಂಗಡಿ ತಾಲ್ಲೂಕು ಕುತ್ಲೂರು ಮತ್ತು ಅಲ್ಲಿಂದಾಚೆಯ ದಟ್ಟಡವಿ ಮಧ್ಯದ ಮಲೆಕುಡಿಯರ ಹಾದಿ ಸುತ್ತಿ ಬಂದ ಈ ವರದಿಗಾರನ ಮುಂದಿರುವ ಪ್ರಶ್ನೆಗಳಿವು. ಕುತ್ಲೂರು-ಆಲಂಬ ಕಾಡು ರಸ್ತೆಯಲ್ಲಿ ಕಾರು ನಿಲ್ಲಿಸಿ ಪೂರ್ವ ದಿಕ್ಕಿಗೆ ಕಾಡು ಹೊಕ್ಕರೆ ಸರಿಸುಮಾರು 4 ಕಿ.ಮೀ. ದುರ್ಗಮ ಕಾಲುದಾರಿಯೇ ದಿನಕರ್‌ನ ಮನೆಗೊಯ್ಯುತ್ತದೆ. ಯಾವುದೋ ಪ್ರಪಾತವೊಂದನ್ನು ಇಳಿದಂತೆ ಮರದ ಬೊಡ್ಡೆಗಳನ್ನು ಹಿಡಿದೇ ಇಳಿದರೆ ಒಂದಷ್ಟು ಅಡಕೆ ಮರಗಳ ಮಧ್ಯೆ ಸಣ್ಣದೊಂದು ಹೆಂಚಿನ ಮನೆಯಿದೆ. ದಿನಕರ್ ಹುಟ್ಟಿ ಬೆಳೆದದ್ದು ಅಲ್ಲೇ!

ತಂದೆ ಕೊರಗ ಮಲೆಕುಡಿಯನಿಗೆ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಲ್ಲಿ ಅಡುಗೆ ಕೆಲಸವಿತ್ತು. ತಾಯಿ ದೇಜಮ್ಮ. ಮೊದಲ ಮಗ ರಾಜೀವಿ ಎಂಬಾತನ ಹೊರತಾಗಿ ಮಕ್ಕಳಾದ ಸುಧಾಕರ, ಸುಗುಣ, ಸುಮಿತ್ರಾ, ಶಶಿಧರ ಮತ್ತು ಶಶಿಕಲಾ ಯಾರಿಗೂ ಈತನಕ ಮದುವೆಯಿಲ್ಲ. ಕಿತ್ತು ತಿನ್ನುವ ದಾರಿದ್ರ್ಯ. ಈ ಏಳು ಮಕ್ಕಳ ಪೈಕಿ ನಾಲ್ಕನೇಯವನೇ ದಿನಕರ್. ಏಳನೇ ತರಗತಿಯತನಕ ನಾರಾವಿಯ ಸರ್ಕಾರಿ



ತಂದೆ ಕೊರಗ ಮತ್ತು ತಾಯಿ ದೇಜಮ್ಮ

ಶಾಲೆಯಲ್ಲಿ ಓದಿ ಅನಂತರ ಒಂದು ವರ್ಷ ಬೆಳ್ತಂಗಡಿಯ ಸರ್ಕಾರಿ ಹೈಸ್ಕೂಲು ಸೇರಿದ. ತದನಂತರ ಮತ್ತೆ ಕುತ್ಲೂರು ಕಾಡಿಗೆ ಬಂದು ಅಲ್ಲಿಂದಲೇ ನಾರಾವಿಯ ಚರ್ಚ್ ಹೈಸ್ಕೂಲಿಗೆ ಹೋಗುತ್ತಿದ್ದವನು ಎಸ್ಸೆಲ್ಸಿಯಲ್ಲಿ ಫೇಲಾದ.

ಓದಿನ್ನು ಅಸಾಧ್ಯ ಎನ್ನಿಸಿ ತನ್ನಣ್ಣ ತಮ್ಮಂದಿರ ಜೊತೆ ಕಾಡಿಗೆ ಹೋಗಿ ರಾಮಪತ್ರೆ, ಗೋಟು, ಕಾಳಮೆಣಸು ಆಯ್ದು ತಂದು ಮಾರುತ್ತಿದ್ದ. ಬಂದ ದುಡ್ಡು ಒಪ್ಪತ್ತು ಗಂಜಿಗೆ ಸರಿಹೋಗುತ್ತಿತ್ತು.

ಹೀಗಿರುವಾಗಲೇ 1998 ರಲ್ಲಿ ಸರ್ಕಾರ ಕುದುರೆ ಮುಖ ಕಾಡನ್ನು ರಾಷ್ಟ್ರೀಯ ಉದ್ಯಾನವನವನ್ನಾಗಿ ಘೋಷಿಸಿತು. ಅಲ್ಲಿದ್ದ ಅರಣ್ಯವಾಸಿ ಗಿರಿಜನರನ್ನೆಲ್ಲ ಸಾರಾಸಗಟಾಗಿ ಕಾಡಿನಿಂದ ಹೊರಗಟ್ಟಲು ಸರ್ಕಾರ ಮುಂದಾಯಿತು. ಆಗ ಮಲೆಕುಡಿಯರ ಸಂಘಟನೆ ಗಿಳಿದವನು ನಾರಾವಿ ಪಕ್ಕದ ಗುರುವಾಯನಕೆರೆಯ ನಾಗರಿಕ ಸೇವಾ ಟ್ರಸ್ಟ್‌ನ ಸೋಮನಾಥ್ ನಾಯಕ್ ಎಂಬ ಹುಟ್ಟಾ ಆರೆಸ್ಸೆಸ್. ಮೊದಮೊದಲು ಕಾಡಿನ ಮಲೆಕುಡಿಯರು ಈತನನ್ನು ನಂಬಿದ್ದರು. ಬರುಬರುತ್ತ

ಸರ್ಕಾರ ಪರಿಹಾರ ಕೊಡೋದಾದ್ರೆ ನೀವೆಲ್ಲ ಯಾಕೆ ಕಾಡು ತೊರೆಯಬಾರ್ದು? ಎಂದು ಸೋಮನಾಥ್ ನಾಯಕ್ ಉಲ್ಟಾ ಹೊಡೆದ.

ಆ ಹೊತ್ತಿಗಾಗಲೇ ಕರ್ನಾಟಕ ವಿಮೋಚನಾರಂಗ ಇಲ್ಲಿನ ಕಾಡಿಗಳಿಗೆ ಕಾಲಿಟ್ಟಾಗಿತ್ತು. ಪರಿಸರವಾದಿ ಕಲ್ಕುಳಿ ವಿಠಲ ಹೆಗಡೆಯವರ ನೇತೃತ್ವದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವಿರೋಧಿ ಹೋರಾಟ ಸಮಿತಿಯ ಕಾಮ್ರೇಡುಗಳ ಕೆಚ್ಚಿನ ಮುಂದೆ ಆರೆಸ್ಸೆಸ್ ಕೇಸರಿಗಳ ರಾಷ್ಟ್ರೀಯ ಉದ್ಯಾನವನ ಸಂತ್ರಸ್ತರ ಹೋರಾಟ ಸಮಿತಿ ಡಲ್ಲು ಹೊಡೆಯಿತು. ಅದೇ ಹೊತ್ತಿಗೆ ಅರಣ್ಯ ಇಲಾಖೆಯ ವಾಚರ್‌ಗಳು ಮಲೆಕುಡಿಯರನ್ನು ಒಕ್ಕಲೆಬ್ಬಿಸಲು ತಯಾರಿ ನಡೆಸಿ, ಎಷ್ಟು ಅಡಕೆ ಮರಗಳಿವೆ, ತೆಂಗಿನ ಮರಗಳೆಷ್ಟು ಎಂದು ಸರ್ವೆ ನಡೆಸಲಾರಂಭಿಸಿದ್ದು ಒಂದೆಡೆಯಾದರೆ, ಮತ್ತೊಂದೆಡೆ ಕಾಡಿನ ರಾಮಪತ್ರೆ, ಗೋಟು ಇತ್ಯಾದಿಗಳನ್ನು ನಂಬಿ ಬದುಕುತ್ತಿದ್ದ ಮಲೆಕುಡಿಯರನ್ನು ಫಾರೆಸ್ಟ್ ಗಾರ್ಡ್‌ಗಳು ಹಿಡಿದು ಬಡಿದರು. ಕಂಡಕಂಡ ಮಲೆಕುಡಿಯರ ಮನೆಗೆ ನುಗ್ಗಿದ್ದೇ ಗಾರ್ಡ್‌ಗಳು ಕೋಳಿ ಕಿತ್ತೊಯ್ಯುವುದು, ಲಂಚ ಕೇಳುವುದು ಶುರುವಾಯಿತು.

ಮಗದೊಂದೆಡೆ ಕರ್ನಾಟಕ ವಿಮೋಚನಾ ರಂಗದ ಕಾರ್ಯಕರ್ತರನ್ನೇ ನಕ್ಸಲೀಯರೆಂದೂ, ಗಿರಿಜನರೆಲ್ಲ



ದುಃಖತಪ್ತ ಮಲೆಕುಡಿಯರು

ನಕ್ಸಲೀಯರಾಗುತ್ತಿದ್ದಾರೆಂದೂ ನಾರಾವಿಯ ಆರೆಸ್ಸೆಸ್ ಭಜರಂಗಿಗಳು ಹುಯಿಲೆಬ್ಬಿಸಿದರು. ಉದಯವಾ... ಹೊಸದಿಗಂತ, ವಿ.ಕ.ದಂಥ ಕೇಸರಿ ಪತ್ರಿಕೆಗಳು ಇದ... ಬಣ್ಣಕಟ್ಟಿ ಬರೆದವು. ಪದೇ ಪದೇ ಕುತ್ಲೂರ... ಬರ್ದಾಜೆ, ಆಲಂಬ ಇತ್ಯಾದಿ ಕಾಡಿನ ಹಾದಿಗಳ... ಪೊಲೀಸರು ನುಗ್ಗಿ ಹಾವಳಿಯಿಡುವುದು ಮಾಮೂಲ... ಯಿತು. ಇದೇ ಹೊತ್ತಿಗೆ ಶೃಂಗೇರಿ-ಕೊಪ್ಪ, ಸಿರಿಮ... ಮೊಗೆಬೈಲು ಕಡೆಯ ಗಿರಿಜನರಿಗೂ ಪೊಲೀಸ್ ಕಾ... ಶುರುವಾಯಿತು. ಈ ಮಧ್ಯೆಯೇ 2003 ರ ನವೆಂಬ... 27ರ ರಾತ್ರಿ ಪಕ್ಕದ ಈದು ಗ್ರಾಮದಲ್ಲಿ ಪಾರ್ವತಿ... ಹಾಜೀಮಾರನ್ನು ಉಡುಪಿ ಎಸ್ಪಿ ಮುರುಗನ್ ಪ... ಗುಂಡಿಟ್ಟು ಕೊಂದು ಹಾಕಿತ್ತು. ಕುತ್ಲೂರಿನ ಬೆ... ಇಳಿದರೆ ಈದು ಸಿಗುತ್ತದೆ. ಮೊದಲೇ ನಾಗರಿ... ಸೇವಾ ಟ್ರಸ್ಟಿಗೆ ಮಲೆಕುಡಿಯರ ಮೇಲೆ ಸಿಟ್ಟಿತ್ತ... ಅದರ ಕಾರ್ಯಕರ್ತ ಪೂವಪ್ಪ ಸಾಲ್ಯಾನ್ ಮ... ಸಂಚಾಲಕಿಯಾಗಿದ್ದ ಇದೇ ಮಲೆಕುಡಿಯರ ಕುರಿಯಾ... ವಾಸಂತಿ, ಕುತ್ಲೂರಿನ ಮಲೆಕುಡಿಯರ ಯುವಕ... ವಿರುದ್ಧ ಪೊಲೀಸರ ಕಿವಿ ಕಚ್ಚಿದ್ದಾರೆ. ಈದುವಿನ... ಎನ್‌ಕೌಂಟರ್ ನಡೆದಾಗ ದಿನಕರನೂ ಅವರ ಜೊ... ಇದ್ದ ಎಂದು ಚಾಡಿ ಚುಚ್ಚಿದ್ದಾರೆ.


ಪಾರ್ವತಿ-ಹಾಜೀಮಾ ಹತ್ಯೆಯ ವಿರುದ್ಧ ಕಾರ್ಕ... ದಲ್ಲಿ ನಡೆದ ಪ್ರತಿಭಟನಾ ಸಭೆಗೆ ಕ್ರಾಂತಿಕಾರಿ ಗಾಯ... ಗದ್ದರ್ ಬಂದಾಗಲೂ ದಿನಕರ್ ಅದರ ಯಶಸ್ಸಿ... ದುಡಿದಿದ್ದ. ಯಾವತ್ತು ಗದ್ದರ್ ಸಭೆಗೆ ದಿನಕ... ಸಕ್ರಿಯವಾಗಿ ದುಡಿದದ್ದು ಪೊಲೀಸರ ಗಮನಕ್ಕೆ ಬಂತೋ... ನಕ್ಸಲ್ ನಿಗ್ರಹದಳದ ಪೇದೆ ಕಮಲಾಕ್ಷನ ಖಾಕಿ ಗ್ಯಾಂ... ಪದೇಪದೇ ದಿನಕರ್‌ನನ್ನು ಕೇಳಿಕೊಂಡು ಕುತ್ಲೂ... ಕಾಡಿಗೆ ನುಗ್ಗಲಾರಂಭಿಸಿತು. ಕುತ್ಲೂರಿನ ಸರ್ಕಾ... ಶಾಲೆಯಲ್ಲಿ ನಡೆದ ಧರ್ಮಸ್ಥಳ ಗ್ರಾಮಾಭಿವೃ... ಯೋಜನೆಯ ಸಭೆಯಲ್ಲಿ ದಿನಕರ್ ಭಾಗವ... ಸಿದ್ದು ಗೊತ್ತಾಗಿ ಅಲ್ಲಿಗೂ ನಕ್ಸಲ್ ನಿಗ್ರಹದ... ದಾಳಿಯಿಟ್ಟಿದೆ. ಆವತ್ತು ಧರ್ಮಸ್ಥಳ ಸೇವಾನಿ... ಮಲ್ಲಿಕಾ ಮುಂದೆ ನಿಂತು ಪ್ರತಿಭಟಿಸ... ಹೋಗಿದ್ದರೆ ದಿನಕರ್ ಶಾಶ್ವತವಾಗಿ ಜೈ... ಪಾಲಾಗಿಬಿಡುತ್ತಿದ್ದ.

ಪ್ರಾಯಶಃ ಈದು ಎನ್‌ಕೌಂಟರ್‌ಗೆ ಆ... ತಿಂಗಳ ಮೊದಲೇ ದಿನಕರ್ ಪೊಲೀಸ್ ಕಾಟ... ರೋಸತ್ತು ಮನೆ ಬಿಟ್ಟಿದ್ದ. ಗದ್ದರ್ ಸಭೆಯ... ಭಾಗವಹಿಸಿದನೆಂಬ ಒಂದೇ ತಪ್ಪಿಗೆ ಆತ...

(12 ನೇ ಪುಟ...

ಪ್ರತ್ಯಕ್ಷದರ್ಶಿ ಮಂಜುನಾಥಗೌಡ

ನನ್ನ ಕಣ್ಣೆದುರೇ ಗುಂಡಿಟ್ಟರು...



ಯೋಗಪ್ಪಗೌಡ

ಕೇಸಮುದಿ ಎಂಬ ಕೇವಲ ಹದಿನಾಲ್ಕು ಮನೆಗಳ, ಸದಾ ಕಚ್ಚಾಡುವ, ಕಳ್ಳಭಟ್ಟಿ, ನಾಟಾ ಮತ್ತು ಗಂಧಕಳ್ಳರೇ ಗಣನೀಯವಾಗಿರುವ ಕುಗ್ರಾಮದ ಬಗ್ಗೆ 'ತುಂಗಾದಳಕ್ಕೆ' ಮೊದಲೇ ಮಾಹಿತಿಯಿರಲಿಲ್ಲವೇ? ಅಥವಾ ಗೊತ್ತಿದ್ದೂ ದುಸ್ಸಾಹಸಕ್ಕಿಳಿದರೆ?

ಕೆರೆಕಟ್ಟೆ ಚೆಕ್‌ಪೋಸ್ಟಿನಿಂದ ಕುದುರೆಮುಖಕ್ಕೆ ಹೋಗುವ ಕಾಡುದಾರಿಯಲ್ಲಿ ತುಂಗಾ ಸೇತುವೆಯಿಂದ ಎಡಕ್ಕೆ ಹೊರಳಿದರೆ ಕಿಗ್ಗದ ದಾರಿಯಿದೆ. ಎಂಟು ಕಿ.ಮಿ. ಉದ್ದ ಇರುವ ಆ ದಾರಿಯ ಅರ್ಧಕ್ಕೆ ಬರುತ್ತಿದ್ದಂತೆ ಮತ್ತೆ ಎಡಕ್ಕೊಂದು ಪುಟ್ಟ ಸೇತುವೆ ಹಾದು ಕಾಡು ಹೊಕ್ಕರೆ ಅದೇ ಕೇಸಮುದಿ. ಅಲ್ಲಿಂದ ಎನ್‌ಕೌಂಟರ್ ನಡೆದ ಯೋಗಪ್ಪಗೌಡನ ಮನೆಗಿರುವುದು ಸರಿಸುಮಾರು ಮೂರೂವರೆ ಮೈಲಿಯ ಅತೀ ದುರ್ಗಮವಾದ ಬಂಡೆ ಜಾಡು. ತುಂಗಾ ಸೇತುವೆಯಿಂದ ಅಲ್ಲಿಗೆ ಬರಬೇಕೆಂದರೂ ಕನಿಷ್ಠ ಅರ್ಧಗಂಟೆ ಬೇಕೇಬೇಕು. ಮಣ್ಣು ರಸ್ತೆ, ನಡುನಡುವೆ ಕಲ್ಲು ಚಕ್ಕೆಗಳು, ದಟ್ಟಕಾಡು ಮತ್ತು ನಡುನಡುವೆ ದಿಕ್ಕು ತಪ್ಪಿಸುವ ಉಪದಾರಿಗಳಿದ್ದುದರಿಂದಲೇ ಸುಲಭಕ್ಕೆ ಪೊಲೀಸರು ಅಲ್ಲಿಗೆ ಬರಲಾರರೆಂದೇ ಕಾಮ್ರೇಡುಗಳು ನಂಬಿದ್ದರೇನೊ!

ಹಾಗಂತ ಕೇಸಮುಡಿಯ ಗೌಡರು ಅನಾಗರಿಕರೆಂದೇನಲ್ಲ. ದಕ್ಷಿಣಕ್ಕೆ ಬಂಡ್ವಲ್ ಗುಡ್ಡ ಮತ್ತು ಪಶ್ಚಿಮಕ್ಕೆ ಇಂಬಳಗಟ್ಟು ಬೆಟ್ಟಗಳ ಮಧ್ಯೆ ನಂದಿನಿ ಮತ್ತು ನಳಿನಿ ಎಂಬ ಎರಡು ಉಪನದಿಗಳ ನಡುವಿನ ದಟ್ಟ ಕಾನನದಲ್ಲಿದ್ದರೂ ಕಾಲು ಮೈಲಿಗೊಂದೊಂದರಂತೆ ಹೆಂಚಿನ ಮನೆಗಳಿದ್ದಾಗ್ಯೂ ಆ ಗ್ರಾಮದ ಮೂವರ ಮನೆಗೆ ಫೋನಿದೆ ಮತ್ತು ಒಬ್ಬನ ಬಳಿ ಮೊಬೈಲಿದೆ. ಎನ್‌ಕೌಂಟರ್ ನಡೆದ ಮನೆಯ ಯೋಗಪ್ಪ ಗೌಡ ಹುಟ್ಟಾ ಕುಡುಕ. ನಾಟಾ ಸ್ಮಗ್ಲಿಂಗ್, ಗಂಧಕಳ್ಳತನಕ್ಕೆ ಸಂಬಂಧಪಟ್ಟಂತೆ ಈತನ ವಿರುದ್ಧ ಶೃಂಗೇರಿ ಪೊಲೀಸ್ ಠಾಣೆಯಲ್ಲಿ ಕೇಸಿದೆ. ಈತನ ತಮ್ಮನೇ ಮಂಜುನಾಥಗೌಡ. ಮತ್ತೊಬ್ಬ ತಮ್ಮ ಕೇಸಮುದಿ ಮಹೇಶ. ಇವರಿಬ್ಬರೂ ಗಂಧದ ಪಾರ್ಟಿಗಳೆ. ಕೇಸಮುದಿ ಗಿಡ್ಡಣ್ಣಗೌಡನ ಮಕ್ಕಳಾದ ಇವರ ದಾಯಾದಿಯೇ ಗೋಪಾಲಗೌಡನ ಮಗ ವೆಂಕಟೇಶ್. ಇಲ್ಲಿಗೆ ಎರಡು ವರ್ಷದ ಹಿಂದೆ ಇದೇ ಯೋಗಪ್ಪಗೌಡನ ಗ್ಯಾಂಗು ಗಂಡಘಟ್ಟದ ವೆಂಕಟೇಶನ ತೋಟದ ಮೇಲೆ ದಾಳಿ ನಡೆಸಿ ಆತನ ಅಡಕೆ ಗಿಡಗಳನ್ನು ಕತ್ತರಿಸಿ ಹಾಕಿತ್ತು.

ಇಲ್ಲಿಗೆ ನಾಲ್ಕು ತಿಂಗಳ ಹಿಂದೆ ಯೋಗಪ್ಪಗೌಡ ತನ್ನ ಹಿತ್ತಲಿಗೆ ಬಂದಿದ್ದ ಹಸುವೊಂದರ ಕತ್ತನ್ನೇ ಕತ್ತರಿಸಿ ಹಾಕಿದ್ದು ಸ್ಥಳೀಯ ಪತ್ರಿಕೆಯೊಂದರಲ್ಲಿ ಸುದ್ದಿಯಾಗಿತ್ತು. ಸದ್ಯ ನಕ್ಸಲ್ ನಿಗ್ರಹದಳದಲ್ಲಿರುವ ತೆಕ್ಕೂರು ಶಂಕರಪ್ಪ ಮತ್ತು ಬದರಗೂಡು-ಬೇಗಾರ್‌ನ ಶ್ರೀನಿವಾಸ್ ಎಂಬಿಬ್ಬರು ಪೊಲೀಸ್ ಪೇದೆಗಳಿಗೆ ಈ ಯೋಗಪ್ಪಗೌಡ ಮತ್ತು ಆತನ ತಮ್ಮಂದಿರು ದೂರದ ಸಂಬಂಧಿಗಳು. ಜೊತೆಗೆ ತಮ್ಮ ಮಂಜುನಾಥಗೌಡನ ಪತ್ನಿ ರೇವತಿ ಇಲ್ಲಿನ ಸ್ತ್ರೀಶಕ್ತಿ ಸಂಘದ ಕಾರ್ಯದರ್ಶಿ. ಶೃಂಗೇರಿಯ ಬಿಜೆಪಿ ಶಾಸಕ ಜೀವರಾಜ್‌ರ ಪಕ್ಕಾ ಅನುಯಾಯಿ.

ಕಳೆದ ಚುನಾವಣೆಯಲ್ಲಿ ಇದೇ ಯೋಗಪ್ಪಗೌಡ ಮತ್ತು ಆತನ ತಮ್ಮಂದಿರು ಬೆಂಬಲಿಸಿದ್ದು ಬಿಜೆಪಿಯನ್ನು. ಬಹುಶಃ ತುಂಗಾದಳಕ್ಕೆ ಇದ್ಯಾವುದರ ಪರಿವೆಯೇ ಇರಲಿಲ್ಲವೇನೊ!

ಡಿಸೆಂಬರ್ 26 ರ ರಾತ್ರಿ ಏಳೂವರೆಯ ಹೊತ್ತಿಗೆ ಕಾಮ್ರೇಡ್ ದಿನಕರ್ ಮತ್ತು ಸಂಧ್ಯಾ-ಸೌಮ್ಯ ಎಂಬ ಇಬ್ಬರು ಸಮವಸ್ತ್ರಧಾರಿ ಯುವತಿಯರಿದ್ದ ಮೂವರ ತಂಡ ಕೇಸಮುಡಿಯ ಕೊನೆಗಿದ್ದ ಯೋಗಪ್ಪಗೌಡನ ಮನೆ ಮುಂದೆ ಪ್ರತ್ಯಕ್ಷವಾಗಿದೆ. ಬಹುಶಃ ಮನೆ ಮುಂದಿದ್ದ ಕಾಡಿನ ಇಂಬಳಗಟ್ಟುಗುಡ್ಡದ ದಿಬ್ಬದಿಂದ ಈ ತಂಡ ಇಳಿದಿರಬೇಕು. ಇಂಬಳಗಟ್ಟು ಗುಡ್ಡದ ಹಿಂದಿರುವುದೇ ಮೊಗೇಬೈಲು. ಅದ... ಮೇಲೆ ಸಿರಿಮನೆ ಜಲಪಾತವಿದೆ. ತುಂಗಾದಳ... ಕಾಮ್ರೇಡರುಗಳು ಆವತ್ತು ಮೊಗೆಬೈಲಿನಿಂದ ಹೊರ... ಯೋಗಪ್ಪ ಗೌಡನ ಮನೆಗೆ ಬಂದಿರಬೇಕು. ಅ... ದೂರದಲ್ಲೇ ದಳದ ಮತ್ತೊಂದು ತಂಡ ಅವರಿ... ಕಾಯುತ್ತಿರಬೇಕು!

ಈ ವರದಿಗಾರ ಯೋಗಪ್ಪಗೌಡನ ಮ... ಹೋದಾಗ ಮೊದಲು ಸಿಕ್ಕವಳು ಯೋಗಪ್ಪಗೌ... ಪತ್ನಿ ರತ್ನಮ್ಮ. ಆಕೆಯ ಪ್ರಕಾರ ಏಳೂವರೆಗೆ ಹಾಜ... ಮೂವರ ಸಶಸ್ತ್ರಧಾರಿ ತಂಡ ಯೋಗಪ್ಪಣ್ಣ ಎ... ಹೆಸರು ಹಿಡಿದು ಕರೆದಿದೆ. ಯೋಗಪ್ಪಗೌ... ಜೊತೆ ತಂಡ ಹದಿನೈದು ನಿಮಿಷಗಳ ಕಾಲ ಮ... ಡಿದೆ. ದಿನಕರ್ ತನ್ನನ್ನು ಕಾಮ್ರೇಡ್ ದಿನ...

ರಾ. ಸೋಮನಾಥ್


ಎಂದು ಪರಿಚಯಿಸಿಕೊಂಡಿದ್ದಾನೆ. ಸಭೆ ನ... ಬೇಕೆಂದು ತಂಡ ಹೇಳಿದ್ದಕ್ಕೆ ಯೋಗಪ್ಪಗೌಡ ... ಜೊತೆ ದಿನಕರ್‌ರನ್ನು ಕರಕೊಂಡು ಕೇಸಮುದಿ... ತನ್ನದೇ ದಾಯಾದಿಗಳ ಒಂಭತ್ತು ಮನೆಯ... ತೋರಿಸಿದ್ದಾನೆ. ಇದಾಗಿ ಅರ್ಧ ಗ...




ಸಭೆ ಮತ್ತು ಎನ್‌ಕೌಂಟರ್ ನಡೆದ ಸ್ಥಳ

ಯೋಗಪ್ಪಗೌಡನ ಮನೆಯೆದುರಿನ ದಿಬ್ಬದ ... ಸಭೆ ನಡೆದಿದೆ. "ಎಂಟೂವರೆಗೆ ಶುರುವಾದ ... ಇನ್ನೇನು ಮುಗಿಯಿತು ಎಂಬುವಷ್ಟರಲ್ಲೇ ಇದ್ದಕ್ಕಿ... ಪೊಲೀಸ್ ಜೀಪುಗಳು ಪ್ರತ್ಯಕ್ಷವಾಯಿತು. ಅಷ್ಟ...

(12 ನೇ ಪು...




ಪೊಲೀಸರಿಗೆ ಬಲಿಯಾದ ದಿನಕರ್



ಕೊಲೆಗಾರ ಬುಷ್

ಪ್ರಾಯಶಃ ಇಡೀ ಜಗತ್ತೇ ಬೆಚ್ಚಬಿದ್ದಿದೆ.

ಅಮೆರಿಕನ್ ಸರ್ಕಾರದ ಕ್ರೌರ್ಯ, ಅಧ್ಯಕ್ಷ ಜಾರ್ಜ್ ಬುಶ್‌ನ ಹಿಂಸಾ ವಿನೋದಗಳು ಮತ್ತೊಮ್ಮೆ ಘಟಿಸಿವೆ. ಇರಾಕಿನ ಅಧ್ಯಕ್ಷ ಸದ್ದಾಂ ಹುಸೇನ್‌ನನ್ನು ಆತುರಿಯಲ್ಲಿ ಹತ್ಯೆ ಮಾಡಿದ್ದೇ ಅಲ್ಲದೆ ನೇಣಿಗೇರಿಸುತ್ತಿರುವ ದೃಶ್ಯಗಳನ್ನು ಟಿವಿಯಲ್ಲಿ ತೋರಿಸುವ ಮೂಲಕ ಅಮೆರಿಕಾ ದೇಶವೇ ಇಡೀ ಜಗತ್ತಿನ ನಂಬರ್ ಒನ್ ಟೆರರಿಸ್ಟ್ ಎಂಬುದನ್ನು ತಾನೇ ಸಾಬೀತುಪಡಿಸಿದೆ.



ಸದ್ದಾಂ ಹತ್ಯೆ ಇವತ್ತು ಅಮೆರಿಕಾ ಹೇಳುತ್ತಿರುವಂತೆ ಕೇವಲ ಆತ ಮಾಡಿದ ಅಪರಾಧಕ್ಕೆ ವಿಧಿಸಿದ ಶಿಕ್ಷೆಯಾಗಿ ಮಾತ್ರ ಮಹತ್ವ ಪಡೆದಿಲ್ಲ. ಒಂದು ಸ್ವತಂತ್ರ, ಸಾರ್ವಭೌಮ ದೇಶವಾಗಿದ್ದ ಇರಾಕ್ ದೇಶದೊಳಕ್ಕೆ ಅಮೆರಿಕಾ ತನ್ನ ಸೈನ್ಯ ನುಗ್ಗಿಸಿ ತನ್ನ ಜಾತಿಗೆ ತಲೆ ಬಾಗಿರದಿದ್ದ ದೇಶದ ಅಧ್ಯಕ್ಷನನ್ನು ಸೆರೆಹಿಡಿದು, ಕೈಗೊಂಬೆ ಪರ್ಯಾಯ ಸರ್ಕಾರ ಸ್ಥಾಪಿಸಿ, ಸದ್ದಾಂ ಪರ ವಾದಿಸಲು ಬಂದಿದ್ದ ವಕೀಲರುಗಳನ್ನು ಸಾಲಾಗಿ ಕೊಂದು ಕೋರ್ಟ್ ವಿಚಾರಣೆಯೆಂಬ ಫಾರ್ಮಾಲಿಟಿಗಳನ್ನು ಮುಗಿಸಿ ಸದ್ದಾಂನನ್ನು ನೇಣಿಗೇರಿಸಲಾಗಿದೆ.

ಅಮೆರಿಕಾ ಪ್ರೇರಿತ ಡೆಮಾಕ್ರಸಿ ಎಂದರೆ ಇದೇನೆ!

ಇರಾಕಿನ ಇವತ್ತಿನ ಚುನಾಯಿತ ಸರ್ಕಾರ ಜನರನ್ನು ನೇಣಿಗೇರಿಸುವುದರಲ್ಲಿ ಎಷ್ಟು ಬ್ಯುಸಿಯಾಗಿ ಬಿಟ್ಟಿದೆಯೆಂದರೆ ಸದ್ದಾಂ ಹತ್ಯೆಯಾದ ಸೆರೆಮನೆಯಲ್ಲೇ ತಿಂಗಳಿಗೆ ಸರಾಸರಿ [illegible]0 ಮಂದಿ ರಾಜಕೀಯ ಖೈದಿಗಳ ಪ್ರಾಣ ತೆಗೆಯಲಾಗುತ್ತಿದೆ. ಹೊಸ ಸರ್ಕಾರದ ನುರಿತ ವಧಾಕಾರರು ಪ್ರತಿನಿತ್ಯ ಹತ್ಯೆ ನಡೆಸಿ ನಡೆಸಿ ಎಷ್ಟು ಬಳಲಿದ್ದಾರೆಂದರೆ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಒಂದೇ ದಿನ 27 ಮಂದಿಯನ್ನು ಅದೇ ಸ್ಥಳದಲ್ಲಿ ನೇಣು ಹಾಕಲಾಗಿತ್ತು. ಸಾವಿಗೆ ದೂಡಲ್ಪಡಲು ಸರತಿ ಸಾಲಿನಲ್ಲಿ ನಿಂತಿದ್ದ 13 ನೇ ಬಂಧಿಯ ಕುತ್ತಿಗೆಗೆ ಬಿಗಿದಿದ್ದ ಹಗ್ಗ ಜಾರಿ ಖೈದಿ ಸತ್ತು ನೇತಾಡುವ ಬದಲಾಗಿ ನೆಲಕ್ಕೆ ಬಿದ್ದಿದ್ದ. ಆಗ



'ದೇವರೇ ನನ್ನನ್ನು ರಕ್ಷಿಸಿದ' ಎಂದು ಭಯಭೀತನಾಗಿದ್ದ ಖೈದಿ ಕಿರುಚಿಕೊಂಡನಂತೆ. ಆದರೆ ಆದರಲ್ಲಿ ಅಲ್ಲಾಹುವಿನ ಕೈವಾಡವಿಲ್ಲ ಎಂದು ತೀರ್ಮಾನಿಸಿದ ಜಾರ್ಜ್ ಬುಶ್ ಬಂಟರು ಅವನನ್ನು ಮತ್ತೆ ಎಳೆದೊಯ್ದು ನೇಣಿಗೆ ಹಾಕಿ ತೃಪ್ತಿ ಪಟ್ಟಿದ್ದಾರೆ.



ಇವೆಲ್ಲಾ ಸಾವಿನ ಬಾಗಿಲಲ್ಲಿ ನಿಂತಿದ್ದ ಉಳಿದ ಬಂಧಿತರ ಕಣ್ಣೆದುರೇ ನಡೆದಿರುವ ಘಟನೆಗಳು. ಈ ಜೈಲಿನೊಳಗಿನ ಪೈಶಾಚಿಕ ಸರ್ಕಾರಿ ಕೊಲೆಗಳೇ ಅಲ್ಲದೆ ಹೊರಗಡೆ ಅಮೆರಿಕಾದ ಹಾಗೂ ಕೈಗೊಂಬೆ ಇರಾಕಿ ಸರ್ಕಾರಿ ಪೊಲೀಸರಿಂದ ನಾಗರಿಕರ ಹತ್ಯೆಗಳು, ಬಂಡುಕೋರರ ದಾಳಿಗಳು, ಜನಾಂಗೀಯ ಕಲಹ, ಕಿಡ್‌ನ್ಯಾಪ್‌ಗಳಿಂದಾಗಿ ಇರಾಕಿನಲ್ಲಿ ನಿತ್ಯ ಒಂದು ನೂರು ಮಂದಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.... ಇದು 2003 ರ ಏಪ್ರಿಲ್ 9 ರಂದು ಶುರುವಾಗಿ ಇವತ್ತಿಗೂ ಮುಂದುವರೆದಿದೆ.

ಸದ್ದಾಂ ಹುಸೇನ್ ನೇಣು ಇವೆಲ್ಲದರ ಕ್ಲೈಮ್ಯಾಕ್ಸ್.



ಸದ್ದಾಂನ ಕುಟುಂಬ

ಇದೊಂದು ಪಕ್ಕಾ ಅಮೆರಿಕನ್ Cow Boy style killing.

ಸದ್ದಾಂಗೆ ಶಿಕ್ಷೆ ವಿಧಿಸುವ ಮುನ್ನ ನ್ಯಾಯಸಮ್ಮತ ಪಾರದರ್ಶಕ ವಿಚಾರಣೆ ನಡೆಯಲಿಲ್ಲ. ಸದ್ದಾಂ ಪರವಾಗಿ ವಾದಿಸಲು ಬಂದ ಯಾವೊಬ್ಬ ಲಾಯರ್‌ಗಳೂ ಬದುಕುಳಿಯಲಿಲ್ಲ. ಅಸಲಿಗೆ ವಿಚಾರಣೆ ನಡೆಸಿದ ಕೋರ್ಟ್‌ಗೆ ಇರಾಕಿ ಕಾನೂನಿನ ಮಾನ್ಯತೆ ಇರಲಿಲ್ಲ. ಅಷ್ಟೇ ಅಲ್ಲ, ಈಗಲೂ ಇರಾಕ್‌ನಲ್ಲಿ ಒಂದು ಜನರಿಂದ ಆಯ್ಕೆಯಾದ ಸರ್ಕಾರ ಇಲ್ಲ. ಆ ದೇಶಕ್ಕೊಂದು ಸಂವಿಧಾನವಿಲ್ಲ.... ಆದರೆ ಅರಬ್ ಜಗತ್ತಿನಲ್ಲೇ ಅತ್ಯಂತ ಸೆಕ್ಯುಲರ್ ದೇಶವಾಗಿದ್ದ ಇರಾಕ್‌ನಲ್ಲಿ ಅಮೆರಿಕಾ ಕಾಲಿಡುವ ಮೊದಲು ಸಂಪತ್ತು, ಸಾಕ್ಷರತೆ, ಅಭಿವೃದ್ಧಿ, ಕೊಂಚ ನೆಮ್ಮದಿ ಎಲ್ಲಾ ಇತ್ತು. ಬೇರೆಲ್ಲಾ ದೇಶಗಳಲ್ಲಿ, ಸಮಾಜಗಳಲ್ಲೂ ಇರುವಂತೆ ಅಶಾಂತಿ, ಶೋಷಣೆಗಳೂ ಇದ್ದವು. ಸದ್ದಾಂ ತರದ ಚುನಾಯಿತ ಸರ್ವಾಧಿಕಾರಿಯೂ ಇದ್ದ.

ಬಿಳಿದಾಳೆ ಈಶ

ಆದರೆ ಇವತ್ತಿನ ಇರಾಕ್ ಸ್ಮಶಾನ ಭೂಮಿಯಾಗಿ ಬದಲಾಗಿದೆ. ಅದಕ್ಕೆ ಸದ್ದಾಂನೇ ಹೊಣೆ ಎಂದು [illegible] ಲೆವೆಲ್ಲಿನ ಪತ್ರಕರ್ತರು ಕಂಡು [illegible].

ವಾಸ್ತವ ಏನೆಂದರೆ ಇದೇ ಸದ್ದಾಂನನ್ನು ಬೆಳೆಸಿದ್ದು ಬಳಸಿದ್ದು [illegible] ಅಮೆರಿಕಾ ಸರ್ಕಾರ. ಅಮೆರಿಕಾ ಶತ್ರುಗಳಾಗಿರುವ [illegible] ಒಸಾಮಾ ಬಿನ್ ಲಾಡೆನ್, ಅಫ್ಘಾನ್‌ನ ಗುಲ್ಬುದ್ದೀನ್ ಹೆಕ್ಮತಿಯಾರ್‌ರನ್ನು ಸಾಕಿ ಸಲಹಿ, ಬೆಳೆಸಿ-ಬಳಸಿದ್ದೂ ಅಮೆರಿಕಾನೇ.

ಈ ವಿಪರ್ಯಾಸಕರ ಬೆಳವಣಿಗೆಗಳ ಹಿಂದೆ ಅನೇಕ ಹಿನ್ನೆಲೆಗಳಿವೆ. ಪ್ರಗತಿ-ಪ್ರತಿಗಾಮಿತನ, ಜಾತ್ಯತೀತತೆ-ಧರ್ಮಾಂಧತೆ, ಸಮಾನತೆ-ಶೋಷಣೆಗಳೆಂಬ ಮೌಲ್ಯಗಳ ಸಂಘರ್ಷವಿದೆ. ಪ್ರಜಾಪ್ರಭುತ್ವಕ್ಕಾಗಿ ಹೋರಾಟಗಳೇ ನಡೆದಿವೆ.

20ನೇ ಶತಮಾನದ ಆರಂಭದಿಂದಲೂ ಅರಬ್ ಜಗತ್ತಿನ ದೇಶಗಳಲ್ಲೂ ಈ ಸಂಘರ್ಷ ನಡೆಯುತ್ತಾ ಬಂದಿದೆ. ಈ ಬದಲಾವಣೆಯ ಪ್ರತಿ ಹಂತದಲ್ಲೂ ಅಮೆರಿಕಾ ತಲೆ ಹಾಕಿ ಪ್ರತಿಗಾಮಿ ಮೌಲ್ಯಗಳು, ಧರ್ಮಾಂಧತೆ ಹಾಗೂ ಶೋಷಣೆಗಳನ್ನು ಮುಂದುವರೆಸಲು ಬಯಸುವವರ ಬೆನ್ನಿಗೆ ನಿಂತು ಕಾದಾಡಿದೆ. ಈ ಕಾದಾಟದಲ್ಲಿ ದಾಳಗಳಂತೆ ಬಳಸಲ್ಪಟ್ಟವರೆ ಸದ್ದಾಂ, ಲಾಡೆನ್, ಹೆಕ್ಮತಿಯಾರ್ ತರದವರು....


ನಿಮಗೊಂದು ವಿಷಯ ನೆನಪಿರಲಿ. ಈ ದಿನ ಅಮೆರಿಕಾದ ವೈರಿಗಳೆಂದೇ ಬಿಂಬಿತವಾಗಿರುವ ಸದ್ದಾಂ, ಲಾಡೆನ್ ಎಲ್ಲಾ ಕೆಲವೇ ವರ್ಷಗಳ ಹಿಂದೆ ಅಮೆರಿಕೆಯ ಸ್ನೇಹಿತರಾಗಿದ್ದವರು. ಅವರು ಸ್ನೇಹಿತರಾಗಿದ್ದು ಯಾಕೆ ಆನಂತರ ವಿರೋಧಿಗಳಾಗಿ ಬದಲಾದದ್ದು ಹೇಗೆ ಎಂಬುದನ್ನು ನೋಡೋಣ.

ಅಮೆರಿಕಾಗೆ ಇರಾನ್ ಒದೆ

1937 ರಲ್ಲಿ ತಿಕ್ರಿಟ್ ಬಳಿ ಹುಟ್ಟಿದ ಸದ್ದಾಂ 1957 ರಲ್ಲಿ ಇರಾಕಿ ಬಾತ್ ಪಾರ್ಟಿ ಸೇರಿಕೊಂಡ. 59 ರಲ್ಲಿ ಆಗಿನ ಇರಾಕಿ ಪ್ರಧಾನಿ ಖಾಸಿಂ ಮೇಲೆ ಹತ್ಯಾಯತ್ನ ಮಾಡಿ ಈಜಿಪ್ಟಿಗೆ ಓಡಿಹೋಗಿದ್ದ. ಖಾಸಿಂ ಹತ್ಯೆಗೆ ಸದ್ದಾಂನನ್ನು ಛೂ ಬಿಟ್ಟದ್ದೇ ಅಮೆರಿಕಾ ಮತ್ತು ಅದಕ್ಕಿದ್ದ ಕಾರಣ ಸಮಾಜವಾದಿ ಸೋವಿಯತ್ ಒಕ್ಕೂಟ ವಿರೋಧಿ ಮೈತ್ರಿಕೂಟದಿಂದ ಹೊರಬರಲು ಖಾಸಿಂ ತೀರ್ಮಾನಿಸಿದ್ದೇ ಆಗಿತ್ತು. ಅದಾದ ನಂತರ 1963 ರಲ್ಲಿ ಮತ್ತೆ ಇರಾಕಿಗೆ ಮರಳಿದ ಸದ್ದಾಂಗೆ ಅಮೆರಿಕಾದ ಸಿಐಎ ಸಂಪರ್ಕಗಳಿದ್ದವು. 1968 ರಲ್ಲಿ ಬಾತಿಸ್ಟ್ ಪಾರ್ಟಿ ಅಸ್ತಿತ್ವದಲ್ಲಿದ್ದ ಸರ್ಕಾರವನ್ನು ಉರುಳಿಸಿ ಅಧಿಕಾರಕ್ಕೆ ಬಂತು. ಸದ್ದಾಂ ಮುಂಚೂಣಿಗೆ ಬಂದು 1979 ರ ವೇಳೆಗೆ ಇರಾಕಿನ ಅಧ್ಯಕ್ಷನಾದ. ಆಗಲೂ ಇರಾಕಿನಲ್ಲಿ ಮಿಲಿಟರಿ ದಂಗೆ, ಹತ್ಯೆಗಳು ಇದ್ದೇ ಇದ್ದವು. ಆದರೆ ಅಮೆರಿಕಾಗೆ ಆಗ ಡೆಮಾಕ್ರಸಿ ನೆನಪಾಗಿರಲಿಲ್ಲ. ಈ ಮಧ್ಯೆ ಸದ್ದಾಂ ಇರಾಕಿನ ತೈಲ ಮಾರಿ ಬಂದ ಹಣದಲ್ಲಿ ಶಾಲೆ, ರಸ್ತೆ, ಆಸ್ಪತ್ರೆ, ಕೈಗಾರಿಕೆಗಳನ್ನೆಲ್ಲಾ ಬೆಳೆಸಿ ಇರಾಕಿ ಜನರ ಸ್ಥಿತಿಗತಿ ಉತ್ತಮಪಡಿಸಿದ್ದ. ಮುಸ್ಲಿಂ ಜಗತ್ತಿನಲ್ಲಿ ಅಪರೂಪವಾಗಿದ್ದ ಸ್ತ್ರೀ ಸಮಾನತೆಯ ಆಶಯಗಳಿಗೆ ಬೆಂಬಲ ನೀಡಿದ್ದ. ಅದೇ ವೇಳೆಗೆ ನೆರೆ ದೇಶ ಇರಾನ್‌ನಲ್ಲೂ ರಾಜಕೀಯ ಕ್ರಾಂತಿ ಸಂಭವಿಸಿತು. ಅಮೆರಿಕಾದ ಬಂಟ ದೊರೆ ಶಾನನ್ನು ಇಸ್ಲಾಮಿಕ್ ಕ್ರಾಂತಿಕಾರಿಗಳು ದೇಶಬಿಟ್ಟು ಓಡಿಸಿ ಅಧಿಕಾರಕ್ಕೆ ಬಂದರು. ದೇಶದ ನಾಯಕ ಆಯತೊಲ್ಲಾ ಖೊಮೆನಿ ಟೆಹರಾನ್‌ನಲ್ಲಿದ್ದ ಅಮೆರಿಕಾ ರಾಯಭಾರ ಕಚೇರಿಗೇ ಸೈನ್ಯ ನುಗ್ಗಿಸಿ ಕೆಲ ಅಧಿಕಾರಿಗಳನ್ನು ಒತ್ತೆಸೆರೆ ಇಟ್ಟುಕೊಂಡ. ತನ್ನವರನ್ನು ಬಿಡಿಸಿಕೊಳ್ಳಲು ಅಮೆರಿಕಾ ಏನೆಲ್ಲಾ ಸರ್ಕಸ್ ಮಾಡಿದರೂ, ಮಿಲಿಟರಿ ಕಾರ್ಯಾಚರಣೆಯ ಬೆದರಿಕೆ ಹಾಕಿದರೂ ಇರಾನ್ ಕೇರ್ ಮಾಡಿರಲಿಲ್ಲ.

ಅವತ್ತಿನ ಮಟ್ಟಿಗೆ ಅದು ಜಗತ್ತಿನ ಗೂಂಡಾ ಅಮೆರಿಕಾಗೆ ಇರಾನ್ ಕೊಟ್ಟಿದ್ದ ಕೆನ್ನೆಯೇಟು. ಆಗಲೇ ಇರಾನ್ ವಿರುದ್ಧ ಪಿತೂರಿ ಶುರು ಮಾಡಿದ ಅಮೆರಿಕಾ ನೆರೆಯ ಇರಾಕ್‌ನ ಸದ್ದಾಂನನ್ನು ಇರಾನ್ ವಿರುದ್ಧ ಎತ್ತಿ ಕಟ್ಟಿತು. ಶಿಯಾ-ಸುನ್ನಿ ವೈಮನಸ್ಸನ್ನು ತನ್ನ ಹಿತಾಸಕ್ತಿಗಾಗಿ ಬಳಸಿಕೊಂಡಿತು. ಸದ್ದಾಂ ಸುನ್ನಿ ಮುಸ್ಲಿಮನಾದರೆ ಇರಾನಿನ ಬಹುಸಂಖ್ಯಾತರು ಶಿಯಾಗಳಾಗಿದ್ದರು. ಇವತ್ತು ಸದ್ದಾಂನನ್ನು ದೂಷಿಸುವಾಗ ಇರಾನ್-ಇರಾಕ್ ಯುದ್ಧಕ್ಕೆ ಅವನೇ ಹೊಣೆ, ಯುದ್ಧದಿಂದ 10 ಲಕ್ಷ ಜನ ಸತ್ತರೆಂದು ಆರೋಪಿಸಲಾಗುತ್ತಿದೆ. ಆದರೆ ಆ ಇಡೀ ಯುದ್ಧವೇ ಅಮೆರಿಕಾ ಸದ್ದಾಂಗೆ ನೀಡಿದ್ದ ಅಜೆಂಡಾ ಆಗಿತ್ತು. ಅಮೆರಿಕಾ

(14 ನೇ ಪುಟಕ್ಕೆ)














Baath Party & War Party

ಇರಾಕ್, ಸಿರಿಯಾ ಟರ್ಕಿ ದೇಶ ಗಳಲ್ಲಿ ಬಲಿಷ್ಠ ನೆಲೆ ಹೊಂದಿರುವ ಬಾತ್ ಪಾರ್ಟಿ ಹುಟ್ಟಿದ್ದು 1947 ರಲ್ಲಿ. ಸದ್ದಾಂ ಹುಸೇನ್‌ನ ರಾಜಕೀಯ ಪಕ್ಷ ಇದು.

ಅರಬ್ ಸೋಷಿಯಲಿಸ್ಟ್ ಬಾತ್ ಪಾರ್ಟಿ ಎಂಬ ಮೂಲ ಹೆಸರಿನ ಈ ಪಕ್ಷ 1947 ರಲ್ಲಿ ಸಿರಿಯಾ ದೇಶದಲ್ಲಿ ಅಸ್ತಿತ್ವಕ್ಕೆ ಬಂದಿತ್ತು. ಶ್ರೀಮಂತ ಶೇಖರ, ದೊರೆಗಳ War Lord ಗಳ ಆಳ್ವಿಕೆಗೆ ಸಿಕ್ಕು ಶತಮಾನಗಟ್ಟಲೆ ಹಿಂದುಳಿದಿದ್ದ ಅರಬ್ ದೇಶಗಳಿಗೆ ಪ್ರಜಾಪ್ರಭುತ್ವ, ಸಮಾಜವಾದ, ರಾಷ್ಟ್ರೀಯತೆ ಹಾಗೂ ಪ್ರಗತಿಯ ಕನಸುಗಳನ್ನು [illegible] ಈ ಬಾತ್ ಪಾರ್ಟಿ.

ಇರಾಕ್‌ನಲ್ಲಿ ಬಾತ್ ಪಾರ್ಟಿ ಬೆಳೆಯುತ್ತಾ ಹೋದಂತೆ ಸದ್ದಾಂ ಅದರೆಡೆಗೆ ಆಕರ್ಷಿತನಾಗಿ [illegible]. ಕೊನೆಗೆ ನಾಯಕನೂ ಆಗಿ ಇರಾಕಿನ ಅಧ್ಯಕ್ಷನಾದ. ಸದ್ದಾಂ ದುಷ್ಟ, ಸರ್ವಾಧಿಕಾರಿ [illegible] ಯಾರು ಏನೇ ಹೇಳಿದರೂ ಆಧುನಿಕ ಇರಾಕ್ ನಿರ್ಮಾಣದಲ್ಲಿ ಸದ್ದಾಂ [illegible] ಅಪಾರವಾಗಿತ್ತು. ಶಿಕ್ಷಣ, ಆರೋಗ್ಯ ಮುಂತಾದವುಗಳು ಎಲ್ಲಾ ಇರಾಕಿಗಳಿಗೂ [illegible] ನೋಡಿಕೊಂಡಿದ್ದ. ತೈಲ ಮಾರಿ ಬಂದ ಹಣವನ್ನು ಇರಾಕಿ ಪ್ರಜೆಗಳಿಗೇ [illegible] ಮಾಡಿದ. ಉಳಿದದ್ದನ್ನು ಅಮೆರಿಕಾ ಇಂಗ್ಲೆಂಡ್ ಕಸಿದುಕೊಂಡು ಬಾಂಬು-ಬಂದೂಕು [illegible] ಮಾಡುತ್ತಿದ್ದವು.

ಸದ್ದಾಂ ಪತನದೊಂದಿಗೆ ಈಗ ಬಾತ್ ಪಾರ್ಟಿಯನ್ನು ಇರಾಕ್‌ನಲ್ಲಿ ನಿಷೇಧಿಸಲಾಗಿದೆ. [illegible] ಸದ್ದಾಂ ಅಷ್ಟೇ ಟೀಕಾರ್ಹನಾಗಿರಲಿಲ್ಲ, ಬದಲಾಗಿ ಸೆಕ್ಯುಲರ್ ಹಾಗೂ ರ್‍ಯಾಡಿಕಲ್ ಪಕ್ಷವಾಗಿದ್ದ ಬಾತ್ ಪಾರ್ಟಿಯ ಬೇರುಗಳನ್ನೇ ಕಿತ್ತು ಬಿಸಾಡಬೇಕೆಂಬ ಇರಾದೆ ಇದೆ. ಏಕೆಂದರೆ ಬಾತ್ ಪಾರ್ಟಿ ಇರಾಕ್, ಸಿರಿಯಾ, ಟರ್ಕಿ ಹೀಗೆ ಯಾವುದೇ ದೇಶದಲ್ಲಿರಲಿ ಅವುಗಳ ರಾಷ್ಟ್ರೀಯತಾ ಪ್ರೇಮ, ಸಮಾನತೆ ಹಾಗೂ ಪ್ರಗತಿಯನ್ನು ಪ್ರತಿಪಾದಿಸುತ್ತದೆ. ಅದಕ್ಕೆ PAN ARABIC ಕಲ್ಪನೆಯೂ ಇದೆ.

ಅಮೆರಿಕಾಗೆ ಅಪಾಯಕಾರಿಯಾಗಿ ಕಂಡಿರುವುದು ಈ ಅಂಶವೆ. ಅರಬ್ ದೇಶಗಳಲ್ಲಿ ಕೇವಲ ಕೈಗೊಂಬೆ ಸರ್ಕಾರಗಳ ಅಸ್ತಿತ್ವವನ್ನು ಮಾತ್ರ ಅಮೆರಿಕಾ ಸಹಿಸುತ್ತದೆಯೇ ವಿನಃ ಸ್ವಾಭಿಮಾನ ಸ್ವಾತಂತ್ರ್ಯ ಆಶಿಸುವ ರಾಜಕೀಯ ಪಕ್ಷಗಳ ಸರ್ಕಾರಗಳನ್ನಲ್ಲ.

ಅಷ್ಟಕ್ಕೂ ಇಡೀ ಜಗತ್ತಿನ ನ್ಯಾಯಪಾಲಕನಂತೆ ವರ್ತಿಸುತ್ತಿರುವ, ಪ್ರಜಾಪ್ರಭುತ್ವದ ನಾಯಕನಂತೆ ನಟಿಸುವ ಅಮೆರಿಕಾದಲ್ಲೇ ಈಗ ಪ್ರಜಾಪ್ರಭುತ್ವ ಮಾಯವಾಗಿದೆ. ಅಲ್ಲಿ ತೋರಿಕೆಗೆ ಮಾತ್ರ ರಿಪಬ್ಲಿಕನ್ ಹಾಗೂ ಡೆಮಾಕ್ರಟ್ ಪಾರ್ಟಿಗಳಿವೆಯಾದರೂ [illegible] ಒಂದೇ. ಅಮೆರಿಕಾದಲ್ಲಿ ಸದಾಕಾಲ ಆಳ್ವಿಕೆಯಲ್ಲಿರುವುದು ಒಂದೇ [illegible]

ಅದು

War Party

ನನ್ನ ಕಣ್ಣೆದುರೇ ಗುಂಡಿಟ್ಟರು....


(10ನೇ ಪುಟದಿಂದ)

ಸಭೆ ನಡೆಯುತ್ತಿದ್ದ ಜಾಗದಲ್ಲಿ ಟಫ್. ಟಫ್. ಟಫ್ ಎಂಬ ಸದ್ದು ಕೇಳಿ ಬಂತು. ಯಾರೋ ಅಯ್ಯೋ ಎಂದು ಕೂಗಿಕೊಂಡಂತಾಯ್ತು. ನಮ್ಮ ಮನೆ ಸುತ್ತಮುತ್ತಲಿಂದ ನುಗ್ಗಿ ಬಂದ ಪೊಲೀಸರು ಬಂದೂಕು ಹಿಡಿದು ಹ್ಯಾಂಡ್ಸಪ್ ಎಂದರು. ನಮ್ಮೆಜಮಾನ್ರ ಎದೆಗೂ ಬಂದೂಕು ಹಿಡಿದರು. ಸಿಕ್ಕಾಪಟ್ಟೆ ಪೊಲೀಸರು ಬಂದಿದ್ದರು. ಅಷ್ಟರಲ್ಲೇ ಬೆಟ್ಟದ ಮೇಲೆ ಹೆಣ ಬಿದ್ದಿತ್ತು....!"

ಇದು ಯೋಗಪ್ಪಗೌಡನ ಪತ್ನಿಯ ಹೇಳಿಕೆಯಾದರೆ, ಆಕೆಯ ಮೈದುನ ಮಂಜುನಾಥಗೌಡನ ಹೇಳಿಕೆ ಅದಕ್ಕೆ ತೀರ ವ್ಯತಿರಿಕ್ತವಾಗಿತ್ತು. ಯೋಗಪ್ಪಗೌಡನ ಮನೆಯಿಂದ ಫರ್ಲಾಂಗ್ ದೂರಕ್ಕೇ ತಮ್ಮ ಮಂಜುನಾಥಗೌಡನ ಮನೆಯಿದೆ. ಮೊದಮೊದಲು ವಿವರ ನೀಡಲು ಹಿಂಜರಿದ ಮಂಜುನಾಥಗೌಡ ಆ ಹೊತ್ತಿಗಾಗಲೇ ಸಾರಾಯಿ ಕುಡಿದಿದ್ದ. ಆತನ ಪತ್ನಿ ರೇವತಿ ಜೊತೆಗೇ ಇದ್ದಳು. "ನೋಡಿ ನಿಜಕ್ಕೂ ಏನು ನಡೀತು ಅಂತ ಯಾರಿಗೂ ಗೊತ್ತಿಲ್ಲ. ನಿಮಗಷ್ಟೇ ಹೇಳ್ತೀನಿ ಕೇಳಿ. ಆವತ್ತು ದಿನೇಶ್ (ದಿನಕರ್) ನಮ್ಮ ಮನೆಗೂ ಬಂದು ಕರೆದಿದ್ದ. ನಾನು ಹೊಳೆ ಹತ್ರ ಹೋಗಿದ್ದೆ. ಮನೆಗೆ ಬಂದ ಕೂಡಲೇ ನನ್ನ ಹೆಂಡ್ತಿ ಹೇಳಿದ್ದಕ್ಕೆ ನಾನೂ ಸಭೆ ನಡೀತಿದ್ದ ಜಾಗಕ್ಕೆ ಹೋದೆ. ಆ ಹೊತ್ತಿಗಾಗಲೇ ನಮ್ಮ ಮನೆಗೆ ಬಂದಿದ್ದ ನನ್ನ ಅಕ್ಕನ ಮಗ ತೆಕ್ಕೂರು ಚಂದ್ರಶೇಖರ್ ಸಭೆಗೆ ಕರೆಯಲು ಬಂದಿದ್ದ ದಿನಕರ್ ಮತ್ತು ಯೋಗಪ್ಪಗೌಡರ ಜೊತೆ ಹೋಗಿಬಿಟ್ಟಿದ್ದರು. ಈ ಚಂದ್ರಶೇಖರ್ ಯಾರು ಗೊತ್ತೆ? ಹಿರಿಯ ಐಪಿಎಸ್ ಅಧಿಕಾರಿ ಕೆ.ವಿ.ಆರ್. ಠಾಗೂರ್ ಸಂಬಂಧಿ!


"ನಾನು ಮೀಟಿಂಗ್ ನಡೆಯುತ್ತಿದ್ದ ಜಾಗಕ್ಕೆ ತಡವಾಗೇ ಹೋದೆ. ಮೀಟಿಂಗ್‌ನಲ್ಲಿ ಅಣ್ಣ ಯೋಗಪ್ಪಗೌಡ, ತಮ್ಮ ಕೆ.ಜಿ. ಮಹೇಶ್, ಕೇಸಮುಡಿಯ ನಮ್ಮ ಸಂಬಂಧಿಗಳಾದ ನಾಗರಾಜಗೌಡ, ನಟೇಶ, ರತ್ನಾಕರ, ಜಗದೀಶ ಇತ್ಯಾದಿ ಹನ್ನೆರಡು ಮಂದಿ ಇದ್ದೆವು. ದಿನಕರ್ ಕೂತು ಮಾತಾಡುತ್ತಿದ್ದರೆ ಸಂಧ್ಯಾ ಮತ್ತು ಸೌಮ್ಯ ಬಂದೂಕು ಹಿಡಿದು ಅವರ ಹಿಂದೆ ನಿಂತಿದ್ದರು. ದಿನಕರ್ ತನ್ನನ್ನು ಪರಿಚಯಿಸಿಕೊಂಡು 'ನಾವು ಪೀಪಲ್ಸ್ ವಾರ್ ಪಕ್ಷದವರು, ನಾವು ಕುದುರೆಮುಖ ರಾಷ್ಟ್ರೀಯ ಅರಣ್ಯ ಯೋಜನೆಯನ್ನು ವಿರೋಧಿಸುತ್ತಿದ್ದೀವಿ. ನಿಮ್ಮನ್ನು ಕಾಡಿನಿಂದ ಎತ್ತಂಗಡಿ ಮಾಡೋ ಸರ್ಕಾರದ ದಬ್ಬಾಳಿಕೆಯ ವಿರುದ್ಧ ಹೋರಾಟಕ್ಕಿಳಿದಿದ್ದೀವಿ. ದಯವಿಟ್ಟು ನಮ್ಮನ್ನು ಬೆಂಬಲಿಸಿ' ಎಂದು ಕೇಳಿಕೊಂಡರು. ನಾನೂ ಕೂಡ ಮಾವೋವಾದಿಗಳು ಅಂದ್ರೆ ನೀವೇನಾ ಅಂಥ ಕೇಳಿದೆ. ದಿನಕರ್ ಅದಕ್ಕೂ ಸಮಜಾಯಿಷಿ ಕೊಟ್ಟರು.

"ಸುಮಾರು ಒಂಭತ್ತು ಗಂಟೆಯಿರಬೇಕು. ನಾನು ಸಭೆಯಿಂದ ಬಂದುಬಿಟ್ಟೆ. ಮನೆಯಲ್ಲಿ ಅಡುಗೆ ಆಗಿದೆಯಾ ಅಂತ ವಿಚಾರಿಸೋದಕ್ಕೆ ಅಂತ ನಾನು ಬಂದಿದ್ದೆ. ಸುಮಾರು ಒಂಭತ್ತೂ ಮುಕ್ಕಾಲರ ಹೊತ್ತಿಗೆ ತೆಕ್ಕೂರು ಚಂದ್ರಶೇಖರರನ್ನು ಕರೆಯೋದಕ್ಕೆ ಅಂತ ಮತ್ತೆ ಯೋಗಪ್ಪಗೌಡರ ಮನೆಗೆ ಹೋದೆ. ಸಭೆ ಮುಗಿದು ಎಲ್ಲರೂ ಬರುತ್ತಿದ್ದರಾದರೂ ಚಂದ್ರಶೇಖರ್ ಮಾತ್ರ ದಿನಕರ್ ಬಳಿ ಅದೇನನ್ನೋ ಚರ್ಚೆ ಮಾಡಿಕೊಂಡೇ ಇದ್ದರು. ನಾನೇ ಹೋಗಿ ಅವರನ್ನು ಊಟಕ್ಕೆ ಬನ್ನಿ ಅಂತ ಕರಕೊಂಡು ಬಂದೆ. ಇನ್ನೇನು ಸಭೆ ನಡೆದ ದಿಬ್ಬದಿಂದ ಯೋಗಪ್ಪಗೌಡರ ಮನೆಗೆ ನಾವು ಇಪ್ಪತ್ತು ಹೆಜ್ಜೆ ಇಟ್ಟಿರಬೇಕು. ಅಷ್ಟರಲ್ಲೇ ನಾಲ್ಕು ದಿಕ್ಕಿನಿಂದ ರೈಫಲ್ ಹಿಡಿದ ಪೊಲೀಸರು ನುಗ್ಗಿ ಬಿಟ್ಟರು. ಮೊದಲು ನನಗೆ ಹ್ಯಾಂಡ್ಸಪ್ ಎಂದರು. ಆನಂತರ ಯೋಗಪ್ಪಗೌಡರಿಗೂ ಹ್ಯಾಂಡ್ಸಪ್ ಎಂದರು."


ಮಂಜುನಾಥಗೌಡ ಮತ್ತು ಪತ್ನಿ ರೇವತಿ

ಅರೆಬರೆ ನಿಶೆಯಲ್ಲಿದ್ದ ಮಂಜುನಾಥಗೌಡನಿಗೆ ಬಹುಶಃ ತಾನು ಸತ್ಯವನ್ನೇ ಹೇಳುತ್ತಿದ್ದೇನೆಂಬ ಪರಿವೆಯಿರಲಿಲ್ಲವೋ ಅಥವಾ ದುಡುಕಿ ಹೇಳುತ್ತಿದ್ದನೋ ಗೊತ್ತಿಲ್ಲ. ಮತ್ತೆ ಮುಂದುವರೆದವನು–

"ನೋಡಿ ಪೇಪರ್‌ಗಳು ಏನೇನೋ ಬರೀತಿದಾವೆ. ಆದರೆ ಸತ್ಯ ಮಾತ್ರ ಇದೇ! ಪೊಲೀಸರು ಯೋಗಪ್ಪಗೌಡರ ಮನೆಗೆ ಮುತ್ತಿಗೆ ಹಾಕುವುದಕ್ಕೆ ಸರಿಯಾಗಿ ಸಭೆ ನಡೀತಿದ್ದ ಜಾಗಕ್ಕೆ ಶಕ್ತಿಶಾಲಿ ಟಾರ್ಚ್ ಲೈಟೊಂದನ್ನು ಬಿಟ್ಟಿದ್ದರು. ಒಂದು ಫರ್ಲಾಂಗ್ ಸುತ್ತಮುತ್ತಲ ಇಡೀ ಕಾಡಿಗೇ ಲೈಟು ಬಿಟ್ಟಂತೆ ಕಾಣುತ್ತಿತ್ತು. ಆ ಕಡೆಯಿಂದಲೂ ಟಫ್ ಟಫ್ ಅಂತ ಗುಂಡಿನ ಸದ್ದು ಕೇಳಿ ಬರುತ್ತಿತ್ತು. ಅಲ್ಲೂ ಪೊಲೀಸರು ಮುತ್ತಿಗೆ ಹಾಕಿದ್ದರು. ಗುಂಡಿನ ಸದ್ದಿನ ಮಧ್ಯೆಯೇ 'ಅಯ್ಯೋ ಬಿದ್ದುಬಿಟ್ಟ' ಅಂತ ಹುಡುಗಿಯೊಬ್ಬಳು ಚೀರಿದ ಸದ್ದು ಕೇಳಿಸಿತು. ಬಹುಶಃ ದಿಬ್ಬದ ಮೇಲೆ ಗಿಡನೆಡಲು ತೋಡಿದ್ದ ಗುಣಿಯಲ್ಲಿ ದಿನಕರ್ ಆಯತಪ್ಪಿ ಬಿದ್ದಿರಬೇಕು. ಬಿದ್ದ ಆತನ ಮೇಲೆ ಪೊಲೀಸರು ಗುಂಡು ಹಾರಿಸಿರಬೇಕು.


ರತ್ನಮ್ಮ

"ಇತ್ತ ನಮ್ಮನ್ನು ಹಿಡಿದುಕೊಂಡಿದ್ದ ಶೃಂಗೇರಿ ಇನ್ಸ್‌ಪೆಕ್ಟರ್ ಮಹೇಶ್ ಮೇಘಣ್ಣನವರ್ ಮನೆ ಮುಂದಿದ್ದ ಇಟ್ಟಿಗೆ ಗೂಡಿನ ಮರೆಗೆ ಕರೆದೊಯ್ದರು. ಅಷ್ಟರಲ್ಲೇ ನಾಲ್ಕೈದು ಮಂದಿ ಪೊಲೀಸರು ಓಡಿಬಂದು 'ಸಾರ್ ಒಬ್ಬ ಫಿನಿಷ್' ಎಂದರು. ಅದು ಕೇಳಿ ನನ್ನನ್ನು ಹಿಡಿದುಕೊಂಡಿದ್ದ ಇಟ್ಟಿಗೆ ಗೂಡಿನ ಮರೆಯಲ್ಲಿ ತೆವಳಿಕೊಂಡು ಗುಂಡು ಹಾರಿಸುತ್ತಿದ್ದ ಇನ್ಸ್‌ಪೆಕ್ಟರ್ ಮಹೇಶ್ ಮೇಘಣ್ಣನವರ್ ಮತ್ತಿಬ್ಬರು ದಿನಕರ್ ಬಿದ್ದ ದಿಕ್ಕಿಗೆ ಟಪ್ ಟಪ್ ಟಪ್ ಎಂದು ಹತ್ತಾರು ರೌಂಡು ಫೈರ್ ಮಾಡುತ್ತಿದ್ದರು. ಅದು ಎನ್‌ಕೌಂಟರ್ ನಡೆದಿದ್ದಕ್ಕೆ ಸಾಕ್ಷಿ ಹುಟ್ಟು ಹಾಕುವುದಕ್ಕೆಂದು ನನಗೆ ಗೊತ್ತಾಯಿತು. ಏನ್ ಸಾರ್ ಮಾಡ್ತೀರಿ? ಇಲ್ಲೇ ಸಾಯಬೇಕು ಅಂತ ಆತನ ಹಣೇಲಿ ಬರೆದಿತ್ತೇನೊ!"

ಇದು ಮಂಜುನಾಥಗೌಡ ಈ ವರದಿಗಾರನೆದುರು ರಾತ್ರಿ ಸರಿಸುಮಾರು ಎಂಟುಗಂಟೆಗೆ ಹೇಳಿದ ಮಾತಾದರೆ, ಆತ ಇನ್ನೇನು ಮಾತು ಮುಗಿಸುತ್ತಿದ್ದಂತೆ ಅಲ್ಲಿಗೆ ಯೋಗಪ್ಪಗೌಡ ಪ್ರತ್ಯಕ್ಷನಾದ. ಆತನೂ ಸಾಕಷ್ಟು ಕುಡಿದಿದ್ದ. ಬಂದವನೇ "ಯಾರನ್ನು ಕೇಳಿ ನನ್ನ ಮನೆಗೆ ಬಂದಿದ್ರೀ?" ಎಂದು ಜಗಳಕ್ಕೆ ಬಿದ್ದ. "ನಾನು ಮನಸ್ಸು ಮಾಡಿಬಿಟ್ರೆ ನೀವ್ಯಾರೂ ಇಲ್ಲಿಂದ ವಾಪಸ್ಸು ಹೊರಡಲ್ಲಾ ಗೊತ್ತಾ?" ಎಂದೂ ಧಮಕಿ ಕೊಟ್ಟ.

ಜೊತೆಗಿದ್ದ ಪತ್ರಕರ್ತರು ಸಮಾಧಾನ ಮಾಡಿದ ಮೇಲೆ ತಣ್ಣಗಾದ ಯೋಗಪ್ಪಗೌಡ "ಏನೇನು ನಡೀತು ಅಂತ ಇವರಿಗೆ ನೀನ್ಯಾಕೆ ಹೇಳಿದೆ?" ಅಂತ ತಮ್ಮನ ಮೇಲೇ ಜಗಳಕ್ಕೆ ಬಿದ್ದ "ನೋಡ್ರೀ ಇವನು ಕುಡಿದು ಹೇಳಿದ್ದಾನೆ. ಸತ್ಯ ಏನು ಅಂತ ನಾನು ಹೇಳ್ತೀನಿ ಕೇಳಿ! ಅಯ್ಯೋ ಬಿದ್ದುಬಿಟ್ಟ ಅಂತ ನಕ್ಸಲ್ ಯುವತಿಯೊಬ್ಬಳು ಕಿರುಚಿಕೊಂಡಿದ್ದು ಸತ್ಯನಾಗ್ಲೂ ನಮಗೆ ಕೇಳೇ ಇಲ್ಲ. ಮೀಟಿಂಗ್ ಮುಗಿಸಿ ನಾವೆಲ್ಲ ಬಂದ ಮೇಲೆಯೇ ಪೊಲೀಸರು ಫೈರ್ ಮಾಡಿದ್ದು. ದಿನಕರ್ ಮೇಲೆ ಪೊಲೀಸರು ಗುಂಡು ಹಾರಿಸಿದ್ದನ್ನು ಮಂಜುನಾಥಸ್ವಾಮಿ ಆಣೆ ನಾವ್ಯಾರೂ ನೋಡೇ ಇಲ್ಲ. ಗುಂಡು ಹಾರಿಸಿದ ಸೌಂಡ್ ಕೇಳಿಸ್ತಾ ಇತ್ತು. ಅದೂ ಬರೇ ಐದು ನಿಮಿಷ ಮಾತ್ರ. ಆನಂತ್ರ ಇದ್ದಕ್ಕಿದ್ದಂತೆ ಎಲ್ಲಾ ಸೈಲೆಂಟಾಯ್ತು. ಆಮೇಲೆ ರಾತ್ರಿ ಮೂರರ ತನಕ ನಾವು ಮತ್ತು ಪೊಲೀಸರು ಸೇರಿ ಇಡೀ ಇಂಬಳಗಟ್ಟು ಕಾಡನ್ನ ಟಾರ್ಚ್ ಹಿಡಿದು ಹುಡುಕಾಡಿದ್ವಿ. ಯಾವ ಹೆಣಾನೂ ನಮಗೆ ಸಿಗಲಿಲ್ಲ. ಆದರೆ ಬೆಳಿಗ್ಗೆ ಬೆಳಕಾಗುತ್ತಿದ್ದಂತೆ ನಮ್ಮ ಮನೆ ಮುಂದೇನೇ ಬಿದ್ದಿದ್ದ ದಿನಕರ್‌ನ ಹೆಣ ಕಣ್ಣಿಗೆ ಬಿದ್ದದ್ದು!"

ಇದು ಯೋಗಪ್ಪಗೌಡನ ಡೈಲಾಗು. ಮಾತು ಮಾತಿಗೂ ಧರ್ಮಸ್ಥಳ ಮಂಜುನಾಥಸ್ವಾಮಿ ಮೇಲೆ ಆಣೆ ಮಾಡಿ ನಾನು ಸುದ್ದಿ ಕೊಟ್ಟೇ ಇಲ್ಲ ಎನ್ನುತ್ತಾನೆ. "ಈ ಊರಲ್ಲಿ ಫೋನ್, ಮೊಬೈಲು ಇರೋದು ನನ್ನ ದಾಯಾದಿ ಮತ್ತು ಎದುರಾಳಿ ಗಂಡಘಟ್ಟರ ವೆಂಕಟೇಶನ ಬಳಿ ಮಾತ್ರ. ಎಲ್ಲೋ ಅವನೇ ಪೊಲೀಸರಿಗೆ ಸುದ್ದಿ ಮುಟ್ಟಿಸಿರಬೇಕು" ಎನ್ನುತ್ತಾನೆ. ಆದರೆ ಮೀಟಿಂಗಿಗೆ ಬಂದಿದ್ದ ತನ್ನ ಸಂಬಂಧಿಗಳಾದ ನಾಗರಾಜ್‌ಗೌಡ ಮತ್ತು ನಟೇಶರ ಮನೆಗಳಲ್ಲೂ ಫೋನಿತ್ತು ಎಂಬುದನ್ನು ಮುಚ್ಚಿಡುತ್ತಾನೆ.

ಇನ್ನು ಆತನ ತಮ್ಮ ಮಂಜುನಾಥಗೌಡನ ಮಾತುಗಳೆಷ್ಟು ಅಸಂಬದ್ಧವೆಂದರೆ; ತಾನೇಕೆ ಸಭೆಗೆ ಲೇಟಾಗಿ ಹೋದೆ ಎಂಬುದಕ್ಕೆ ಉತ್ತರವಿಲ್ಲ. ಆತನ ಮನೆಗೆ ಬಂದಿದ್ದ ಸಂಬಂಧಿ ಚಂದ್ರಶೇಖರ್ ಮೀಟಿಂಗ್ ಮುಗಿದ ಬಳಿಕವೂ ಕಾಮ್ರೇಡ್ ದಿನಕರ್‌ನನ್ನು ತಾನೊಬ್ಬನೇ ಏಕೆ ಮಾತಾಡಿಸಿಕೊಂಡು ನಿಂತಿದ್ದ ಎಂಬುದಕ್ಕೆ ಕಾರಣವಿಲ್ಲ. ಹಾಗೇ ಮೊದಲೇ ಮನೆಗೆ ಬಂದ ಮಂಜುನಾಥಗೌಡ ತೆಕ್ಕೂರು ಚಂದ್ರಶೇಖರನನ್ನು ಊಟಕ್ಕೆ ಕರೆತರಲೆಂದು ಹೋದೆ ಎನ್ನುತ್ತಾನೆ. ತನ್ನ ಬೆನ್ನಿಗೇ ಪೊಲೀಸರು ಬಂದರು ಎಂದೂ ಹೇಳುತ್ತಾನೆ. ಹಾಗೇ ಮನೆಯಿಂದ ಹೋಗುವಾಗ ಮನೆಮುಂದೆ ಪೊಲೀಸ್ ಜೀಪುಗಳು ಇರಲೇ ಇಲ್ಲ ಎನ್ನುತ್ತಾನೆ. ಮತ್ತೆ ವಾಪಸ್ಸು ಬಂದು ನೋಡಿದಾಗ ಜೀಪುಗಳಿತ್ತು ಎನ್ನುತ್ತಾನೆ. ಆದರೆ ಎನ್‌ಕೌಂಟರ್ ನ... ದಿನಕರ್ ಬಲಿಯಾಗುವುದಕ್ಕೂ ಮೊದಲು ಮ...ನಾಥಗೌಡ ತನ್ನ ಮನೆಗೆ ಬಂದೇ ಇಲ್ಲ!

ಇದರರ್ಥ ಯೋಗಪ್ಪಗೌಡ ದಿನಕರ್‌ನನ್ನು ... ಮುಡಿಯ ತನ್ನ ಸಂಬಂಧಿಕರ ಮನೆಗಷ್ಟೇ ಕರೆದೊ... ತಮ್ಮ ಮಂಜುನಾಥಗೌಡನ ಮನೆಯಲ್ಲಿದ್ದ ಸಂಬ... ತೆಕ್ಕೂರು ಚಂದ್ರಶೇಖರ್‌ನನ್ನು ಮಾತ್ರ ಸಭೆಗೆ ಬರ... ತಮ್ಮನ್ನು ಬೇಕೆಂತಲೇ ಹಿಂದೆ ಬಿಟ್ಟಿದ್ದನೆ? ತಡ... ಸಭೆಗೆ ಬಂದ ಮಂಜುನಾಥಗೌಡ ಎಲ್ಲ ವ್ಯವಸ್... ಮಾಡಿಯೇ ಬಂದಿದ್ದನೆ? ಸಭೆಗೆ ಬರದೇ ಮನೆಯ... ಇದ್ದ ಆತನ ಪತ್ನಿ ರೇವತಿ ನಾಗರಾಜ್‌ಗೌಡ ಅ... ನಟೇಶನ ಮನೆಗೆ ಹೋಗಿ ಫೋನ್ ಮಾಡಿರಬಹು... ಪೊಲೀಸರು ಬರುವತನಕ ಕಾದಿದ್ದು ಮಂಜುನಾಥ... ಎಲ್ಲಾ ಏರ್ಪಾಟು ಮಾಡಿಯೇ ಸಂಬಂಧಿಯ... ಊಟಕ್ಕೆ ಕರೆಯುವ ನೆಪದಲ್ಲಿ ಬಂದನೆ? ಅಲ್ಲಿಯ... ಉದ್ದೇಶಪೂರ್ವಕವಾಗಿಯೇ ತೆಕ್ಕೂರು ಚಂದ್ರಶೇ... ಕಾಮ್ರೇಡ್ ದಿನಕರ್‌ನನ್ನು ಮಾತಾಡಿಸಿಕೊಂಡಿ... ಮೀಟಿಂಗ್ ನಡೆಯುವತನಕ ಸುಮ್ಮನೇ ಹೊ... ಹಾಕಿದ್ದ ಪೊಲೀಸರು ಎಲ್ಲ ಹೋಗಿದ್ದಾರೆಂದು ಖ... ಯಾದ ನಂತರವೇ ಫೈರಿಂಗ್ ಆರಂಭಿಸಿದರೆ? ಅ... ಗುಣಿಯಲ್ಲಿ ಕಾಲುಸಿಕ್ಕಿ ಬಿದ್ದಿದ್ದ ದಿನಕರ್‌ನನ್ನು ಜೀ... ಬಂಧಿಸುವ ಸಾಧ್ಯತೆಗಳಿದ್ದಾಗ್ಯೂ ಗುಂಡಿಟ್ಟುಕೊಂ...

ದಿನಕರ್ ಎನ್‌ಕೌಂಟರ್ ಸುತ್ತ ಇಂಥ ಹ... ಪ್ರಶ್ನೆಗಳು ಪ್ರಶ್ನೆಗಳಾಗೇ ಉಳಿದುಬಿಡುತ್ತವೆ. ದಿನಕರ... ಗುಂಡಿಟ್ಟು ಕೊಲ್ಲುವತನಕ ಪೊಲೀಸರ ಬಳಿ ಟಾ... ಇತ್ತು ಎನ್ನುವ ಯೋಗಪ್ಪಗೌಡ, ರಾತ್ರಿಯಿಡೀ ಕಾಡನ್ನು ಹುಡುಕಿದ್ದಾಗಿ ಹೇಳುತ್ತಾನಾದರೂ ಮನೆಯೆದುರೇ ಬಿದ್ದಿದ್ದ ದಿನಕರ್‌ನ ಹೆಣ ಮಾತ್ರ ಬೆಳಕಿನಲ್ಲಿ ಪತ್ತೆಯಾಯಿತು ಎನ್ನುವುದೇಕೆ? ಕಾಡನ್ನು ಹುಡುಕಿದವರು ಎನ್‌ಕೌಂಟರ್ ಮತ್ತು ನಡೆದ ಜಾಗವನ್ನು ಮಾತ್ರ ಶೋಧಿಸದೇ ಬೆಳ... ಕಾಯುತ್ತಾರಾ?

ಯಾರ ಉದ್ಧಾರಕ್ಕಾಗಿ 'ತುಂಗಾದಳ' ಬೆಟ್ಟದಿಂದ... ಬಂದಿತ್ತೋ ಅವರಿಂದಲೇ ಕಾಮ್ರೇಡ್ ದಿನಕರ್... ಯಾದನೆ? ಮೊದಲೇ ಗಂಧ ಮತ್ತು ... ಸ್ಮಗ್ಲರುಗಳಿದ್ದ ಒಬ್ಬರ ಮೇಲೊಬ್ಬರು ಕತ್ತಿಮಸೆಯ... ದಾಯಾದಿಗಳಿದ್ದ ಬಿಜೆಪಿಯ ಪಕ್ಕಾ ಬೆಂಬಲಿ... ಊರೊಂದನ್ನು ಹೊಕ್ಕಿದ್ದೇ ಕಾಮ್ರೇಡ್ ದಿನಕರ್ ತ... ತಪ್ಪಾಯಿತೆ? ಇಲ್ಲಿಂದ ಶೃಂಗೇರಿಗೆ ಬರೇ ಹದಿ... ಮೈಲಿಯ ದೂರ. ಇತ್ತ ಕುದುರೆಮುಖ ರಸ್ತೆ... ಕೆರೆಕಟ್ಟೆ ಚೆಕ್‌ಪೋಸ್ಟಿಗೆ ಇಲ್ಲಿಂದ ಕೇವಲ 18 ಮೈ... ಅಂತರ. ಕೆರೆಕಟ್ಟೆ ಚೆಕ್‌ಪೋಸ್ಟಿನಲ್ಲಿ ಸದಾ ... ಬಸ್ಸುಗಳ ತುಂಬ ನಕ್ಸಲ್ ನಿಗ್ರಹದಳದ ಪೊಲೀ... ತ್ತಾರೆ. ಇತ್ತ ಶೃಂಗೇರಿ ಪೊಲೀಸ್ ಠಾಣೆಯಲ್ಲಿ ... ಗಳಿಗೆಯಲ್ಲೂ ನಕ್ಸಲ್ ನಿಗ್ರಹ ದಳದ ಐದಾರು ... ಗಳಿದ್ದೇ ಇರುತ್ತವೆ. ಎರಡೂ ಕಡೆಯಿಂದ ಪೊಲೀ... ಕೇಸಮುಡಿಗೆ ಬರಬೇಕೆಂದರೆ ಹೆಚ್ಚೆಂದರೆ ಒಂದು... ಸಾಕು. ಆದರೆ ಎರಡೂವರೆ ಗಂಟೆಯಾದರೂ ಕಾ... ದಿನಕರ್ ತಂಡ ಮೀಟಿಂಗ್ ಮಾಡಿಕೊಂಡೇ ಇ... ಏನರ್ಥ?

ಆದರಲ್ಲೂ ಸಾಟಾ-ಗಂಧದ ಕಳ್ಳರ ಆದ... ನಕ್ಸಲೀಯರೇ ಪ್ರಥಮ ಶತ್ರುಗಳಾಗಿರುವಾಗ ಅ... ಪೊಲೀಸರಿಗೂ ಅನಾದಿಕಾಲದ ನಂಟಿರುವಾಗ ತಂಡಕ್ಕೆ ಇನ್ನಾವ ಭರವಸೆಯಿತ್ತೊ?

ಕಾಮ್ರೇಡ್ ದಿನಕರ್ ದುಸ್ಸಾಹಸಕ್ಕೆ ಬಲಿಯಾದನೆ?

ದಿನಕರ್ ನಕ್ಸಲ್ ಆಗಿದ್ದೇಕೆ?

(10ನೇ ಪುಟದಿಂದ)

ವಿರುದ್ಧ ಇಡೀ ನಕ್ಸಲ್ ದಳ ತಿರುಗಿಬಿದ್ದಿತ್ತು. ಅದೇ ಹೊತ್ತಿಗೆ ಕುತ್ಲೂರಿನ ವಸಂತ್ ಮತ್ತು ಆತನ ಅಕ್ಕ ಸುಂದರಿ ಎಂಬಿಬ್ಬರು ಮಲೆಕುಡಿಯರು ಕೂಡ ಪೊಲೀಸ್ ಕಾಟ ತಾಳದೇ ನಕ್ಸಲ್ ನೇತ್ರಾವತಿ ದಳ ಸೇರಾಗಿತ್ತು.

ಈದು ಎನ್‌ಕೌಂಟರ್ ನಡೆದ ಆರು ತಿಂಗಳಿಗೇ ಕಾಡಿನಲ್ಲಿ ಜೀಪು ಬರಲು ಅನುವಾಗುವಂತೆ ಫಾರೆಸ್ಟರ್ ರಾಮು ಮೊಗೇರನ ತಂಡ ಕಾಡು ಕಡಿದು ರಸ್ತೆ ಮಾಡಲು ಆರಂಭಿಸಿತು. ಕಾಡಿಗೆ ಬಂದಿದ್ದ ಮಲೆಕುಡಿಯರನ್ನೂ ಹಿಡಿದು ಬಡಿಯುತ್ತಿತ್ತು, ಇದರ ವಿರುದ್ಧ ಮಲೆಕುಡಿಯರು ಅರಣ್ಯ ಸಿಬ್ಬಂದಿಗೆ ಮುತ್ತಿಗೆ ಹಾಕಿ ಧಿಕ್ಕಾರ ಕೂಗಿದರೆ, ಫಾರೆಸ್ಟರ್ ರಾಮು ಮೊಗೇರನಿಂದ ಸುಳ್ಳು ದೂರು ಪಡೆದ ಪೊಲೀಸರ ಮಲೆಕುಡಿಯರ ಚಿಂಕ್ರ, ರಾಜು, ಸುಂದ್ರ, ಮೋಣಯ್ಯ, ರವಿ, ನಾರ್ಣ ಬಾಬು, ಶ್ರೀಧರ ಮುಂತಾದವರ ಮೇಲೆ ಕೊಲೆಯತ್ನದ ಕೇಸು ಹಾಕಿ ಬಂಧಿಸಿಬಿಟ್ಟರು. ಈ ಪೈಕಿ ನೇವಲ ಮಲೆಕುಡಿಯನ ಮಗ ರಾಜು ಎಂಬಾತನನ್ನು ನಾರಾವಿಯ ಸಂತೆಯಲ್ಲಿ ಹಿಡಿದೊಯ್ದು ಏಳು ದಿನಗಳ ಕಾಲ ಜೈಲಿಗೆ ಹಾಕಲಾಯ್ತು.

ಜೊತೆಗೆ ದಿನಕರ್‌ನನ್ನು ಕೇಳಿಕೊಂಡು ಪದೇಪದೇ ಪೊಲೀಸರು ಕಾಡಿಗೆ ನುಗ್ಗುವುದೂ ಮಾಮೂಲಾಯಿತು. ಎಲ್ಲಾದರೂ ಕೆಲಸಕ್ಕೆ ಸೇರೋಣವೆಂದರೂ ಪೊಲೀಸರು ಬಿಡೋಲ್ಲ, ಪ್ರತಿಭಟಿಸಿದೇ ಹೋದರೆ ಉಳಿಗಾಲವಿಲ್ಲ, ಹಾಗೊಮ್ಮೆ ಸರ್ಕಾರದ ಪರಿಹಾರ ಪಡೆದು ಕಾಡು ತೊರೆದರೆ ಬದುಕಲು ಬೇರೆ ದಾರಿಯೇ ಗೊತ್ತಿಲ್ಲ, ತನ್ನ ಉಳಿವಿಗಾಗಿ ಕಾಡು ಮತ್ತು ಬಂದೂಕು ಮಾತ್ರವೇ ಆತನಿಗುಳಿದ ದಾರಿಯಾಗಿತ್ತು. 2003ರ ಮೇ ತಿಂಗಳಲ್ಲಿ ಮನೆ ಬಿಟ್ಟ ದಿನಕರ್ ನಡುವೆ ಗದ್ದರ್ ಸಭೆಯಲ್ಲಿ ಒಮ್ಮೆ ಕಾಣಿಸಿದ್ದು ಬಿಟ್ಟರೆ ಮತ್ತೆಂದೂ ಕಾಡು ಬಿಟ್ಟು ಬರಲೇ ಇಲ್ಲ. 2005ರಲ್ಲಿ ಕಮ್ಯೂನಿಸ್ಟ್ ಪಕ್ಷದ ಮಲೆನಾಡು ಏರಿಯಾ ಸಮಿತಿ ಸದಸ್ಯನಾಗಿ ತುಂಗಾದಳದ ಸೈನಿಕನಾದ. ಅನ್ಯಾಯ-ಅಸಮಾನತೆಗಳನ್ನೂ, ಅವುಗಳ ಗರ್ಭದಂತಿರುವ ವ್ಯವಸ್ಥೆಯನ್ನೂ ದ್ವೇಷಿಸಿಕೊಂಡೇ ಬಂದ.

ಬಹುಶಃ ಡಿಸೆಂಬರ್ 25ರ ರಾತ್ರಿ ಕೇಸಮುಡಿಯಲ್ಲಿ ಸಭೆ ನಡೆಸಿ-ಪಕ್ಷದ ಪರ ಕರಪತ್ರ ಹಂಚುವುದು ಆತನ ಉದ್ದೇಶವಾಗಿತ್ತು. ಜೊತೆಗೆ ಸೌಮ್ಯ-ಸಂಧ್ಯಾ ಇದ್ದರು. ತುಂಗಾದಳದ ಮತ್ತೊಂದು ತಂಡ ಬಹುಶಃ ಮುಗೆಬೈಲಿನಿಂದ ಬರುವ ನಕ್ಸಲ್ ನಿಗ್ರಹದಳದ ವಿರುದ್ಧ ಕಾವಲಿಗಿತ್ತೇನೊ. ಆದರೆ ಪೊಲೀಸರು ಕಾಡ ದಾರಿಯನ್ನೇ ಬಿಟ್ಟು ಊರ ದಾರಿಯಲ್ಲಿ ಬಂದಿದ್ದಾರೆ. ಅಗೆದ ಗುಣಿಯಲ್ಲಿ ಕಾಲು ಸಿಲುಕಿ ಬಿದ್ದಿದ್ದ ಆತನ ಮರ್ಮಾಂಗಕ್ಕೇ ಗುಂಡಿಡಲಾಗಿದೆ. ಜೊತೆಗಿದ್ದ ಹುಡುಗಿಯರು ಪರಾರಿಯಾಗಿದ್ದಾರೆ. ಆ ಹುಡುಗಿಯರಿಬ್ಬರ ಪ್ರಾಣ ಉಳಿಸಲೆಂದೇ ದಿನಕರ್ ಫೈರ್ ಮಾಡುತ್ತಾ ನುಗ್ಗಿರಬೇಕು.

ಅನ್ಯಾಯ-ಅಸಮಾನತೆಯ ವಿರುದ್ಧದ ಕನ್ನಡಿಗರ ಯುದ್ಧದಲ್ಲಿ ಬಲಿಯಾದ ಯೋಧರ ಪೈಕಿ ದಿನಕರ್ ಮೊದಲ ಮಲೆಕುಡಿಯ. ಮಲೆಕುಡಿಯರ ಕೆಚ್ಚಿನ ಪ್ರತೀಕ ಕೂಡ. ■

ಯುದ್ಧ ಅಥವಾ ಸಾವು: ಆಯ್ಕೆ ಯಾವುದು


ದಿನಕರ್ ಸಾವಿಗಾಗಿ ಅವರ‍್ಯಾರಲ್ಲೂ ಕಣ್ಣೀರಿಲ್ಲ. ಆತನ ತಂದೆ ಕೊರಗ ಮಲೆ ಕುಡಿಯನಿಗೀಗ 80... ವೃದ್ಧಾಪ್ಯ. ತಾಯಿ ದೇಜಮ್ಮ ಕೂಡ ವಿಚಲಿತಳಾಗಿರಲಿಲ್ಲ. ಒಂದು ವಿಷಾದ ಮತ್ತು ಆಕ್ರೋಶದ ಹೊರತಾ... ಇಲ್ಲಿನ ಮಲೆಕುಡಿಯರ ಮುಖದಲ್ಲಿ ಬೇರೇನೂ ಕಾಣುತ್ತಿಲ್ಲ. ಅದು ಸಾವಿಗೆ ಸಜ್ಜಾದವರ ಮನಸ್ಥಿತಿಯಲ್ಲದ... ಮತ್ತೇನು?

ಅವರ ಪಾಲಿಗೆ ದಿನಕರ್ ಹುತಾತ್ಮ. ಅರಣ್ಯವಾಸಿ ಮಲೆ ಕುಡಿಯರ ಹಕ್ಕಿಗಾಗಿ ಪ್ರಾಣಕೊಟ್ಟ ಮೊದ... ಅಮರವೀರ. ದಿನಕರ್ ಶವವನ್ನು ಆತನ ಮನೆ ಪಕ್ಕದ ಹಳ್ಳದ ದಿಬ್ಬದ ಮೇಲೆ ಅಂತ್ಯಕ್ರಿಯೆ ಮಾ... ಅಲ್ಲೊಂದು ಮಾವಿನಸಸಿ ನೆಟ್ಟಿದ್ದರು. ಮಕ್ಕಳು ಅದಕ್ಕೆ ಹೂವಿಟ್ಟು ಕೈ ಮುಗಿದರು. ಅಲ್ಲಿ ನೆರೆದಿದ್ದ ಹತ್ತಾರು ಯುವಕರ ಮುಖದಲ್ಲೂ ಆಕ್ರೋಶವಿತ್ತು. ಬಹುಶಃ ಪೊಲೀಸರು ದಿನಕರ್‌ನನ್ನು ಜೀವಂತ ಹಿಡಿದಿದ್ದರೆ ಏನಾಗುತ್ತಿತ್ತೊ. ಆದರೆ ಕೊಂದು ಹತ್ತಾರು ದಿನಕರ್‌ಗಳನ್ನು ಹುಟ್ಟುಹಾಕುವ ತಪ್ಪೆಸಗಿದ್ದಾರೆ. ಮಲೆಕುಡಿಯರ ಮಧ್ಯೆ ದಿನಕರ್ ಹತ್ಯೆ ಆ ಮಟ್ಟದ ಸಂಚಲನವನ್ನೆಬ್ಬಿಸಿದೆ. ಅವಿವೇಕಿ ಸರ್ಕಾರವೊಂದು ಜನವಿರೋಧಿಯಾದಾಗ ಇಂಥದೊಂದು ಬುಡಕಟ್ಟಿಗೆ ಯುದ್ಧ ಅಥವಾ ಸಾವಿನ ಮಧ್ಯೆ ಇನ್ನಾವ ಆಯ್ಕೆಯಿದೆ.



ವಿಶಾಲ ಹಿಂದೂ ಸಮಾಜೋತ್ಸವ

ಅಂಬೇಡ್ಕರ್-ಬಸವಣ್ಣ ಹೆಸರು ದುರ್ಬಳಕೆ



ಚೆಡ್ಡಿಗಳ ಹೊಸ ನಾಟಕ ಇದು.

ಕರ್ನಾಟಕವೂ ಸೇರಿದಂತೆ ದೇಶಾದ್ಯಂತ ಸಂಘ ಪರಿವಾರವು ವಿಶಾಲ ಹಿಂದೂ ಸಮಾವೇಶಗಳನ್ನು ನಡೆಸುತ್ತಿದೆ. ಭಾರತದಲ್ಲಿನ ಜಾತಿವಾದ-ಶೋಷಣೆಗಳನ್ನೆಲ್ಲಾ ಹಿಂದೂ ಮೌಲ್ಯಗಳೆಂದೇ ಎತ್ತಿ ಹಿಡಿಯುವ ಆರ್‌ಎಸ್‌ಎಸ್‌ಅನ್ನು ಕಟ್ಟಿ ಬೆಳೆಸಿದ ಗೋಲ್ವಾಲ್ಕರ್ ಅಲಿಯಾಸ್ ಗುರೂಜಿ ಎಂಬುವನ ಜನ್ಮ ಶತಮಾನೋತ್ಸವದ ಅಂಗವಾಗಿ ಈ ಹಿಂದೂ ಸಮಾವೇಶಗಳು ನಡೆಯುತ್ತಿವೆ.

ವಿಪರ್ಯಾಸವೆಂದರೆ ಕರ್ನಾಟಕದಲ್ಲಿ ಈ ಹಿಂದೂ ಸಮಾವೇಶದ ಪ್ರಚಾರಕ್ಕೆ ಅಂಬೇಡ್ಕರ್, ಬಸವಣ್ಣ, ಕನಕದಾಸ ಮುಂತಾದವರ ಹೆಸರು ಹಾಗೂ ಚಿತ್ರಗಳನ್ನೂ ಯಾವುದೇ ಎಗ್ಗಿಲ್ಲದೆ ಬಳಸಲಾಗುತ್ತಿದೆ.

ಅಸಮಾನತೆ ಜಾತಿ ಭೇದವನ್ನೇ ಉಸಿರಾಡುತ್ತಿರುವ ಸಂಘ ಪರಿವಾರ ಎಲ್ಲಿ, ಜಾತಿ ಶೋಷಣೆ ವಿರೋಧಿಸಿ ಸಮಾನತೆ ಪ್ರತಿಪಾದಿಸಿದ ಅಂಬೇಡ್ಕರ್ ಎಲ್ಲಿ!

ಬಸವಣ್ಣ-ಕನಕದಾಸರಿಗೂ ಈ ಹಿಂದೂ ದುರಭಿಮಾನಿ ಫ್ಯಾಸಿಸ್ಟರಿಗೂ ಏನೂ ಸಂಬಂಧ.....!!

ಅಷ್ಟೇ ಅಲ್ಲ, ಸ್ವಾತಂತ್ರ್ಯ ಹೋರಾಟಗಾರರಾದ ಭಗತ್‌ಸಿಂಗ್, ಚಂದ್ರಶೇಖರ ಆಜಾದ್‌ರ ಫೋಟೋಗಳನ್ನು ಅವರೆಲ್ಲಾ ಹಿಂದೂ ಧರ್ಮಕ್ಕಾಗಿ ಹೋರಾಡಿ ಮಡಿದ ಹುತಾತ್ಮರೆಂಬಂತೆ ಚಿತ್ರಿಸಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಚೆಡ್ಡಿಗಳು.



ದುರಂತ ಏನೆಂದರೆ ಹಿಂದೂ ಸಮಾವೇಶದ ನೆಪದಲ್ಲಿ ಅಂಬೇಡ್ಕರ್‌ರನ್ನು ಬಳಸಿಕೊಳ್ಳುತ್ತಿರುವ ಕೋಮುವಾದಿಗಳ ವಿರುದ್ಧ ರಾಜ್ಯದ ಯಾವೊಂದು ದಲಿತ ಸಂಘಟನೆಗಳೂ ಹಾಗೂ ಪ್ರಗತಿಪರರೂ ವಿರೋಧಿಸದೆ ಸುಮ್ಮನಿರುವುದು. ತಮ್ಮ ಜೀವನವಿಡೀ ಹಿಂದೂ ಧರ್ಮದ ಕೆಡಕುಗಳ ವಿರುದ್ಧ ಹೋರಾಡುತ್ತಲೇ ಬಂದ ಅಂಬೇಡ್ಕರ್‌ರವರು 'ನಾನು ಹಿಂದೂವಾಗಿ ಹುಟ್ಟಿರಬಹುದು, ಆದರೆ ಖಂಡಿತ ಹಿಂದೂವಾಗಿ ಸಾಯಲಾರೆ' ಎಂದು ಘೋಷಿಸಿ ಬೌದ್ಧ ಧರ್ಮಕ್ಕೆ ಸೇರಿಯೇ ಜೀವ ತೊರೆದಿದ್ದರು.

ಗಬ್ಬು ನಾರುವ ಹಿಂದೂ ಬ್ರಾಹ್ಮಣಶಾಹಿಯ ಬಗ್ಗೆ ಅಷ್ಟು ದ್ವೇಷ, ತಿರಸ್ಕಾರವಿತ್ತು ಅಂಬೇಡ್ಕರ್‌ಗೆ. ಆದರೆ ಆರ್‌ಎಸ್‌ಎಸ್‌ನವರು ಎಂಥ ಭಂಡರೆಂದರೆ ಅಂಬೇಡ್ಕರ್ ಹಿಂದೂ ಧರ್ಮ ವಿರೋಧಿ ಎಂಬುದು ಜಗಜ್ಜಾಹೀರಾಗಿದ್ದರೂ ಕೂಡ ವಿರಾಟ್ ಹಿಂದೂ ಸಮಾವೇಶದಲ್ಲಿ ಅವರ ಚಿತ್ರಗಳನ್ನು ಬಳಸಿ ಆಟವಾಡುತ್ತಿದೆ. ಇವರೇನೇ ಸರ್ಕಸ್ ಮಾಡಿದರೂ ಪ್ರಜ್ಞಾವಂತರ್‍ಯಾರು ನಂಬುವುದಿಲ್ಲ. ಆದರೆ ಅವಕಾಶವಾದಿ ದಲಿತ ನಾಯಕರ ಬಗ್ಗೆ ಇದೇ ಮಾತು ಹೇಳಲು ಸಾಧ್ಯವಿಲ್ಲ. ಉದಾಹರಣೆಗೆ ಕರ್ನಾಟಕದ ದಲಿತ ಚಳವಳಿಯ ಪ್ರಮುಖ ಲೀಡರ್‌ಗಳಲ್ಲಿ ಒಬ್ಬರಾಗಿದ್ದ ಜಿಗಣಿ ಶಂಕರ್ ಈಗ ಆನೇಕಲ್ ಹಿಂದೂ ಸಮಾವೇಶದ ಸ್ವಾಗತ ಸಮಿತಿಗೆ ಸೇರಿಕೊಂಡಿದ್ದಾರೆ. ಪ್ರಜಾ ವಿಮೋಚನಾ ಚಳವಳಿ, ಕರ್ನಾಟಕ ಜನಾಂದೋಲನ ಸಂಘಟನೆ ಕಟ್ಟಿ ಈಗ ಬಹುಜನ ಸಮಾಜ ಪಾರ್ಟಿ ಲೀಡರ್‌ಗಳಲ್ಲಿ ಒಬ್ಬರಾಗಿರುವ ಜಿಗಣಿ ಶಂಕರ್ ಮೊದಲೆಲ್ಲಾ ಅಂಬೇಡ್ಕರ್‌ವಾದಿಯೇ ಆಗಿದ್ದರೂ ಇವತ್ತು ಅವಕಾಶವಾದಿಯಂತೆ ದಲಿತ ವಿರೋಧಿ ಚೆಡ್ಡಿಗಳ ಜೊತೆ ಕೈಜೋಡಿಸಿದ್ದಾರೆ.

ಹೀಗೆ ಮಾಡುತ್ತಿರುವವರಲ್ಲಿ ಕೆಲವು ಕಾಂಗ್ರೆಸ್ ಮುಖಂಡರೂ ಇದ್ದಾರೆ. ಪ್ರಭಾಕರ ಕೋರೆ, ರಾಣೆ ಸತೀಶ್‌ರಂತಹ ಹಿರಿಯ ಕಾಂಗ್ರೆಸ್ ನಾಯಕರುಗಳೇ ಆಯಾ ಊರುಗಳ ಹಿಂದೂ ಸಮಾಜೋತ್ಸವದ ತಯಾರಿಗಳಲ್ಲಿ ಸ್ವಾಗತ ಸಮಿತಿಗಳಲ್ಲಿ ಕಾಣಿಸಿಕೊಂಡಿದ್ದಾರೆ. ಇದೆಲ್ಲಕ್ಕಿಂತ ಅಪಾಯಕಾರಿ ಬೆಳವಣಿಗೆಯಾಗುತ್ತಿರುವುದು ವೀರಶೈವ ಮಠಾಧೀಶರ ನಿಲುವುಗಳಲ್ಲಿ. ಕರ್ನಾಟಕದ ಸುಳ್ಯ ತುಮಕೂರು, ಬೆಂಗಳೂರು, ಸಿಂಧನೂರು, ಕೆರೂರು, ಗುಳೇದಗುಡ್ಡ, ಜಮಖಂಡಿ, ಬೀಳಗಿ, ಬೀದರ್- ಹೀಗೆ ನೂರಾರು ಕಡೆ ನಡೆದಿರುವ ಹಿಂದೂ ಸಮಾಜೋತ್ಸವಗಳಲ್ಲಿ ಲಿಂಗಾಯತ ಮಠಗಳೂ ಕೈಜೋಡಿಸಿವೆ. ಎಲ್ಲಿ ಚೆಡ್ಡಿಗಳ ಮನುವಾದ, ಎಲ್ಲಿ ಬಸವಣ್ಣನ ಶರಣ ಸಂಸ್ಕೃತಿ?

ಚೆಡ್ಡಿಗಳಂತೂ 'ಇದು ಪಕ್ಷಾತೀತ ಕೆಲಸ, ಹಿಂದೂ ಧರ್ಮ, ಭಾರತ ದೇಶವನ್ನು ಬಲಪಡಿಸುವ ಕಾರ್ಯ' ಎಂದು ಬೊಗಳೆ ಮಾತಾಡುತ್ತಾ ಎಲ್ಲಾ ಪಾರ್ಟಿಯವರನ್ನು, ಗಣ್ಯ ನಾಗರಿಕರನ್ನು, ಸಾಮಾನ್ಯ ಜನರನ್ನು ಸೇರಿಸುತ್ತಿದ್ದಾರೆ. ಆದರೆ ಈ ಹಿಂದೂ ಫ್ಯಾಸಿಸ್ಟರ ಕ್ರೌರ್ಯ, ಸಮಾಜ ದ್ರೋಹಿ ಕೆಲಸಗಳ ಬಗ್ಗೆ ಗೊತ್ತಿದ್ದರೂ ಕೆಲವು ಮಠಾಧೀಶರು ಅವರೊಂದಿಗೆ ಕೈಜೋಡಿಸಿರುವುದು ಅಸಹ್ಯ ತರಿಸುತ್ತಿದೆ.

ಆದಿಚುಂಚನಗಿರಿ ಸ್ವಾಮಿ ಹೇಳಿಕೇಳಿ ಅರೆಬರೆ ಚೆಡ್ಡಿಯೇ ಆಗಿರುವುದರಿಂದ ಆತ ಹಿಂದೂ ಸಮಾವೇಶಕ್ಕೆ ಹೋದರೆ ಯಾರೂ ಗಾಬರಿಯಾಗುವುದಿಲ್ಲ. ಆದರೆ ಬಸವಣ್ಣನವರ ಶರಣತತ್ವವನ್ನೇ ಆಚರಿಸುವ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿಗಳು ಪೆದ್ದರಲ್ಲವಲ್ಲ? ಅವರಿಗೆ ಆರ್‌ಎಸ್‌ಎಸ್, ವಿಶ್ವಹಿಂದೂ ಪರಿಷತ್, ಭಜರಂಗ ದಳಗಳ ಅಯೋಗ್ಯತೆ ತಿಳಿದಿಲ್ಲವಾ? ಹಾಗಿದ್ದರೂ ಅವರು ಮೊನ್ನೆ ತುಮಕೂರಿನ ಹಿಂದೂ ಸಮಾವೇಶದಲ್ಲಿ ಭಾಗವಹಿಸಿ ಬಸವ-ಶರಣ ತತ್ವಕ್ಕೆ ದ್ರೋಹ ಮಾಡಿಬಿಟ್ಟರು.



ಜಿಗಣಿ ಶಂಕರ್

ಚಿತ್ರದುರ್ಗದ ಮುರುಘಾಮಠದ ಮುರುಘ ರಾಜೇಂದ್ರ ಶರಣರನ್ನು ಈ ಸಮಾವೇಶದಲ್ಲಿ ಭಾಗವಹಿಸಬೇಕೆಂದು ಆಹ್ವಾನಿಸಲಾಗಿತ್ತು. ಆದರೆ ಬಸವಧರ್ಮದಲ್ಲಿ ನಂಬಿಕೆಯಿಟ್ಟಿರುವ ಶರಣರು ಪಾಲ್ಗೊಳ್ಳುತ್ತಿಲ್ಲ. ಜನವರಿ 6ರಂದು ಚಿತ್ರದುರ್ಗದಲ್ಲಿ ನಡೆಯುತ್ತಿರುವ ಹಿಂದೂ ಸಮಾವೇಶದಲ್ಲಿ ಶರಣರೇ ರೂಪಿಸಿ ದೀಕ್ಷೆ ಕೊಟ್ಟಿದ್ದ ಸೇರಲಾಲ್ ಸಂಗನಬಸವ ಸ್ವಾಮಿ, ಮಾದಾರ ಚೆನ್ನಯ್ಯ ಸ್ವಾಮಿ, ಮಡಿವಾಳ ಮಾಚಿದೇವರು ಈಗ ಭಗವಾಧ್ವಜ ಹಿಡಿದಿರುವುದು ದುರಂತ.

ಇವರೆಲ್ಲಾ ದಮನಿತ ಜಾತಿ ಜನಾಂಗಗಳ ಧಾರ್ಮಿಕ ಮುಖಂಡರೆನಿಸಿಕೊಂಡವರು. ಮುರುಘಾಮಠದಿಂದ ಭೂಮಿ-ಪೀಠ ಎಲ್ಲಾ ಪಡೆದು ಬಸವ ತತ್ವ ಆಚರಿಸುವ ಬದಲಾಗಿ ಈಗ ಅದಕ್ಕೇ ಗೂಟ ಹೊಡೆದು ಬ್ರಾಹ್ಮಣಶಾಹಿ ಹಿಂದೂವಾದದ ಗುಲಾಮರಾಗಿಬಿಟ್ಟಿದ್ದಾರೆ. ಹೊಸದುರ್ಗದ ಬಸವ ಶಾಂತವೀರ ಸ್ವಾಮಿಯಂತೂ ಹೊಳಲ್ಕೆರೆ, ಹೊಸದುರ್ಗಗಳಲ್ಲಾ ಹಿಂದೂ ಧರ್ಮದ ಚಳ್ಳೆ ಭಾಷಣ ಮಾಡಿ ಬಂದಿದ್ದಾರೆ. ಇವರನ್ನೆಲ್ಲಾ 'ಶರಣ'ರೆನ್ನಲು ಸಾಧ್ಯವೆ?

ಓಟ್‌ಬ್ಯಾಂಕ್ ರಾಜಕೀಯ

ಗೋಲ್ವಾಲ್ಕರ್ ಈ ದೇಶ ಕಂಡ ಮಹಾನ್ ಚಿಂತಕನೋ, ತತ್ವಜ್ಞಾನಿಯೋ ಅಲ್ಲ. ಅವನು ಬಸವಣ್ಣ, ಕನಕ, ಪುರಂದರ, ಶಿಶುನಾಳ ಷರೀಫರಂತೆ ಬದುಕಿನ ಮೌಲ್ಯಗಳನ್ನು ಬೋಧಿಸಿದವನೂ ಅಲ್ಲ. ಸಮಾನತೆ, ಸ್ವಾತಂತ್ರ್ಯ ನೈತಿಕತೆಗಳನ್ನು ಪ್ರತಿಪಾದಿಸಿದವನೂ ಅಲ್ಲ. ಅವನದ್ದೇನಿದ್ದರೂ ಭಾರತ ಕೇವಲ ಹಿಂದೂಗಳಿಗೇ ಹಿಂದೂ ದೇಶವಾಗಿರಬೇಕೆಂಬ ಬಡಬಡಿಕೆಯಾಗಿತ್ತು ಅಷ್ಟೇ. ಸಂಘ ಪರಿವಾರದ ಹಿಂದೂ ದೇಶದಲ್ಲಿ ದಲಿತರು, ಸ್ತ್ರೀಯರು ಹಾಗೂ ಶೂದ್ರರ ಸ್ಥಾನಮಾನ ಏನೆಂಬುದು ಎಲ್ಲರಿಗೂ ಗೊತ್ತಿದೆ. ಇಂಥ ಸಮಾಜದ್ರೋಹಿ ಚಿಂತನೆಗಳ ಗೋಲ್ವಾಲ್ಕರ್‌ನ ಜನ್ಮ ಶತಾಬ್ಧಿಯ ನೆಪದಲ್ಲಿ ಈಗ ದೇಶದೆಲ್ಲೆಡೆ ವಿಶಾಲ ಹಿಂದೂ ಸಮಾಜೋತ್ಸವ ಆಚರಿಸುತ್ತಿರುವುದು ಬೇರಿನ್ಯಾವ ಕಾರಣಕ್ಕೂ ಅಲ್ಲ.

ಹಿಂದೂ ಓಟ್‌ಬ್ಯಾಂಕ್‌ಗಾಗಿ

ಸಂಘ ಪರಿವಾರಗಳು 2005ರಲ್ಲಿ ಉತ್ತರ ಪ್ರದೇಶದ ಚಿತ್ರಕೂಟದಲ್ಲಿ ನಡೆಸಿದ ಚೆಡ್ಡಿ ಬೈಠಕ್‌ನಲ್ಲಿ ದೇಶದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಕನಿಷ್ಠ 3 ಸಾವಿರ ಹಾಗೂ ಒಂದೊಂದು ಪಾರ್ಲಿಮೆಂಟ್ ಕ್ಷೇತ್ರದಲ್ಲೂ 15 ಸಾವಿರ ಹಿಂದೂಗಳನ್ನು ಸಂಘಟನೆಯ ಸದಸ್ಯರನ್ನಾಗಿಸುವ ನಿರ್ಣಯ ಮಾಡಿಕೊಂಡಿದ್ದಾರೆ. ಹಿಂದೂ-ಭಾರತ ಮುಂತಾದ ಉನ್ಮಾದ ಕೆರಳಿಸಿ ಮುಂದಿನ ಚುನಾವಣೆ ಸಮಯದ ಹೊತ್ತಿಗೆ ಒಂದಿಷ್ಟು ಹಿಂದೂ ಓಟ್‌ಬ್ಯಾಂಕ್ ಗಟ್ಟಿ ಮಾಡಿಕೊಳ್ಳಬೇಕೆಂಬ ಲೆಕ್ಕಾಚಾರ ಬಿಟ್ಟರೆ, ಇದರಲ್ಲಿ ಬೇರೇನೂ ಇಲ್ಲ.

ಆದರೆ ಚೆಡ್ಡಿಗಳ ಈ ಹುನ್ನಾರಕ್ಕೆ ಪ್ರಗತಿಪರರು, ಸಾಮಾನ್ಯ ಜನರು ಹಾಗೂ ಜನಪರ ಕಾಳಜಿಗಳಿರುವ ಮಠಾಧೀಶರೂ ಕೈಜೋಡಿಸುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಅಷ್ಟೇ ಅಲ್ಲ, ಚೆಡ್ಡಿಗಳು ತಮ್ಮ ಈ ದುಷ್ಟ ಉದ್ದೇಶಕ್ಕೆ ಬಸವಣ್ಣ, ಅಂಬೇಡ್ಕರ್‌ರವರನ್ನು ಬಳಸಿಕೊಳ್ಳುತ್ತಿರುವುದರ ವಿರುದ್ಧ ಜನ ಪ್ರತಿಭಟಿಸಬೇಕಿದೆ.

—ಈಶ

1919- ಎ ಲವ್‌ಸ್ಟೋರಿ!

ಗಾಂಧಿಯ ನಿಗೂಢ ಪ್ರೇಯಸಿ

ರಾಷ್ಟ್ರಪಿತ ಗಾಂಧಿಗೆ ವಿವಾಹೇತರ ಸಂಬಂಧವಿತ್ತಾ? ಈ ಪ್ರಶ್ನೆಯೇ ಮಡಿವಂತರಿಗೆ ಸಿಡಿಲಿನಂತೆ ಗೋಚರಿಸಬಹುದು.

ಆದರೆ ಗಾಂಧಿಯೇ ಹೇಳಿದಂತೆ ಅವರು ಬಂಗಾಳದ ಸುರಸುಂದರಿ, ಸ್ತ್ರೀವಾದಿ, ಗಾಯಕಿ, ಬರಹಗಾರ್ತಿ ಮತ್ತು ಸ್ವಾತಂತ್ರ್ಯ ಹೋರಾಟಗಾರ್ತಿ ಸರಳಾದೇವಿಯವರೊಂದಿಗೆ 'ಬೌದ್ಧಿಕ ವಿವಾಹ'ವಾಗಿದ್ದರು, ಅವರಿಬ್ಬರೂ 'ಅಧ್ಯಾತ್ಮಿಕ ದಂಪತಿ'ಗಳಾಗಿದ್ದರು. ಗಾಂಧೀಜಿ ದೈಹಿಕ ಸಂಬಂಧವನ್ನು ಮೀರಿದ ಪ್ರೀತಿಯಲ್ಲಿ ತೊಯ್ದು ತೊಪ್ಪೆಯಾಗಿದ್ದರು. ಮಗ ದೇವದಾಸ್, ಸಿ. ರಾಜಗೋಪಾಲಚಾರಿ ಮುಂತಾದವರ ಒತ್ತಡ ಇರದೇ ಹೋಗಿದ್ದರೆ ಗಾಂಧೀಜಿ ಕಸ್ತೂರಬಾರನ್ನು ತೊರೆದು ಸರಳಾದೇವಿಯವರನ್ನು ಬಹಿರಂಗವಾಗಿ ಮದುವೆಯಾಗುತ್ತಿದ್ದರೇನೋ?


ಈಗ ಗಾಂಧಿಯವರ ಮೊಮ್ಮಗ ರಾಜಮೋಹನ್ ಗಾಂಧಿಯವರೇ ಈ ರೋಚಕ ಪ್ರೇಮ ಪ್ರಕರಣ ಕುರಿತು ತಮ್ಮ ಹೊಸ ಪುಸ್ತಕದಲ್ಲಿ ಬರೆದಿದ್ದಾರೆ. ಸ್ವಾತಂತ್ರ್ಯದ ಕಿಚ್ಚು ಹೋರಾಟದ ಕಾವುಗಳ ಮಧ್ಯೆ ಅರಳಿದ ಅರ್ಥಪೂರ್ಣ ಪ್ರೇಮ ಅದು. ಆದರೆ ಈ 'ಲವ್ ಸ್ಟೋರಿ'ಯ ನಾಯಕಿ ಸರಳಾದೇವಿ ಮಾತ್ರ ಇತಿಹಾಸದ ಪುಸ್ತಕಗಳ ಫುಟ್‌ನೋಟ್ಸ್‌ಗಳಲ್ಲಷ್ಟೇ ಕರಗಿಹೋದದ್ದು ವಿಷಾದನೀಯ. ಏಕೆಂದರೆ ಸರಳಾದೇವಿ ಅಪ್ರತಿಮ ಬುದ್ಧಿವಂತೆ, ಬರಹಗಾರ್ತಿ, ಹಾಡುಗಾರ್ತಿ.... ಅದೆಲ್ಲಕ್ಕೂ ಮಿಗಿಲಾಗಿ ಸ್ತ್ರೀ ಶೋಷಣೆಯ ವಿರುದ್ಧ ಅಂದೇ ಗಟ್ಟಿ ದನಿ ಎತ್ತಿದ್ದ ಹೆಣ್ಣು.

ಗಾಂಧೀಜಿಯ ಈ 'ಲವ್ ಸ್ಟೋರಿ' ಅವರ ಆತ್ಮಕಥೆಯಲ್ಲೂ ಪ್ರಸ್ತಾಪವಾಗಿಲ್ಲವಾದರೂ, ಸಾಲುಗಳ ಮಧ್ಯೆ (In between the lines) ಈ ಪ್ರೀತಿ ಪ್ರೇಮದ ಸುವಾಸನೆಯನ್ನು ಗುರುತಿಸಬಹುದಾಗಿದೆ.

ಹೋರಾಟದಲ್ಲೊಂದು ಪ್ರೇಮ ಕಾರಂಜಿ!

ಗಾಂಧೀಜಿಯ ಸ್ಫೂರ್ತಿ ಚಿಲುಮೆ ಸರಳಾದೇವಿ ರವೀಂದ್ರನಾಥ್ ಠಾಗೋರ್‌ರ ಸಂಬಂಧಿ. ಸಶಸ್ತ್ರ ಹೋರಾಟದ ಮೂಲಕ ಸ್ವಾತಂತ್ರ್ಯ ಅಭಿಯುಕ್ತವೆಂದು ಪ್ರತಿಪಾದಿಸುತ್ತಿದ್ದ ಸರಳಾದೇವಿಯವರನ್ನು ಬಂಗಾಳದ 'ಜೋನ್ ಆಫ್ ಆರ್ಕ್' ಎನ್ನುತ್ತಿದ್ದರು, ಭೂಮಿಗಿಳಿದು ಬಂದ ದುರ್ಗಾದೇವಿ ಎಂದು ಹೊಗಳುತ್ತಿದ್ದರು.

ಗಾಂಧಿ-ಸರಳಾದೇವಿ ಮಧ್ಯೆ ಈ ಆಕರ್ಷಣೆ ಹುಟ್ಟಿದ್ದು 1919ರಲ್ಲಾದರೂ, 1901ರಲ್ಲೇ ಗಾಂಧಿ, ಸರಳಾದೇವಿ ಪರಸ್ಪರ ಪರಿಚಿತರಾಗಿದ್ದರು. ಜೈಲಿನಲ್ಲಿದ್ದ ಗಂಡ ರಾಮಭುಜ್ ದತ್ತ ಚೌಧರಿಯ 'ಹಿಂದೂಸ್ತಾನ್' ಪತ್ರಿಕೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಸರಳಾದೇವಿಯವರಿಗೆ 1919ರ ಸುಮಾರಿಗೆ 47ರ ವಯಸ್ಸು. ಆಗ ಸರಳಾದೇವಿ ಇದ್ದದ್ದು ಲಾಹೋರ್‌ನಲ್ಲಿ. ಲಾಹೋರ್‌ಗೆ ಬಂದಾಗ ಗಾಂಧಿ ಸರಳಾದೇವಿಯವರ ಮನೆಯಲ್ಲೇ ಉಳಿಯುತ್ತಿದ್ದರು. ಒಮ್ಮೆ ಲಾಹೋರಿಗೆ ಹೋಗುವ ಮುನ್ನ ಅಹಮದಾಬಾದ್‌ನ ಅನಸೂಯ ಬೆನ್‌ರವರಿಗೆ ಬರೆದ ಪತ್ರ (ಅಕ್ಟೋಬರ್ 27, 1919)ದಲ್ಲಿ ಗಾಂಧಿ 'ಸರಳಾದೇವಿಯ ಸಾಂಗತ್ಯ ಪುಷ್ಕಳಕರ.... ಆಕೆ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ....' ಎಂದು ಬರೆಯುವ ಮೂಲಕ ತಮ್ಮ ಪ್ರೇಮ ಪ್ರಕರಣದ ಕುರುಹನ್ನು ದಾಖಲಿಸಿದ್ದಾರೆ. ನಂತರದ ದಿನಗಳಲ್ಲಿ ಗಾಂಧಿ ಮತ್ತು ಸರಳಾದೇವಿಯವರ ಮಧ್ಯದ ಸಂಬಂಧ ಎಷ್ಟು ಗಾಢವಾಗಿತ್ತೆಂದರೆ ಗಾಂಧಿ ಹೇಳುವ ಪ್ರಕಾರ 'ಅದನ್ನು ವ್ಯಾಖ್ಯಾನಿಸುವುದು ಕಷ್ಟಕರ....'



1935ರಲ್ಲಿ ಗಾಂಧಿ ಮಾರ್ಗರೆಟ್ ಸ್ಯಾಂಜರ್ ಎದುರು ಪತ್ನಿ ಕಸ್ತೂರಬಾರವರ ಅನಕ್ಷರತೆ ಕುರಿತು ಪ್ರಸ್ತಾಪಿಸಿ, ತಾವು ವಿಶಾಲ ಮನೋಭಾವದ, ಸಾಂಸ್ಕೃತಿಕ-ಶೈಕ್ಷಣಿಕ ಹಿನ್ನೆಲೆಯ ಮಹಿಳೆಯೊಬ್ಬಳಲ್ಲಿ ಅನುರಕ್ತರಾಗಿದ್ದನ್ನು, ನಂತರ ಮಗ ಮತ್ತು ಹಿತೈಷಿಗಳ ಒತ್ತಡದಿಂದ ಅದರಿಂದ ಹೊರಬರಲು ಪ್ರಯತ್ನಿಸಿದ್ದನ್ನು ಹೇಳಿಕೊಂಡಿದ್ದಾರೆ. ಹಾಗೆಯೇ ತಮ್ಮ ಆತ್ಮಚರಿತ್ರೆಯ ಕೊನೆಯ ಪುಟದಲ್ಲಿ 'ಭಾರತಕ್ಕೆ ಮರಳಿದಾಗ ತಮ್ಮಲ್ಲಿ ಹುದುಗಿದ್ದ ಆಹ್ಲಾದಕರ ಭಾವನೆಗಳ' ಕುರಿತು ದಾಖಲಿಸಿದ್ದೂ 1919-20ರ ಸರಳಾದೇವಿಯವರೊಂದಿಗಿನ ಪ್ರೇಮ ಪ್ರಕರಣವನ್ನು ನೆನೆಯುತ್ತಲೇ ಎಂಬುದು ಸಹಜ ಸತ್ಯ.

ಗಾಂಧೀಜಿಯ ಸಂಬಂಧಗಳು ಮತ್ತು ಸರಳಾದೇವಿಯವರ ಕೆರಿಯರ್ ಕುರಿತು ಆಳವಾಗಿ ಸಂಶೋಧಿಸಿರುವ ಮಾರ್ಟಿನ್ ಗ್ರೀನ್ 'ತಮ್ಮೆದುರು ತೆರೆದ




ಬಾಗಿಲನ್ನು ಗಾಂಧಿಯೇ ಮುಚ್ಚಿದರು' ಎಂದು ಬರೆಯುತ್ತಾ, ಗಾಂಧಿ ಸ್ವಯಂ ಆಗಿ ತಮ್ಮ ಪ್ರೀತಿಯನ್ನು ಬಲವಂತದಿಂದ ಮುಚ್ಚಿಟ್ಟುಕೊಂಡರು ಎಂಬುದನ್ನು ಹೇಳುತ್ತಾನೆ.

ಮುಂದೆ ಸರಳಾದೇವಿಯವರ ಮಗ ದೀಪಕ್‌ನನ್ನು ತಮ್ಮ ಸಬರ್‌ಮತಿ ಆಶ್ರಮಕ್ಕೆ ಸೇರಿಸಿಕೊಂಡ ಗಾಂಧೀಜಿಯವರು ದೀಪಕ್ ಕುರಿತು ವಿಶೇಷ ಕಾಳಜಿ ವಹಿಸುತ್ತಿದ್ದುದನ್ನು ಆಶ್ರಮದ ನಿವಾಸಿಗಳು ಆಕ್ಷೇಪಿಸಿದ್ದರು. ನಂತರ ಅದೇ ಆಶ್ರಮ ಸೇರಿದ ಸರಳಾದೇವಿಯವರೊಂದಿಗೆ ಗಾಂಧಿ ಆಪ್ತವಾಗಿ 'ಹರಟೆ' ನಡೆಸುತ್ತಿದ್ದರು. ಗಾಂಧಿಯ 'ಹೆಂಗರುಳಿನ ಗುಣ'ದಿಂದಾಗಿ ಬಹಳಷ್ಟು ಸ್ತ್ರೀಯರು ಅವರತ್ತ ಅಭಿಮಾನದ, ಗೌರವದ ಪ್ರೀತಿ ತೋರಿಸಿದ್ದಾರೆ. ಆದರೆ ಸರಳಾದೇವಿಯವರ ಪ್ರೀತಿ ಅಪರಂಜಿಯಂತಹದ್ದು. ಅದು ಅಧಿಕೃತವಾಗಿ ಸಮಾಜದೆದುರು ಕಾಣಿಸಿಕೊಳ್ಳದಂತೆ ಗಾಂಧಿಯೇ ಬಾಹ್ಯವಾಗಿ ಆ ಪ್ರೀತಿ ಚಿಗಿಯುವುದನ್ನು ತಡೆದರು.

ಇದು ಸ್ವಾತಂತ್ರ್ಯ ಸಂಗ್ರಾಮದ ವೇಳೆ ನಡೆದ 'ಒಂದು ಪ್ರೀತಿಯ ಕತೆ'.... ಮೋಹ, ವಾಂಛೆಗಳಿಂದ ಯಾವ ಮನುಷ್ಯನೂ ಮುಕ್ತನಲ್ಲ.. ಇಂತಹ ಮೋಹದ ದಾಸನಾದ ಮೋಹನದಾಸರೂ ಸಾಮಾನ್ಯ ಮನುಷ್ಯರೇ.... ಆದರೆ ಅಂದಿನ ಸಂದರ್ಭ, ಆಗುಹೋಗುಗಳಿಗೆ ಸ್ಪಂದಿಸಿ ಮೋಹ, ವಾಂಛೆಗಳನ್ನು ಮೀರಿ ನಿಂತಿದ್ದರಿಂದಾಗಿ ಅದೇ ಮೋಹನದಾಸ್ ಗಾಂಧಿ ಮಹಾತ್ಮರೂ ಆದದ್ದಲ್ಲವೇ?

—ಪಿ.ಕೆ.ಮಲ್ಲನಗೌಡರ್


ಹಣದಾಹಿ ಹಿಟ್ನಾಳ್‌ಗೆ ಕಾದಿದೆ ಮುಖಭಂಗ!



ಹಣದಾಹಿ ಶಾಸಕ ಹಿಟ್ನಾಳ್

'ತಿನ್ನೋಕೆ ಉಣ್ಣೋಕೆ ಹೌದಪ್ಪ; ಕೆಲಸಕ್ಕೆ ಮಾತ್ರ ಒಲ್ಲೆಪ!' ಎನ್ನುವ ಕೊಪ್ಪಳ ಶಾಸಕ ಬಸವರಾಜ ಹಿಟ್ನಾಳಗೆ ಟಾಂಗು ಕೊಡಲು ಆತನ ಗೆಲುವಿಗಾಗಿ ದುಡಿದವರೇ ರೆಡಿಯಾಗಿದ್ದು ಮೊದಲ ಕಂತಿನಲ್ಲಿ ತಾಲ್ಲೂಕು ಪಂಚಾಯತ್ ಅಧ್ಯಕ್ಷ ಬಸವರಾಜ ಭಾವಿಕಟ್ಟಿಯನ್ನು ಇಳಿಸಲು ಸಜ್ಜಾಗಿದ್ದಾರೆ, ಹಿಟ್ನಾಳ ಕೂಡ ಚಾಲೆಂಜ್ ಮಾಡಿದ್ದಾನೆ.

ಶಾಸಕನಾಗಿ ನಿಷ್ಕ್ರಿಯ, ಭ್ರಷ್ಟನಾದ ಹಿಟ್ನಾಳ, ಪಕ್ಷವನ್ನು ಕಾಲಕಸ ಮಾಡಿಬಿಟ್ಟಿದ್ದಾನೆ. ನಿಷ್ಠಾವಂತರನ್ನೇ ಹಚಾ ಅನ್ನುವ ಮಟ್ಟಕ್ಕೆ ಬಂದುಬಿಟ್ಟಿದ್ದಾನೆ. ದೇವೇಗೌಡರನ್ನು ಬೈಯುತ್ತ ಮಗನನ್ನೇ ಜಿಲ್ಲಾ ಪಂಚಾಯ್ತಿ ಮೆಂಬರ್ ಮಾಡಿದ. ಸಾಲದು ಅಂತ ಸ್ಥಾಯಿ ಸಮಿತಿ ಅಧ್ಯಕ್ಷಗಿರಿ ಬೇರೆ ಮಗನಿಗೆ. ಎಲ್ಲೆಲ್ಲಿ ಎಷ್ಟೆಷ್ಟು ಸಾಧ್ಯವೋ ಅಷ್ಟಷ್ಟು ಮೇಯುತ್ತಲೇ ಇರುವ ಹಿಟ್ನಾಳನ ಪ್ರೈವೇಟ್ ಕಂಪನಿಯಾಗಿರುವ ತಾಲ್ಲೂಕು ಪಂಚಾಯ್ತಿಯನ್ನು ತಪ್ಪಿಸಲು ಕಾಂಗ್ರೆಸ್‌ನ ಒಂದಿಷ್ಟು ನಾಯಕರು, ಸದಸ್ಯರು ಅಲ್ಲದೇ ಜೆಡಿಎಸ್‌ನ ಆರು ಸದಸ್ಯರು ಒಂದಾಗಿರುವುದು ಈಗ ನಿತ್ಯ ಕುತೂಹಲ ಮೂಡಿಸಿದೆ.



ಭ್ರಷ್ಟ ಭಾಸ್ಕರ ನಾಯಕ್

ಸಾರು ಸೂಪರ್; ನೀರು ಜಾಸ್ತಿ ಅಷ್ಟೇ

2006 ರ ಫೆಬ್ರವರಿಯಲ್ಲಿ ಕೊಪ್ಪಳ ತಾಲ್ಲೂಕು ಪಂಚಾಯ್ತಿಯ ಅಧ್ಯಕ್ಷ ಗಾದಿಗೆ ಹಿಂದುಳಿದ (ಅ) ಮೀಸಲಾತಿ ಬಂದಾಗ ತನ್ನದೇ ಸಂಬಂಧಿಕ ಬಸವರಾಜ ಭಾವಿಕಟ್ಟಿಯನ್ನು ಅಧ್ಯಕ್ಷ ಮಾಡಿ, ಇನ್ನೋರ್ವ ಆಕಾಂಕ್ಷಿ ನಿಂಗಪ್ಪ ಯತ್ನಟ್ಟಿಗೆ 10 ತಿಂಗಳ ನಂತರ ಅಧಿಕಾರ ಕೊಡಿಸುವುದಾಗಿ ಹೇಳಿ, ಉಳಿದ ಸದಸ್ಯರಿಗೆ ನಯಾಪೈಸೆ ಕೊಡದೇ ಆ ಪ್ರಕ್ರಿಯೆ ಮುಗಿಸಿದ್ದ. ಆಮೇಲೆ ಅಧ್ಯಕ್ಷ ಭಾವಿಕಟ್ಟಿ ಶಾಸಕ ಹಿಟ್ನಾಳನ ರಬ್ಬರ್‌ಸ್ಟ್ಯಾಂಪ್ ಆಗಿಬಿಟ್ಟ. ಬರುವ ಯೋಜನೆಗಳೆಲ್ಲ ಸದಸ್ಯರಿಗೆ ಗೊತ್ತಾಗದಂತೆ ನುಂಗತೊಡಗಿದರು. ಭಾವಿಕಟ್ಟಿ, ಶಾಸಕ ಹಿಟ್ನಾಳ, ಇ.ಓ. ಭಾಸ್ಕರ್ ನಾಯಕ್ ತ್ರಿವಳಿಗಳು ಒಂದು ಕಡೆಯಿಂದ ನುಂಗುತ್ತಲೇ ಬಂದರೂ ಸದಸ್ಯರು ಉಗುಳು ನುಂಗಿ ಸುಮ್ಮನಾದರು: ಇತ್ತ ಭಾವಿಕಟ್ಟಿಯ 10 ತಿಂಗಳು ಕಳೆದರೂ ನಿಂಗಪ್ಪ ಯತ್ನಟ್ಟಿಗೆ ಸೀಟು ಬಿಟ್ಟು ಕೊಡದಿರುವುದನ್ನು ನೋಡಿ ಹಿಟ್ನಾಳನಿಗೆ ಕೇಳಿದರೆ ನಡ್ರಿ ನಡ್ರಿ ಅಂತ ಸಾಗಹಾಕಿದ್ದಾನೆ. ಭಾವಿಕಟ್ಟಿ ಮುಗ್ಧ ಹಣದಿಂದ ಸ್ಥಿತಿವಂತನೂ ಹೌದು. ಆದರೆ ಸಾರು ಸೂಪರ್, ನೀರು ಜಾಸ್ತಿ ಅಷ್ಟೇ ಅನ್ನುವಂತಾಗಿದೆ ಸದಸ್ಯರ ಸ್ಥಿತಿ.

ಯುದ್ಧ ಮಾಡೋದ್ಯಾವಾಗ!

PWD, ಜಲಾನಯನ, ತಾಲ್ಲೂಕು ಪಂಚಾಯತ್, ಕಂಪ್ಯೂಟರ್ ಸಪ್ಲೈ ಎಲ್ಲದರಲ್ಲೂ ಲೂಟಿ ಹೊಡೆಯುತ್ತ ಪಕ್ಷವನ್ನೇ ಕೇರ್ ಮಾಡದ ಹಿಟ್ನಾಳ್ ವಿರುದ್ಧ ಯುದ್ಧ ಮಾಡದೇ ಮಾತಿನಲ್ಲಿ ದಿನಗಳು ಕಳೆದುಹೋದವು ಮೊನ್ನೆ ಎಲ್ಲರೂ 'ಸಾಯೋಮಟ ಸಾಮು ತೆಗೆದರೆ, ಯುದ್ಧ ಮಾಡೋದ್ಯಾವಾಗ' ಅಂತ ಈಗ ಹಿಟ್ನಾಳನ ವಿರುದ್ಧ ತೊಡೆ ತಟ್ಟಿ, ರಹಸ್ಯ ಸ್ಥಳದಲ್ಲಿ ಭಾವಿಕಟ್ಟಿಯನ್ನು ಇಳಿಸಲು ನಿರ್ಧರಿಸಿದಾಗ ಜೆಡಿಎಸ್(6), ಎಬಿಪಿಜೆಡಿ (1) ಬೆಂಬಲವು ಸಿಕ್ಕಿದೆ. ಇತ್ತ ಇವರಿಗೆಲ್ಲ ಕಾಂಗ್ರೆಸ್‌ನ ಇನ್ನೊಂದು ಗುಂಪಾಗಿರುವ ಎಂಎಲ್‌ಸಿ ಶ್ರೀನಾಥ್, ಕರಿಯಣ್ಣ ಸಂಗಟಿ, ರುದ್ರಮುನಿಗಾಳಿ, ದಿವಟರ್, ಅಸೀಫ್ ಅಲಿಯವರ ಬೆಂಬಲ ಸಿಕ್ಕ ಮೇಲೆ ಡಿ. 21 ರ ತಾಲ್ಲೂಕು ಪಂಚಾಯ್ತಿ ಸಭೆಗೆ 26 ಜನರಲ್ಲಿ ಬರೀ 13 ಜನ ಹಾಜರಾದರು.

ಆದಕ್ಕೂ ಮುನ್ನ 19 ಕಾಂಗ್ರೆಸ್ ಸದಸ್ಯರಲ್ಲಿ ಬರೀ ಆರು ಜನ ಮಾತ್ರ ಸಭೆಗೆ ಬಂದಿದ್ದು ನೋಡಿ ಹೆದರಿಬಿಟ್ಟ ಶಾಸಕ ಪತ್ರಕರ್ತರಿಂದ ಮೊಬೈಲ್‌ನಲ್ಲಿ ಸದಸ್ಯರಿಗೆ ಒತ್ತಡ ಹಾಕಿ ಕರೆಸಿಕೊಂಡು ಕೋರಂ ಭರ್ತಿ ಮಾಡಿದ. ರೇಣುಕಾ, ಮಹಾಂತೇಶ, ನಿಂಗಪ್ಪ ಯತ್ನಟ್ಟಿ, ಅಜೀಜ್, ಶ್ರೀರಾಮುಲು, ಭರತ್‌ನಾಯಕ, ಮರಿಯಪ್ಪ ಸೇರಿದಂತೆ ಅನೇಕರು ಶಾಸಕರ ಒತ್ತಾಯಕ್ಕೆ ಕೇರ್ ಮಾಡಲೇ ಇಲ್ಲ, ಬರಲೂ ಇಲ್ಲ!

ಕೊಪ್ಪಳ ಕಾಂಗ್ರೆಸ್ ಕಿತ್ತಾಟ

ಕಾಂಗ್ರೆಸ್ V/s ಕಾಂಗ್ರೆಸ್!

ಮೊದಲು ಇದು ಕೆಲ ಸದಸ್ಯರು, ಶಾಸಕರ ನಡುವಿನ ಜಗಳವಾದರೆ, ಯಾವಾಗ ಕಾಂಗ್ರೆಸ್‌ನ ಒಂದು ಗುಂಪು ಭಿನ್ನಮತೀಯರಿಗೆ ಬೆಂಬಲ ಕೊಡತೊಡಗಿತೋ ಆಗ ಇದು ಕಾಂಗ್ರೆಸ್ V/s ಕಾಂಗ್ರೆಸ್ ನಡುವಿನ ಯುದ್ಧವಾಗಿದ್ದರೆ, ಜೆಡಿಎಸ್‌ನವರು ಬರೀ ಹಿಮ್ಮೇಳ ಒದಗಿಸುವವರಾಗಿದ್ದಾರೆ. ಈ ಗುಂಪು ಅವಿಶ್ವಾಸ ಮಾಡುವ ಸುಳಿವರಿತ ಶಾಸಕ ಮತ್ತೆ ಪತ್ರಕರ್ತರೆದುರೆ ಎಲ್ಲ 19 ಸದಸ್ಯರನ್ನು ಹಾಲಿ ಅಧ್ಯಕ್ಷನ ಪರವಾಗಿ ನಿಲ್ಲಿಸಿ ತೋರಿಸುತ್ತೇನೆ ಅಂತ ಚಾಲೆಂಜ್ ಹಾಕಿ, ಕಳೆದ ರವಿವಾರದಿಂದಲೇ ಕೆಲ ಸದಸ್ಯರನ್ನು ಎತ್ತಾಕಿಕೊಂಡು ಹೋಗಿದ್ದಾನೆ. ಅವಿಶ್ವಾಸಕ್ಕೆ ಮೊದಲು ಬೆಂಕಿ ಹಾಕಿದ್ದ ಗಂಗಾಧರ ಸ್ವಾಮಿ ಮತ್ತು ನಿಂಗಜ್ಜ ಜಹಗೀರದಾರ ಶಾಸಕನ ಗುಂಪಿನಲ್ಲಿ ಕಾಣಿಸಿಕೊಂಡಿರುವುದರಿಂದ ಕಾಂಗ್ರೆಸ್ ರಣರಂಗವಾಗುವುದು ಖಚಿತ. ಈ ನಡುವೆ ಸದಸ್ಯರ ದೌರ್ಬಲ್ಯಗಳನ್ನು ಬಳಸಿ ತಮ್ಮತ್ತ ಸೆಳೆಯಲು ಶಾಸಕ ಮತ್ತು ಬ್ಲಾಕ್ ಅಧ್ಯಕ್ಷ ಎಸ್.ಬಿ. ನಾಗರಾಳ ಓಡಾಡುತ್ತಿದ್ದಾರೆ. ಜೆಡಿಎಸ್‌ನ ಆರು ಸದಸ್ಯರ ಖರೀದಿಗೆ ಶಾಸಕ ಹೋಗಿ ಮುಖಭಂಗ ಅನುಭವಿಸಿ ಬಂದಿದ್ದಾನೆ.



ಭಾವೀಕಟ್ಟಿ

ಭಾಸ್ಕರ್‌ನೆಂಬ ಭ್ರಷ್ಟ!

ತಾಲ್ಲೂಕು ಪಂಚಾಯ್ತಿ ಸದಸ್ಯರೊಳಗಿನ ಈ ಒಡಕು ನೋಡಿ ಬಲು ಖುಷಿಯಾಗಿರುವುದು ತಾಲ್ಲೂಕು ಪಂಚಾಯ್ತಿ ಇ.ಓ. ಭಾಸ್ಕರ್ ನಾಯಕನೆಂಬ ಭ್ರಷ್ಟ. ಒಂದು ದಶಕ ಕಾಲ ಇಲ್ಲೇ ನೌಕರಿ ಮಾ[illegible] ಈತನಿಗೆ ಎಲ್ಲರ ನರ-ನಾಡಿಗಳು ಗೊತ್ತು, [illegible] ನಾಡಿ ಬದಿತಕ್ಕೆ ಏನೇನು ಔಷಧಿ ಬೇಕು ಅದೆಲ್ಲ[illegible] ಈತ ಕೊಡುತ್ತಾನೆ. ಹಿಂದೆ ಈತನನ್ನು ಟ್ರಾನ್ಸ್[illegible] ಮಾಡಿದರೆ ಖುದ್ದು ಶಾಸಕನೇ ಮತ್ತೇ ಕರೆಸಿಕೆ[illegible] ತಾಲ್ಲೂಕು ಪಂಚಾಯ್ತಿಗೆ ಬರುವ ಯಾವ ಯೋ[illegible] ಬಗ್ಗೆಯೂ ಈತ ಮಾಹಿತಿ ಕೊಡುವುದಿಲ್ಲ, ಎಲ್ಲ[illegible] ದಾಖಲೆಗಳಲ್ಲಿ ಮಾಡಿ ಶಾಸಕನಿಗೊಂದಿಷ್ಟು ಕೆ[illegible] ಉಳಿದಿದ್ದು ನುಂಗಿ ಬಿಡುತ್ತಾನೆ. ಸಂಜೆ ಆರಕ್ಕೆ ಹೊಸಪೇಟೆಯ ತನ್ನ ಮನೆಗೆ ಹೋಗಿಬಿಟ್ಟರೆ ಪೂರಾ ತಾಲ್ಲೂಕು ಪಂಚಾಯ್ತಿ ಇಸ್ಪೀಟ್ ಅಡ್ಡೆಯ[illegible]ತ್ತದೆ. ಶಾಸಕ ಕ್ಷೇತ್ರಕ್ಕೆ ಏನು ಮಾಡದಿ[illegible] ಹೋಯಿತು ತನ್ನ ಸ್ವಂತ ಊರು ಹಿಟ್ನಾ[illegible] ಮುಕ್ಕಾಲು ಪಾಲಿನ ಬಡವರಿಗೆ ಬಿ[illegible] ಕಾರ್ಡ್ ಸಹ ಕೊಟ್ಟಿಲ್ಲ ಬಾಯಿ ಬ[illegible] ಕೊಂಡರೂ ಕಿವಿಗೆ ಹಾಕಿಕೊಳ್ಳುತ್ತಿಲ್ಲ.

[illegible]

ಕೊಪ್ಪಳ ಕಾಂಗ್ರೆಸ್ ಹೀಗೆ ಹಗ್[illegible] ಜಗ್ಗಾಟದಲ್ಲಿರುವಾಗಲೇ ಡಿ. 27 ರ[illegible] ಎಐಸಿಸಿಯ ಕಾರ್ಯದರ್ಶಿ ಮ[illegible] ಕರ್ನಾಟಕದ ಉಸ್ತುವಾರಿ ನೋಡಿಕೊಳ್ಳು ತ್ತಿರು[illegible] ಕ್ಯಾಪ್ಟನ್ ಪ್ರವೀಣ ಧಾವರ್ ಕೊಪ್ಪಳಕ್ಕೆ ಬಂದಾ[illegible] ಅಲ್ಲಿಯೂ ಶಾಸಕನ ವಿರುದ್ಧ ದೂರುಗಳ ಸುರಿಮಳೆಯೇ ಆಗಿದೆ. ಮಾಜಿ ಎಂಎಲ್‌ಸಿ ಕರಿಯಣ್ಣ ಸಂಗಟಿಯು ಶಾಸಕ[illegible] ದರ್ಬಾರ್ ಬಗ್ಗೆ ದೂರು ಹೇಳುವಾಗ ಯಲಬುರ್ಗಾ ಶ[illegible] ಬಸವರಾಜ ರಾಯರೆಡ್ಡಿ ಅಡ್ಡ ಬಂದಾಗ ಸ್ವತಃ ಕ್ಯಾಪ್ಟನ್ ಪ್ರವ[illegible] ರಾಯರೆಡ್ಡಿಯನ್ನು ಹೊರಹೋಗುವಂತೆ ಮಾಡಿದ[illegible] ಕೊಪ್ಪಳ ಕಾಂಗ್ರೆಸ್ ವಿರುದ್ಧ ಬಸವರಾಜ ಹಿಟ್ನಾಳನನ್ನು ಎತ್ತಿಕಟ್ಟುವ ರಾಯರೆಡ್ಡಿ, ಈ ಜಿಂದಾಲ್ ವಿಮಾನ ನಿಲ್ದಾಣದ[illegible] ಮಾಜಿ ಮಂತ್ರಿಗೂ, ಶಾಸಕನಿ[illegible] ನಡೆದ ಜಟಾಪಟಿ ನಡುವೆ ಮೂಗು ತೂರಿಸಿ ಬೈಯಿಸಿಕೊಂಡಿದ್ದ ಮಹಾನು[illegible] ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕೊಪ್ಪಳಕ್ಕೆ ತನ್ನ ಸ್ವಜಾತಿ ಬಾಂಧವನಿಗೆ ಟಿಕೆಟ್ ಕೊಡಿಸಲೆಂದೇ ರಾಯರೆಡ್ಡಿ ಕೊಪ್ಪಳ ಕಾಂಗ್ರೆಸ್‌ಗೆ ಬೆಂಕಿ ಹಾಕ್ತಾನೆ ಎನ್ನುತ್ತಿದೆ ಆದೇ ಕಾಂಗ್ರೆಸ್.

ಇದಿಷ್ಟು ಬೆಳವಣಿಗೆ ನಡುವೆ ಚಳಿಯಲ್ಲೂ[illegible] ಆಗಿರುವ ಕಾಂಗ್ರೆಸ್ ದಿಕ್ಕು ಕಾಣದೇ ಕುಂತಿದೆ. ಒ[illegible] ಶಾಸಕನ ಸ್ವಹಿತಾಸಕ್ತಿ, ಇನ್ನೊಂದು ಕಡೆ ಪಕ್ಷ[illegible] ಹೋರಾಟ ಕುತೂಹಲ ಕೆರಳಿಸಿದೆ. ಒಟ್ಟನಲ್ಲಿ ಕ[illegible] ಕಾಂಗ್ರೆಸ್‌ಗೆ ಹೊಸ ವರ್ಷ ಅಷ್ಟೇನೂ ಶುಭವಾ[illegible] ಲಕ್ಷಣಗಳಿಲ್ಲ.

-ವರದಿ:

ಕೊಲೆಗಾರ ಬುಶ್

ಬರಿ ಅಜೆಂಡಾ ನೀಡಿ ಸುಮ್ಮನಿರಲಿಲ್ಲ, ಬದಲಾಗಿ ಇರಾಕಿಗೆ ಯಥೇಚ್ಛ ಶಸ್ತ್ರಾಸ್ತ್ರ ಸರಬರಾಜು ಮಾಡಿ ತನ್ನ ಯುದ್ಧ ಕೈಗಾರಿಕೆಗಳಿಗೆ ಭರ್ಜರಿ ಬ್ಯುಸಿನೆಸ್ ಕೊಡಿಸಿತ್ತು. ಮತ್ತೊಂದೆಡೆ ಬ್ರಿಟನ್ ಇರಾನ್-ಇರಾಕ್ ಇಬ್ಬರಿಗೂ ವೆಪನ್ಸ್ ಮಾರಿ ಡಬಲ್ ಪ್ರಾಫಿಟ್ ಗಳಿಸಿತ್ತು, ಇವರು ನೀಡಿದ್ದ ಅಸ್ತ್ರಗಳಲ್ಲಿ ರಾಸಾಯನಿಕ ಹಾಗೂ ಅಣು ವಿಕಿರಣಪೂರಿತವಾದವುಗಳೂ ಇದ್ದವು. ಆದರೆ ಈ ಯುದ್ಧದಲ್ಲಿ ಯಾರೂ ಗೆಲ್ಲಲಿಲ್ಲ, ಶಿಯಾ-ಸುನ್ನಿ ದ್ವೇಷ ಮಾತ್ರ ಬೆಳೆದಿತ್ತು, ಎಂಟು ವರ್ಷಗಳ ಗಲ್ಫ್ ಯುದ್ಧ ಮುಗಿಯುವವರೆಗೂ ಅಂದರೆ 1988 ರವರೆಗೂ ಸದ್ದಾಂ-ಅಮೆರಿಕಾ ಗೆಳೆತನ ಅಭಾದಿತ ವಾಗಿತ್ತು, ಅಮೆರಿಕದ ದೌರ್ಜನ್ಯ ತೈಲ ಲೂಟಿ ವಿರೋಧಿಸುತ್ತಿದ್ದ ಇರಾನ್ ಸೋಲಲೇಬೇಕೆಂಬುದು ಯಾಂಕಿಗಳ ಅಪೇಕ್ಷೆಯಾಗಿತ್ತು, ಅಮೆರಿಕಾಗೆ ಮುಖ ಭಂಗವಾದರೆ ಉಳಿದ ಅರಬ್ ದೇಶಗಳೂ ತನ್ನ ಹತೋಟಿ ಮೀರಿ ವರ್ತಿಸಬಹುದೆಂಬ ಅಮೆರಿಕಾದ ಆತಂಕವೇ ಇದಕ್ಕೆಲ್ಲಾ ಕಾರಣವಾಗಿತ್ತು,

ನಂತರ ಸದ್ದಾಂ 1990 ರಲ್ಲಿ ಏಕಾಏಕಿ ಕುವೈತ್ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡು ಬಿಟ್ಟ. ಅಮೆರಿಕಾಗೆ ಸದ್ದಾಂ ಬಗ್ಗೆ ಅಸಹನೆ ಮೂಡಿದ್ದೇ ಆಗ. ಏಕೆಂದರೆ ಕುವೈತ್ ವಶ ಎಂಬುದು ಅಮೆರಿಕಾ ಹಾಕಿಕೊಟ್ಟಿದ್ದ ಅಜೆಂಡಾ ಆಗಿರಲಿಲ್ಲ, ಸೌದಿ ಅರೇಬಿಯಾ ಕುವೈತ್ ದೇಶಗಳ ಖಾಸಗಿ ಮಾಲೀಕರಂತಿದ್ದ ಶೇಖ್‌ಗಳು ಆಗಲೇ ಅಮೆರಿಕಾದ ಗುಲಾಮರಾಗಿ ಹೋಗಿದ್ದರು... ಅಮೆರಿಕಾದ ಜೂಜುಕೋರರ ನಗರವಾದ ಲಾಸ್ ವೆಗಾಸ್‌ಗೆ ಹೋಗಿ ಕೋಟಿಗಟ್ಟಲೆ ರೂಪಾಯಿಗಳ ಜೂಜಾಡಿ ಕ್ಯಾಬರೆ ನೋಡುತ್ತಾ ಮಜವಾಗಿದ್ದ ಶೇಖ್‌ಗಳಿಂದ ಅಮೆರಿಕಾಗೆ ಯಾವ ತೊಂದರೆಗಳೂ ಇರಲಿಲ್ಲ, ಅಂಥವರ ಮೇಲೆ ಸದ್ದಾಂ ಸೈನ್ಯ ನುಗ್ಗಿಸಿದರೆ ಅಮೆರಿಕಾ ತಾನೆ ಹೇಗೆ ಸುಮ್ಮನಿದ್ದೀತು?

ಸರಿ ಗಲ್ಫ್ ಯುದ್ಧ ಶುರುವಾಗಿ ಸದ್ದಾಂ ಸೋತ. ಆದರೆ ಅಷ್ಟರಲ್ಲಿ ಅಮೆರಿಕಾಗೆ ಸದ್ದಾಂನ ಅಗತ್ಯ ತೀರಿಹೋಗಿತ್ತು, ಇರಾನ್ ಅನ್ನು ಬಗ್ಗಿಸಲು ಆಗಿರಲಿಲ್ಲ, ಜೊತೆಗೆ ಇರಾಕಿನಲ್ಲಿದ್ದ ಅಗಾಧ ತೈಲ ಸಂಪತ್ತಿನ ಮೇಲೂ ಅದರ ಕಣ್ಣುಬಿತ್ತು, ಅದೇ ವೇಳೆಗೆ ಅಮೆರಿಕಾ ಮೇಲೆ ಸಿಟ್ಟಿಗೆದ್ದಿದ್ದ ಸದ್ದಾಂ ರಷ್ಯಾ, ಚೀನಾ, ಫ್ರಾನ್ಸ್‌ಗಳ ಜೊತೆ ತೈಲ ವ್ಯಾಪಾರದ ಸಂಬಂಧ ಕುದುರಿಸಿಕೊಳ್ಳಲು ಆರಂಭಿಸಿದ್ದ. ಸದ್ದಾಂ ಉಳಿಯಕೂಡದು ಎಂದು ತೀರ್ಮಾನಿಸಲು ಅಮೆರಿಕಾಗೆ ಅಷ್ಟು ಸಾಕಿತ್ತು, ಇರಾಕ್‌ನಲ್ಲಿ ಅಮೆರಿಕಾ ಹೇಳಿದಂತೆ ಕುಣಿಯುವ ಕೈಗೊಂಬೆ ಸರ್ಕಾರ ಬೇಕಿತ್ತವರಿಗೆ. ಇರಾಕ್ ಹತ್ತಿರ ಸಾಮೂಹಿಕ ವಿನಾಶಕಾರಿ ಅಸ್ತ್ರಗಳಿವೆ, ಸದ್ದಾಂ ಯುದ್ಧಕೋರ, ದುಜೈಲ್‌ನಲ್ಲಿ 1982ರಲ್ಲಿ 148 ಶಿಯಾಗಳನ್ನು ಕೊಲ್ಲಿಸಿದ್ದ.. ಎಂದೆಲ್ಲಾ ಆರೋಪಗಳ ಹಿನ್ನೆಲೆ ಇದೇನೆ.



ನಜೀಬುಲ್ಲಾಗೆ ನೇಣು

ಈಗ 148 ಜನರನ್ನು ಕೊಲ್ಲಿಸಿದ್ದ ಸದ್ದಾಂಗೆ ನೇಣು ಶಿಕ್ಷೆಯಾಗಿದೆ. ಅದೇ ನೆಲೆಯಲ್ಲಿ ನೋಡಿದರೆ ಇರಾಕ್‌ಗೆ ಸೈನ್ಯ ನುಗ್ಗಿಸಿ ಇದುವರೆಗೂ 6 ಲಕ್ಷ ಮುಗ್ಧ ನಾಗರಿಕರ ಕೊಲೆ ಮಾಡಿಸಿರುವ ಬುಶ್‌ನನ್ನು ನಡುಬೀದಿಯಲ್ಲಿ ತುಂಡುತುಂಡಾಗಿ ಕತ್ತರಿಸಿ ನಾಯಿಗಳಿಗೆ ಎಸೆಯಬೇಕಲ್ಲವೆ?

ಲಾಡೆನ್ ಅಂದು ಮಿತ್ರ, ಇಂದು ವೈರಿ

ಇಸ್ಲಾಮಿಕ್ ಮೂಲಭೂತವಾದಿ ಉಗ್ರಗಾಮಿ ನಾಯಕ ಬಿನ್ ಲಾಡೆನ್ ಕೂಡ ಅಮೆರಿಕಾ ಸಾಕಿ ಬೆಳೆಸಿದ್ದವನೆ. ಅಫ್ಘಾನಿಸ್ತಾನದಲ್ಲಿ ಸಮಾಜವಾದಿ ಸರ್ಕಾರ ಶಿಕ್ಷಣ, ಭೂ ಸುಧಾರಣೆ ಸ್ತ್ರೀ ಸಮಾನತೆಯ ಕೆಲಸ ಶುರು ಮಾಡಿದೇಟಿಗೆ ಅಮೆರಿಕಾಗೆ ಅದು ಕಮ್ಯುನಿಸ್ಟರ ಸಂಚಿನಂತೆ ಕಂಡಿತ್ತು, ಮತ್ತೊಂದೆಡೆ ಲಾಡೆನ್-ಗುಲ್ಬುದ್ದೀನ್ ಹಿಕ್ಮ ತಿಯಾರ್ ತರಹ ಧಾರ್ಮಿಕ ಮೂಲ ಭೂತವಾದಿಗಳಿಗೆ ಅದು ಕಾಫಿರರ ಕೆಲಸ ಎನ್ನಿಸಿತು. ಸರಿ ಇವರಿಬ್ಬರ ಮೈತ್ರಿಕೂಟ ಅಂದೇ ರಚನೆಯಾಗಿ ಪುಟ್ಟ ಸಮಾಜವಾದಿ ಸಮಾಜದ ಮೇಲೆ ಮಿಲಿಟರಿ ದಾಳಿಗಳು ಆರಂಭವಾಗಿದ್ದವು. ಆಗ ರಷ್ಯಾ ಮಧ್ಯಪ್ರವೇಶ ಮಾಡಿದ್ದರಿಂದ ಇನ್ನಷ್ಟು ಉದ್ವಿಗ್ನತೆ ಉಂಟಾಗಿ ತಾಲಿಬಾನಿ ಗಳು ಅವತರಿಸಿದರು. ತೀವ್ರ ಸಾಮಾಜಿಕ ಬದಲಾವಣೆಗಳ ಪರ ಇರುವವರನ್ನೆಲ್ಲಾ ಕೊಂದು ಮುಗಿಸುವವರೆಗೂ ಅಮೆರಿಕಾ ಹಾಗೂ ಲಾಡೆನ್ ವಿರಮಿಸಿರಲಿಲ್ಲ, ಅವತ್ತಿನ ಅಫ್ಘಾನಿ ನಾಯಕ ನಜೀಬುಲ್ಲಾನನ್ನು ನಾಯಿಯಂತೆ ಎಳೆದೊಯ್ದು ರಸ್ತೆ ಪಕ್ಕದ ಕರೆಂಟು ಕಂಬಕ್ಕೇ ನೇಣು ಹಾಕಿ ಕೊಲ್ಲಲಾಗಿತ್ತು,

ಅಮೆರಿಕಾಗೆ ಇದೆಲ್ಲಾ ಖಂಡಿತಾ ಬೇಕಿತ್ತು, ಜೊತೆಗೆ ಅರಬ್ ಜಗತ್ತಿನಾದ್ಯಂತ ಅಮೆರಿಕಾದ ಗಾಂಚಲಿಗಳು ಮುಂದುವರೆಯುತ್ತಾ, ಅರಬ್ಬರ ವೈರಿ ಇಸ್ರೇಲ್‌ಗೆ ಅಮೆರಿಕಾದ ಅಖಂಡ ಬೆಂಬಲ ಸಿಗುತ್ತಾ ಹೋಯಿತೊ ಲಾಡೆನ್ ತಿರುಗಿ ಬಿದ್ದ. ಅಲ್ಲಿಯವರೆಗೂ ಸ್ವಾತಂತ್ರ್ಯ ಹೋರಾಟಗಾರ ಎಂದೇ ಅಮೆರಿಕಾದಿಂದ ಕೊಂಡಿದ್ದ ಲಾಡೆನ್ ರಾತ್ರೋರಾತ್ರಿ ಟೆರರಿಸ್ಟ್ ಅಮೆರಿಕಾದಿಂದಲೇ ಬಿಂಬಿಸಲ್ಪಟ್ಟ. ಅಮೆರಿಕಾದ ಕೆಲಸಗಳನ್ನೆಲ್ಲಾ ಅರ್ಥ ಮಾಡಿಕೊಂಡ ಲಾಡೆನ್ ಅ[illegible] ಕೊಟ್ಟ ಹೊಡೆತಗಳು ಅಮೆರಿಕಾ ಪಾಲಿಗೆ ಆಘಾತಕವಾಗಿದ್ದವು. ಮುಂದೆಂದಾದರೂ ಲಾಡೆನ್[illegible] ಸಿಕ್ಕರೆ ಅವನಿಗೂ ಸದ್ದಾಂಗೆ ಆದ ಗತಿಯೇ ಸಿ[illegible] ಬುಶ್ ತರದ ಅಸಲಿ ಭಯೋತ್ಪಾದಕರು ಈ ಜ[illegible] 'ನ್ಯಾಯ' ಪಾಲಕರಂತೆ ಪೋಜು ಕೊಡುತ್ತಲೇ ಇ[illegible]

ಇದರ ಸಾರಾಂಶ ಇಷ್ಟೆ. ಜಗತ್ತಿನ ಯಾವ ದ[illegible]ಯಲ್ಲೇ ಆಗಲಿ ಸಾಮಾಜಿಕ ನ್ಯಾಯ, ಸಮ[illegible] ಪ್ರಗತಿಯತ್ತ ಸಮಾಜವೊಂದರ ಕ್ರಾಂತಿಕಾರಿ ಬ[illegible]ವಣೆಯ ಚಲನೆ ಆರಂಭವಾಗಿಬಿಟ್ಟರೆ ಅವ[illegible]ವ್ಯವಸ್ಥೆಗೆ ಚಟಪಟಿಕೆ ಶುರುವಾಗಿ ಬಿಡುತ್ತದೆ. ಅಮೆ[illegible] ಬಹುರಾಷ್ಟ್ರೀಯ ಕಂಪನಿಗಳು, ಅಮೆರಿಕಾದ ವ್ಯವ[illegible] ವ್ಯಾಪಾರ, ಅಮೆರಿಕಾದ ಸಂಪತ್ತು, ಅಮೆರಿಕಾದ [illegible] ಇವೆಲ್ಲವೂ ಹೀಗೆ ಮುಂದುವರೆದುಕೊಂಡು [illegible] ಬೇಕೆಂದರೆ ಅಮೆರಿಕಾ ವಿರುದ್ಧ ಯಾರು [illegible] ಎತ್ತಬಾರದೆಂಬುದೇ ಇವತ್ತಿನ ಅಘೋಷಿತ ನಿ[illegible]

ಇರಾಕಿನ ಅಧ್ಯಕ್ಷರಾಗಿದ್ದ ಸದ್ದಾಂ ಹುಸೇನ್[illegible] ರುದ್ರನಾಟಕದಲ್ಲಿ ಬಂದು ಹೋಗಿರುವ ಒಂದು [illegible] ಮಾತ್ರ. ಅಮೆರಿಕಾ ಎಂಬ ಕೇಡಿಯನ್ನು ಎಲ್ಲಾ[illegible] ಆಯಾಮಗಳಲ್ಲೂ ವಿರೋಧಿಸುತ್ತಾ ಹೋಗುವುದ[illegible] ಈಗ ಎಲ್ಲರಿಗೂ ಉಳಿದಿರುವ ಏಕೈಕ ದಾರಿ.

ಸದ್ದಾಂ ಕೊಲೆ ಇದನ್ನು ಮತ್ತೊಮ್ಮೆ ಸಾ[illegible] ಪಡಿಸಿದೆ.

ದಲಿತರ ಭೂಮಿ:

ಕೋರ್ಟ್ ಸೈ ಅಂದರೂ ವ್ಯವಸ್ಥೆಯ ನಕಾರ

ನ್ಯಾಯಾಲಯಗಳಿಂದ ದಲಿತರಿಗೆ ...ಯ ಸಿಗುವುದೇ ಅಪರೂಪ. ಪ್ರವೀಣ್ ...ಮಾರ್ ಜೈನ್ ಎಂಬ ಮಾರ್ವಾಡಿ ...ದ ತನ್ನ ಪಾಲಿನ ನಾಲ್ಕು ಎಕರೆ ಅಡಿಕೆ ...ಟವನ್ನು ಕೋರ್ಟ್‌ಗೆ ಹೋಗಿ ...ದುಕೊಂಡ ದಲಿತ ಜಯಪ್ಪನಿಗೆ ತನ್ನ ...ರಲ್ಲಿ ಕಾಗದ ಪತ್ರವೇನೋ ಬಂದವು. ...ದರೆ ಜೈನ್ ಗೂಂಡಾಗಳನ್ನು ಕಳುಹಿಸಿ ...ಟವನ್ನೇ ನಾಶ ಮಾಡುವ ಮೂಲಕ ...ನೂನನ್ನೆಲ್ಲ ಗಾಳಿಗೆ ತೂರಿದ್ದಾನೆ. ...ಲ್ಲಾತಿಗಳು ಏನು ಮಾಡಿದರೂ ನಡೆ ...ತ್ತೆ ಎನ್ನುವುದಕ್ಕೆ ಇನ್ನೂ ಜೈನ್‌ನನ್ನು ...ಧಿಸದಿರುವುದೇ ಸಾಕ್ಷಿ.

"ಕಾನೂನು ಒಂದು ಕತ್ತೆ ಇದ್ದಂತೆ"- ...ಷವರು ಅದರ ಹಿಂದೆ ಹೋಗಿ ...ದೆಸಿಕೊಳ್ಳುತ್ತಾರೆ. ಹಣವಂತರು ಅದರ ...ಲೆ ಸವಾರಿ ಮಾಡುತ್ತಾರೆ ಎನ್ನುವ ...ತು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ...ದಿರುವ ಅಮಾನವೀಯ ಘಟನೆಗೆ ಸಾಕ್ಷಿಯಂತಿದೆ. ...ನ ಶ್ರೀಮಂತ ಮಾರ್ವಾಡಿಯೊಬ್ಬನ ಋಣವನ್ನು ...ರಿಸುವುದಕ್ಕಾಗಿ ಪೊಲೀಸರು, ...ದಾಯ ಇಲಾಖೆ ಮತ್ತು ರಾಜಕಾರಣಿ ...ಳು ಕುತಂತ್ರಗಳನ್ನು ನಡೆಸಿ, ದಲಿತ ...ಬ್ಬನಿಗೆ ನ್ಯಾಯವಾಗಿ ದಕ್ಕಿದ್ದ ನಾಲ್ಕು ...ರೆ ತೋಟದಲ್ಲಿ 12 ವರ್ಷಗಳ ಕಾಲ ಬೆಳೆದು ...ತ ಫಲ ಕೊಡುತ್ತಿದ್ದ ಒಟ್ಟು 2100 ಅಡಿಕೆ ಗಿಡಗಳನ್ನು ...ರಿಸಿ ಹಾಕಲು ಸಹಕರಿಸಿದ್ದಾರೆ! ಮತ್ತೆ ಜಮೀನು ...ಡಿಸಿಕೊಳ್ಳಬೇಕೆನ್ನುವ ದಲಿತರಿಗೆ ...ದರಿಕೆ ಮೇಸೆಜು ನೀಡಿದ್ದಾರೆ. ...ದರ ಬಗ್ಗೆ ಮಾಧ್ಯಮಗಳಲ್ಲಿ ಸುದ್ದಿ ...ಗಲಿಲ್ಲ, ಪೊಲೀಸ್ ಠಾಣೆಯಲ್ಲಿ ...ರು ದಾಖಲಾಗಲಿಲ್ಲ. ಏಕೆಂದರೆ ...ನೂನೆಂಬ ಕತ್ತೆಯ ಮೇಲೆ ...ವೀಣ್‌ಕುಮಾರ್ ಜೈನ್ ಸವಾರಿ ...ಡುತ್ತಿದ್ದಾನೆ.

...ಈಗ್ಗೆ ಹದಿನೈದು ವರ್ಷಗಳ ...ಗೆ ಚನ್ನಗಿರಿಯ ಮಾರ್ವಾಡಿ ... ಜೆಡಿಎಸ್ ಮುಖಂಡ ...ವೀಣ್‌ಕುಮಾರ್ ಜೈನ್ ...ಸ್ಥವವಸು ರಾಮಪ್ಪ ಗಾಳಿಹಳ್ಳಿ ... ದಲಿತನಿಂದ ...ಗಿರಿ-ಶಿವಮೊಗ್ಗ ರಸ್ತೆಯಲ್ಲಿ ... ದೊಂದರಘಟ್ಟ ಸ.ನಂ. 73/3 ರಲ್ಲಿನ ನಾಲ್ಕು ಎಕರೆ ಜಮೀನನ್ನು ಪಿಟಿಸಿಎಲ್ (Prohibition of Termination of Condition Land) ಕಾಯ್ದೆಗೆ ವಿರುದ್ಧವಾಗಿ ಕೊಂಡು ಕೊಂಡಿದ್ದ. ನಾಲ್ಕೈದು ವರ್ಷಗಳ ಕೆಳಗೆ ರಾಮಪ್ಪನ ಮಗ ಜಯಪ್ಪ ಈ ಅಕ್ರಮವನ್ನು ಪ್ರಶ್ನಿಸಿ ಕೋರ್ಟಿನ ಮೆಟ್ಟಲೇರಿದ. ಜಿಲ್ಲಾ ದಂಡಾಧಿಕಾರಿಗಳ ನ್ಯಾಯಾಲಯವು ಪ್ರವೀಣ್ ಕುಮಾರ್ ಜೈನ್‌ನ 'ಜಮೀನು ಖರೀದಿ ಅಕ್ರಮ'ವೆಂದು ಘೋಷಿಸಿ ಆರು ತಿಂಗಳ ಕೆಳಗೆ ತೀರ್ಪನ್ನು ನೀಡಿದೆ. ಮೂರು ತಿಂಗಳ ಹಿಂದೆ ಪ್ರವೀಣ್‌ಕುಮಾರ್ ಜೈನ್‌ನ ಹೆಸರಿನಲ್ಲಿದ್ದ ಭೂ ದಾಖಲೆಗಳು ಜಯಪ್ಪನ ಹೆಸರಿಗೆ ಬದಲಾಗಿದೆ.

ದಾವಣಗೆರೆ



ಮಾರ್ವಾಡಿಯ ಟೆಕ್ಸ್‌ಟೈಲ್ಸ್ ಶೋರೂಂ


ಅಡಕೆ ತೋಟವನ್ನು ನಾಶ ಮಾಡಿರುವುದು

ಕೋರ್ಟಿನ ತೀರ್ಪು ಜಯಪ್ಪನ ಪರ ಬಂದ ತಕ್ಷಣ ಪ್ರವೀಣ್‌ಕುಮಾರ್ ಜೈನ್ ಜಾಗೃತನಾಗಿದ್ದಾನೆ. ಚನ್ನಗಿರಿ ಕ್ಷೇತ್ರದ ಶಾಸಕ ಮಹಿಮಾ ಪಾಟೀಲ್ ಮತ್ತಿತರೆ ಮಧ್ಯವರ್ತಿಗಳೊಂದಿಗೆ ಜಯಪ್ಪನನ್ನು ಸೇರಿಸಿಕೊಂಡು ಸೂಳೆಕೆರೆ ಹಾಗೂ ಚನ್ನಗಿರಿ ಪ್ರವಾಸಿ ಮಂದಿರಗಳಲ್ಲಿ ರಾಜಿ ಪಂಚಾಯ್ತಿಗಳ ಸರ್ಕಸ್ ನಡೆಸಿದ್ದಾನೆ. ರಾಜಿ ಪಂಚಾಯ್ತಿಯಲ್ಲಿ ತೀರ್ಮಾನವಾದ 1.90 ಲಕ್ಷ ರೂ.ಗಳನ್ನು ಪಡೆದುಕೊಂಡು ಜಮೀನಿನ ತಂಟೆಗೆ ಬರದಂತೆ ಜಯಪ್ಪನಿಂದ ಅನಧಿಕೃತ ಒಪ್ಪಂದವನ್ನು ಮಾಡಿಸಿಕೊಂಡಿದ್ದಾನೆ. 1.90 ಲಕ್ಷ ರೂ.ಗಳಲ್ಲಿ 50 ಸಾವಿರ ರೂ.ಗಳನ್ನು ಮುಂಗಡವಾಗಿ ಮಧ್ಯವರ್ತಿಗಳಿಗೆ ಕೊಟ್ಟು ಜಯಪ್ಪನನ್ನು ಸುಮ್ಮನಿರಿಸುವಂತೆ, ಜಯಪ್ಪನಿಂದ ತನ್ನ ಹೆಸರಿಗೆ ಜಮೀನನ್ನು ಪುನಃ ಬರೆಸಿಕೊಡುವಂತೆ

ಚಂದ್ರಶೇಖರ ತೋರಣಘಟ್ಟ

ಪ್ರವೀಣ್‌ಕುಮಾರ್ ಜೈನ್ ತಾಕೀತು ಮಾಡಿದ್ದಾನೆ. ಆದರೆ ಜಯಪ್ಪ ರಾಜಿಪಂಚಾಯ್ತಿ ಎಂಬ ಚಕ್ರವ್ಯೂಹದಿಂದ ಹೊರಬಂದ ತಕ್ಷಣ ಅಗ್ರಿಮೆಂಟನ್ನು ತಿರಸ್ಕರಿಸಿದ್ದಾನೆ. ಈ ಅನಧಿಕೃತವಾದ ಅಗ್ರಿಮೆಂಟಿಗೆ ಕಾನೂನಿನಲ್ಲಿಯೂ ಅವಕಾಶಗಳಿಲ್ಲದೆ ಹೋದದ್ದರಿಂದ ಮಧ್ಯವರ್ತಿಗಳು ಕೈ ಚೆಲ್ಲಿದ್ದಾರೆ. ಹೀಗೆ ರಾಜಿ ಪಂಚಾಯ್ತಿಯ ಅಗ್ರಿಮೆಂಟು ವಿಫಲಗೊಂಡಿದೆ. ಆಗಲೇ ಪ್ರವೀಣ್ ಕುಮಾರನ ಅಸಲಿ ಹಕೀಕತ್ತು ಅನಾವರಣಗೊಂಡದ್ದು!

ಜಮೀನು ತನ್ನ ಕೈಬಿಟ್ಟು ಹೋಗುತ್ತದೆಂದು ಮನವರಿಕೆ ಮಾಡಿಕೊಂಡ ಪ್ರವೀಣಕುಮಾರ್ ಇಡೀ ತೋಟವನ್ನು ಕತ್ತರಿಸಿ ಹಾಕುವುದಾಗಿ ಕಾರಿಕೊಳ್ಳುತ್ತಿದ್ದ. ಪೊಲೀಸರಿಗೆ ಮತ್ತು ರೆವಿನ್ಯೂ ಇಲಾಖೆಯವರಿಗೆ ಈ ಬಗ್ಗೆ ಸ್ಪಷ್ಟವಾದ ಮುನ್ಸೂಚನೆ ಇತ್ತು. ಸೆಪ್ಟೆಂಬರ್ 27 ರಂದು ಆರ್.ಐ. ಮಲ್ಲೇಶಪ್ಪ, ವಿ.ಎ. ರಮೇಶ್. ಈ ತೋಟವನ್ನು ಜಯಪ್ಪನ ಸ್ವಾಧೀನಕ್ಕೆ ಬಿಡಿಸಿಕೊಟ್ಟರು. ಆದರೆ ಪ್ರವೀಣ್‌ಕುಮಾರ್ ಲೇಟು ಮಾಡಲಿಲ್ಲ. ಅಂದು ಸಂಜೆಯ ಹೊತ್ತಿಗೆ ಲಾರಿಗಳಲ್ಲಿ ಜನರನ್ನು ತಂದು ಒಬ್ಬೊಬ್ಬರಿಗೆ 200 ರೂ.ನಂತೆ ಕೂಲಿಯನ್ನು ಕೊಟ್ಟು ಕೇವಲ ಎರಡೇ ಗಂಟೆಯಲ್ಲಿ ಅರ್ಧದಷ್ಟು ಅಡಿಕೆ ಗಿಡಗಳನ್ನು ಕಡಿಸಿ ಹಾಕಿದ! ಜಯಪ್ಪ ಅಂದೇ ಪೊಲೀಸರಿಗೆ ದೂರವಾಣಿಯ ಮೂಲಕ ಈ ವಿಷಯವನ್ನು ತಿಳಿಸಿದರೂ ಪ್ರಯೋಜನವಾಗಲಿಲ್ಲ. ಸೆ. 28 ರಂದು ಜಯಪ್ಪ ಉಳಿದ ಅಡಕೆ ಗಿಡಗಳನ್ನಾದರೂ ಉಳಿಸಿಕೊಡುವಂತೆ ಬೇಡಿಕೊಂಡಾಗ ಸಿಬ್ಬಂದಿಯೇ ಇಲ್ಲವೆಂದ ಪೊಲೀಸ್ ಇಲಾಖೆಯವರು ಜಯಪ್ಪನೇ ಬಾಡಿಗೆ ಮಾತನಾಡಿದ್ದ ಆಟೋದಲ್ಲಿ ಒಬ್ಬನೇ ಒಬ್ಬ ಪೊಲೀಸನನ್ನು ಕಳಿಸಿದ್ದಾರೆ. ತೋಟದ ಹತ್ತಿರ ಬಂದು ಪ್ರವೀಣಕುಮಾರನ ಕಡೆಯವರನ್ನು ನೋಡಿದ್ದೇ ಹೆದರಿಕೊಂಡು ಯಾರೂ ಆಟೋದಿಂದ ಇಳಿಯದಂತೆ ತಡೆದ ಪೊಲೀಸಪ್ಪ ವಾಪಸ್ಸು ಕರೆದುಕೊಂಡು ಬಂದಿದ್ದಾನೆ.

ನಂತರದಲ್ಲಿ ನಡೆದದ್ದೇನೆಂದರೆ, ಪ್ರವೀಣಕುಮಾರನ ಕಡೆಯವರು ಉಳಿದ ಎಲ್ಲ ಅಡಕೆ ಗಿಡಗಳು ಸೇರಿದಂತೆ ಇತರೆ ಮರಗಳನ್ನು ಮತ್ತು ತೋಟದಲ್ಲಿದ್ದ ಒಂದು ವಾಸದ ಮನೆ, ಬೋರ್‌ವೆಲ್‌ಗಳನ್ನೆಲ್ಲ ನಾಶಗೊಳಿಸಿ ವಿಜಯೋತ್ಸಾಹದಿಂದ ಹಿಂತಿರುಗಿದ್ದಾರೆ. ವಾಸ್ತವದ ವ್ಯಂಗ್ಯವೇನೆಂದರೆ ಸೆ. 28 ರಂದು ಚನ್ನಗಿರಿಯಲ್ಲಿ ಇಡೀ ಪೊಲೀಸ್ ಯಂತ್ರಾಂಗವೇ ಸೇರಿ 'ಕ್ರೈಂ ಮೀಟಿಂಗ್' ನಡೆಸುತ್ತಿತ್ತು! ಒಂದು ವೇಳೆ ಸಾಮಾನ್ಯನೊಬ್ಬ ಶ್ರೀಮಂತನ ತೋಟವನ್ನು ಕಡಿಯಲು ಪ್ರಯತ್ನಿಸಿದ್ದರೆ? ಅವನನ್ನು ಹೆಡಮುರಿಗೆ ಕಟ್ಟಿ ತಂದು ಪೊಲೀಸರು ಟ್ರೀಟ್ ಮಾಡುತ್ತಿದ್ದರು. ಆದರೆ ಶ್ರೀಮಂತ ಮಾರ್ವಾಡಿಯೊಬ್ಬನ ಕ್ರೈಮನ್ನು ತಡೆಯಲು ಚನ್ನಗಿರಿ ಪೊಲೀಸ್ ಇಲಾಖೆಗೆ ಸಿಬ್ಬಂದಿಯೇ ಇರಲಿಲ್ಲ! ಕಟುವಾಸ್ತವವೇನೆಂದರೆ ಪ್ರವೀಣ ಕುಮಾರ್ ಜೈನನ ಅಪರಾಧವನ್ನು ತಡೆಗಟ್ಟಿದರೆ ಪೊಲೀಸ್ ಇಲಾಖೆಗೆ ಅವನ ಋಣವನ್ನು ತೀರಿಸಿದಂತಾಗುತ್ತಿರಲಿಲ್ಲ.

ನಿರಂತರ ಕೊಲೆ ಬೆದರಿಕೆಗಳಿಂದಾಗಿ ಜಯಪ್ಪ ಈಗ ಮನೆಗೆ ಬೀಗ ಜಡಿದು ಸಂಸಾರ ಸಮೇತವಾಗಿ ಓಡಿ ಹೋಗಿದ್ದಾನೆ. ಎಲ್ಲಿದ್ದಾನೆನ್ನುವುದು ದಲಿತ ಕೇರಿಯವರಿಗೂ ಗೊತ್ತಿಲ್ಲ. ಕೇವಲ ಜಯಪ್ಪನಷ್ಟೇ ಅಲ್ಲ, ಪಿಟಿಸಿಎಲ್ ಕೇಸು ಹಾಕಿಕೊಂಡಿರುವ ಎಲ್ಲಾ ದಲಿತರಿಗೂ ಈ ಘಟನೆಯಿಂದ ನಡುಕ ಶುರುವಾಗಿದೆ.

ಆದರೆ ದಲಿತರ ಭೂಮಿಗಳನ್ನೇ ಚಿಲ್ಲರೆ ಕಾಸಿಗೆ ಕೊಂಡು ಈಗ ತೋಟಗಳನ್ನು ಮಾಡಿಕೊಂಡಿರುವ ಪ್ರವೀಣ್‌ಕುಮಾರ್ ಜೈನ್, ಶಾಂತರಾಜ, ಸಂಗಮೇಶ, ದೇವರಾಜ, ಆರ್.ಆರ್. ನಾಗರಾಜ [illegible] ಕೇಕೆ ಹಾಕಿ ನಗುತ್ತಿದ್ದಾರೆ! ಕೇಸುಗಳಲ್ಲಿ ಸೋತ ನಂತರ ಭೂಮಿಯನ್ನು ದಲಿತರಿಗೆ ಬಿಟ್ಟು ಕೊಡಬೇಕಾದ ಅನಿವಾರ್ಯತೆಯಿಂದಾಗಿ ಪ್ರವೀಣ್‌ಕುಮಾರ್ ಜೈನ್‌ನಂತೆಯೇ ಅಡಕೆ ತೋಟಗಳನ್ನು ಕಡಿಸಿ ಹಾಕಲು ಸಜ್ಜಾಗುತ್ತಿದ್ದಾರೆ. ದಲಿತ ಸಂಘಗಳು ಇನ್ನೂ ಜೀವಂತವಾಗಿದ್ದರೆ, ತಮ್ಮ ಒಳಗಿನ ಭಿನ್ನತೆಗಳನ್ನು ಬದಿಗಿಟ್ಟು ಭೂಮಿಯನ್ನು ಕಳೆದುಕೊಂಡಿರುವ ದಲಿತರನ್ನು ರಕ್ಷಿಸಬೇಕಲ್ಲವೇ? ■

ಮಸಲತ್ತಿನ ಮಾರ್ವಾಡಿ!

ಇವನು ಸಾಮಾನ್ಯ ಕುಳವೇನಲ್ಲ, ಅಪ್ಸರ ಟೆಕ್ಸ್‌ಟೈಲ್ಸ್ ಅಪ್ಸರ ಸ್ಯಾರೀಸ್ ಎಂಬ ಎರಡು ದೊಡ್ಡ ಜವಳಿ ಅಂಗಡಿಗಳ ಮಾಲೀಕ. ಸಾಲದ್ದಕ್ಕೆ ಜೆಡಿಎಸ್ ಪಕ್ಷದ ಮುಖಂಡ. ಈ ಹಿಂದಿನ ಜೆ.ಎಚ್. ಪಟೇಲರಿಗೂ ಈ ಪ್ರವೀಣ್‌ಕುಮಾರ್ ಜೈನ್‌ನ ಮನೆಯೇ ಗೆಸ್ಟ್‌ಹೌಸು! ಇಷ್ಟೆಲ್ಲ ಆರ್ಥಿಕ, ರಾಜಕೀಯ ಬಲವಿದ್ದಾಗ ಸಾಮಾನ್ಯರನ್ನು ಕಾಲಕಸದಂತೆ ತುಳಿಯದೆ ಇನ್ನೇನು ಮಾಡುತ್ತಾನೆ? ಇವನಿಗಿರುವ ಒಟ್ಟು ತೋಟವೆಷ್ಟು ಗೊತ್ತೆ? ಎಂಬತ್ತು ಎಕರೆ! ಈ ಸಂಪೂರ್ಣ ಭೂಮಿಯನ್ನು ದಲಿತರಿಂದಲೇ ಕಬಳಿಸಿದ್ದಾನೆನ್ನಲಾಗುತ್ತಿದೆ. ಅಹಿಂಸಾವಾದಿ ಎಂದು ಹೇಳಿಕೊಳ್ಳುವ ಇವನಿಗೆ ಸಹಸ್ರ, ಸಹಸ್ರ ಅಡಕೆ ಗಿಡಗಳನ್ನು ಕಡಿಸಿರುವುದು ಹಿಂಸೆ ಎನಿಸುವುದಿಲ್ಲ.



ಆರು ತಿಂಗಳ ಹಿಂದೆಯೇ ಈ ತೋಟದ ಬಗೆಗಿನ ಕೋರ್ಟಿನ ತೀರ್ಪು ಶಾಸಕ ಮಹಿಮಾಗೆ ಗೊತ್ತಿತ್ತು. ಜಯಪ್ಪನ ತಲೆ ಸವರುವ ಪಂಚಾಯ್ತಿಗಳಲ್ಲಿ ಮಾತ್ರ ಈತ ಭಾಗವಹಿಸಿದನೇ ವಿನಃ ಪ್ರವೀಣ್‌ಕುಮಾರ್ ಜೈನನಿಗೆ ಕಾನೂನನ್ನು ಉಲ್ಲಂಘಿಸಬೇಡವೆಂದು ಹೇಳಲಿಲ್ಲ, ಪೊಲೀಸ್ ಹಾಗೂ ರೆವಿನ್ಯೂ ಇಲಾಖೆಗೂ ಕಾನೂನಿನ ಪ್ರಕಾರ ವರ್ತಿಸಬೇಕು ಎಂದು ನಿರ್ದೇಶಿಸಲಿಲ್ಲ, ಹೀಗಾಗಿಯೇ ಭೂಕಬಳಿಕೆದಾರರಿಗೆ, ಪೊಲೀಸ್, ರೆವಿನ್ಯೂ ಇಲಾಖೆಗೆ ಎಂಟಾನೆಯ ಬಲ ಬಂದದ್ದು! ಕೂಡಲ ಸಂಗಮಕ್ಕೆ ಹೋಗಿ 'ತಲೆಶುದ್ಧಿ' ಮಾಡಿಕೊಳ್ಳುವ ಬದಲು ತಮ್ಮ ತಾಲ್ಲೂಕಿನಲ್ಲಿಯೇ ಇರುವ ಇಂತಹ ಸಹಸ್ರಾರು ಸಮಸ್ಯೆಗಳನ್ನು ನ್ಯಾಯಯುತವಾಗಿ ಬಗೆಹರಿಸಿದರೆ ಮಹಿಮಾಗೆ ನೈಸರ್ಗಿಕವಾದ ಸದ್ಬುದ್ಧಿ ಬರಬಹುದೇನೋ? ಇಷ್ಟೆಲ್ಲಾ ನಡೆದರೂ ನೊಂದವರ ಪರವಾಗಿ ನಿಂತು ತಪ್ಪಿತಸ್ಥರಿಗೆ ಪಾಠ ಕಲಿಸದೇ ಇದ್ದರೆ ಮುಂದಿನ ದಿನಗಳಲ್ಲಿ ಮಹಿಮಾ ಜನಸಾಮಾನ್ಯರು ನೀಡುವ ತೀರ್ಪಿನಿಂದಲೇ 'ತಲೆಶುದ್ಧಿ' ಮಾಡಿಕೊಳ್ಳಬೇಕಾಗಬಹುದು! ಜಾತ್ಯತೀತ ಮನಸ್ಥಿತಿ ಇದ್ದರೆ ವಿರೋಧ ಪಕ್ಷದ ವಡ್ನಾಳ್ ರಾಜಣ್ಣನಾದರೂ ಈ ವಿಷಯವನ್ನು ಕೈಗೆತ್ತಿಕೊಂಡು ದಲಿತರ ಪರರಾಗಿ ನಿಲ್ಲಬಹುದಲ್ಲವೆ?

ಪ್ರವೀಣ್‌ಕುಮಾರ್ + ರೆವಿನ್ಯೂ ಇಲಾಖೆ + ಪೊಲೀಸ್ ಇಲಾಖೆ = ಭಾಯಿಭಾಯಿ!

...ಷ್ಟು: ಚನ್ನಗಿರಿ ತಾಲ್ಲೂಕಿನಲ್ಲಿರುವಷ್ಟು ಫಲವತ್ತಾದ ಭೂಮಿ ಪಿಟಿಸಿಎಲ್ ಕೇಸುಗಳು ಬೇರಾವ ...ಲ್ಲೂಕಿನಲ್ಲಿಯೂ ಇಲ್ಲವೇನೋ? ಇಂತಹ ಕೇಸುಗಳಲ್ಲಿ ಅನಿವಾರ್ಯವಾಗಿ ದಲಿತರ ಪರವಾಗಿ ತೀರ್ಪು ...ದರೂ ರೆವಿನ್ಯೂ ಇಲಾಖೆ ನಂತರದ ನಡಾವಳಿಯ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳುವುದಿಲ್ಲ, ಯಾವುದೇ ...ಖಲೆಗಳನ್ನು ತೆಗೆದುಕೊಳ್ಳಬೇಕಾದರೆ ತಿಂಗಳುಗಟ್ಟಲೇ ಅಲೆಯಬೇಕಾಗುತ್ತದೆ. ಪ್ರಾಯಶಃ ನಿವೃತ್ತಿಯ ಹೊಸ್ತಿಲಲ್ಲಿ ...ತು ಅರಗಿಸಿಕೊಳ್ಳಲಾಗದಷ್ಟು ಮುಕ್ಕುತ್ತಿರುವ ತಹಶೀಲ್ದಾರ್ ಸಜ್ಜನ ಶೆಟ್ಟರ್ ನಿರ್ದೇಶನಗಳನ್ನು ಕೈ ಕೆಳಗಿನವರು ...ಲಿಸುವುದಿಲ್ಲವೇನೋ?

...ಕೊಟ್ಟ ದೂರಿಗೆ ಎಫ್.ಐ.ಆರ್. ಕೊಡದ ಕುಖ್ಯಾತಿಯನ್ನು ಚನ್ನಗಿರಿ ಪೊಲೀಸ್ ಠಾಣೆ ಪಡೆದುಕೊಂಡಿದೆ. ...ಗಾಗಿಯೇ "ಜಯಪ್ಪನ ತೋಟ ನಾಶವಾದ ವಿಷಯದ ಬಗ್ಗೆ ಇನ್ನೂ ದೂರು ಬಂದಿಲ್ಲ" ಎಂದು ಹೇಳುತ್ತಿದ್ದಾರೆ. ...ದರೆ ಸೆ. 28 ರಂದು ಪೊಲೀಸೊಬ್ಬನನ್ನು ಜಯಪ್ಪನ ತೋಟಕ್ಕೆ ರಕ್ಷಣೆಗಾಗಿ ಕಳಿಸಿದ್ದು ಅಶರೀರವಾಣಿಯಿಂದಲೋ? ...ವಾ ಜಯಪ್ಪನ ದೂರಿನಿಂದಲೋ? ಸಿಪಿಐ ಮದನ್‌ಗಾಂವ್‌ಕರ್, ಪಿಎಸ್‌ಐ ಸತೀಶ್ ಇದಕ್ಕೆ ಉತ್ತರ ...ಬೇಕಾಗುತ್ತದೆ. ಜಿಲ್ಲಾಧಿಕಾರಿ ಹಾಗೂ ವಿಭಾಗಾಧಿಕಾರಿಗಳ ಹಾಗೂ ತಹಶೀಲ್ದಾರರ ನೇರ ಆದೇಶಗಳನ್ನು ... ಪಾಲಿಸದೆ ಇಲ್ಲಸಲ್ಲದ ನೆಪಗಳನ್ನೊಡ್ಡಿ ಯಾರ ಹಿತ ಕಾಯುತ್ತಿದ್ದಾರೆನ್ನುವುದನ್ನು ಚನ್ನಗಿರಿ ತಾಲ್ಲೂಕಿನ ...ಗಳು ಹೇಳುತ್ತವೆ. ಈ ಮಧ್ಯೆ 8.10.2006 ರಂದು ತಾಲ್ಲೂಕಿನ ಲಕ್ಷ್ಮೀಶ ನಗರದಲ್ಲೇ ದಲಿತರ ... [illegible] ಸಾಮೂಹಿಕವಾಗಿ ಮೂರು ಬಾರಿ ದಾಳಿ ಮಾಡಿ ದಲಿತರನ್ನು ಹೊಡೆದಿದ್ದಾರೆ. ದಸಂಸ ... [illegible] ಇದನ್ನು ಪೊಲೀಸ್ ಗಮನಕ್ಕೆ ತಂದಿದ್ದರೂ ಕ್ರಮ ಕೈಗೊಳ್ಳದ ...ಸರು ಬಲಿಷ್ಠರ ಹಿತವನ್ನು ಕಾಯುತ್ತಿದ್ದಾರೆ.

ಲಂಕೇಶ್

ರಾಮನು ಸೀತೆಯ ಬಗ್ಗೆ ರಾಮಾಯಣದುದ್ದಕ್ಕೂ ನಮಗೆ ಆಶ್ಚರ್ಯವಾಗುವ ರೀತಿಯಲ್ಲಿ ಉಪೇಕ್ಷೆ ತೋರುತ್ತಾನೆ. ಅವನು ಭರತನಿಗೆ ರಾಜ್ಯವೇಕೆ, ಸೀತೆಯನ್ನೇ ಕೊಡುತ್ತಿದ್ದೆನೆನ್ನುತ್ತಾನೆ. ತದನಂತರ ಲಕ್ಷ್ಮಣನು ಯುದ್ಧದಲ್ಲಿ ಮೂರ್ಛಿತನಾದಾಗ ರಾಮನ ಪ್ರಲಾಪ ಹೀಗಿದೆ- 'ಅಯ್ಯೋ! ಇನ್ನು ನನಗೆ ಸೀತೆಯಿಂದೇನಾಗಬೇಕು? ಈ ಭೂಲೋಕದಲ್ಲಿ ಹುಡುಕುತ್ತಾ ಹೋದರೆ ಸೀತೆಯಂತಹ ಇನ್ನೊಬ್ಬಳು ನಾರಿ ದೊರೆತಾಳು. ಲಕ್ಷ್ಮಣನಂತಹ ತಮ್ಮ ದೊರೆ ತಾನೆ?'

ರಾಮಾಯಣದ ಓದು



ಓದುವ ಒಷ್ಪವೇ ವಿಮರ್ಶೆಯಾಗುತ್ತದೆ. ಆದ್ದರಿಂದಲೇ ಆದರ್ಶ ಓದುಗನೆ ವಿಮರ್ಶಕನೆನ್ನುವ The ideal critic is the ideal reader,) ಲೀವಿಸಿನ ಮಾತು ಸಾರ್ಥಕವಾದದ್ದು. ಓದು, ಕಾವ್ಯವನ್ನು ಅನುಭವದಲ್ಲಿ ಸಾಕ್ಷಾತ್ಕರಿಸುವ, ಅದರ ಶರೀರವನ್ನು ಹೊಕ್ಕು ಅದರ ಮೈತಳೆಯುವ ಪರಕಾಯಪ್ರವೇಶ. ಅದಕ್ಕೆ ಓದುಗನಿಗೆ ಬೇಕಾದ ಅವಶ್ಯಕತೆ-ಕಾವ್ಯದ ಆವಾಹನೆಗೆ ತನ್ನನ್ನು ಒಡ್ಡಿಕೊಳ್ಳುವ, ಅದರ ಅನುಭವ-ವಿಶ್ವಕ್ಕೆ ತನ್ನನ್ನು ತೆಗೆದುಕೊಳ್ಳುವ ಸಹೃದಯೀ ಸಹಾನುಭೂತಿ ಮತ್ತು ಪ್ರಾಮಾಣಿಕತೆ. ಇವೆರಡನ್ನೂ, ಅಂದರೆ ಸಹಾನುಭೂತಿಯ ಸಂವೇದನೆ ಮತ್ತು ಪ್ರಾಮಾಣಿಕತೆಗಳನ್ನು, ಓದು ತನ್ನ ಒಷ್ಪದಲ್ಲೇ ಕಂಡುಕೊಳ್ಳುತ್ತದೆ. ಅದಕ್ಕೆ ನಾವು ಹೊರಗಿನಿಂದ ಯಾವ ಸಾಮಗ್ರಿಯನ್ನೂ ಆಮದು ಮಾಡಿಕೊಳ್ಳಬೇಕಾಗಿಲ್ಲ. ವಿದ್ಯೆ, ಪಾಂಡಿತ್ಯಗಳು ಈ ಸಂವೇದನೆಯನ್ನು ಸೂಕ್ಷ್ಮಗೊಳಿಸುವಲ್ಲಿ ಸಹಕಾರಿಗಳಾಗಲಿ; ಕಾವ್ಯವನ್ನು ಮರೆಯುವುದಕ್ಕಲ್ಲ. ಸಂವೇದನೆ, ಪ್ರಾಮಾಣಿಕತೆ ಇವೆರಡನ್ನು ಗುರುತಿಸುತ್ತಾ ಲಾರೆನ್ಸನು ಈ ಮಾತನ್ನು ಹೇಳುತ್ತಾನೆ: "ಒಬ್ಬ ವಿಮರ್ಶಕ ತನ್ನ ಭಾವದಲ್ಲಿ ಎಳೆಎಳೆಯಲ್ಲು ಜೀವಂತವಾಗಿ, ಬುದ್ಧಿಯಲ್ಲಿ ಸಮರ್ಥನಾಗಿ ಮತ್ತು ನೀತಿಯಲ್ಲಿ ತುಂಬಾ ಪ್ರಾಮಾಣಿಕವಾಗಿ ಇರಬೇಕಾಗುತ್ತದೆ.'
(A critic must be emotionally alive in every fibre, intellectually capable, and then morally very honest)

ಪ್ರಾಮಾಣಿಕತೆಯ ಬಗ್ಗೆ ಒತ್ತುಕೊಟ್ಟು ಮಾತನಾಡಬೇಕಾಗಿರುವುದು ಇಲ್ಲಿ ಪ್ರಸ್ತುತ. ಏಕೆಂದರೆ ರಾಮಾಯಣ ಈ ನಾಡಿನ ಜನತೆಯ ಜೀವನವನ್ನೇ ರೂಪಿಸುತ್ತಾ ಬಂದಿರುವಂತಹ ಅತ್ಯಂತ ಜನಪ್ರಿಯ ಜಾನಪದ, ಜೀವಂತವಾಗಿರುವ, ಸಾರ್ವತ್ರಿಕವೂ, ಸಾರ್ವಕಾಲಿಕವೂ ಆದ, ಬಹುಶಃ ಪ್ರಪಂಚದಲ್ಲೆಲ್ಲಾ ಇಷ್ಟು ಪ್ರಭಾವಶಾಲಿಯಾದ ಕಾವ್ಯ ಕಾಣಸಿಗದ ಮಹಾಕಾವ್ಯ. ಆದ್ದರಿಂದಲೇ ಏನೋ ಓದುಗರಾದ ನಮಗೆ ಅದರ ಬಗ್ಗೆ ಸಾಕಷ್ಟು ಪ್ರಾಮಾಣಿಕವಾಗಿ ಸಂವೇದಿಸುವುದು ಕಷ್ಟವಾಗಿದೆ ಎಂದು ಕಾಣುತ್ತದೆ. ನಮ್ಮಲ್ಲಿ ಹಿಂದಿನ ತಲೆಮಾರಿನ ಪುರಸ್ಕೃತ ವಿಮರ್ಶಕರಾದ ಮಾಸ್ತಿ, ವಿ. ಸೀತಾರಾಮಯ್ಯ, ಡಿ.ವಿ. ಗುಂಡಪ್ಪ ಕೆ.ವಿ. ಪುಟ್ಟಪ್ಪ ಇವರುಗಳು ಸಾಮಾನ್ಯವಾಗಿ ಋಜುಭಾವದ ಸಾಂಪ್ರದಾಯಿಕ ಸಂವೇದನೆಯ ವಿಮರ್ಶೆಗಳನ್ನು ಬರೆದಿರುವುದಿರಲಿ; ಈಗಿನ ಸಮಕಾಲೀನ ಬರಹಗಾರರೂ, ಅದರಲ್ಲೂ ಇಂಗ್ಲಿಷ್ ಸಾಹಿತ್ಯದ ವಿಶೇಷ ಪರಿಶ್ರಮವುಳ್ಳ ಕುರ್ತಕೋಟಿ, ಅಡಿಗ, ಅನಂತಮೂರ್ತಿ ಇವರುಗಳಲ್ಲೂ ಈ ರಾಮಾಯಣದ ಬಗ್ಗೆ ಸಾಂಪ್ರದಾಯಿಕ ಸಂವೇದನೆ ಕಂಡುಬರುವುದು ಶೋಚನೀಯವಾದ ವಿಷಯವೇ ಆಗಿದೆ. ನಾನಿಲ್ಲಿ, ಈ ವಿಮರ್ಶಕರ ಸಮಕ್ಷಮದಲ್ಲಿ ಪ್ರಾಮಾಣಿಕತೆ ಎನ್ನುವ ಪದವನ್ನು ಅದರ ನೈತಿಕಾರ್ಥದಲ್ಲಿ ಉಪಯೋಗಿಸುತ್ತಿಲ್ಲ, ಏಕೆಂದರೆ ಆ ನೈತಿಕ ಜವಾಬ್ದಾರಿ ಅವರ ವೈಯಕ್ತಿಕದ್ದು; ಪ್ರಮಾಣಾರ್ಥದಲ್ಲಿ, ಅಂದರೆ ಪಾಠದ, ಟೆಕ್ಸ್ಟಿನ ಸಾಕ್ಷ್ಯದಲ್ಲಿ, ಓದಿನ ರುಜುವಾತಿನಲ್ಲಿ ಅವರ ನಿಲುವುಗಳು, ಅನಿಸಿಕೆಗಳು ನಿಲ್ಲಲಾರವು ಎನ್ನುವ ಅರ್ಥದಲ್ಲಿ ಉಪಯೋಗಿಸುತ್ತಿದ್ದೇನೆ.

ರಾಮಾಯಣದ ಸೀತಾಯಣದಲ್ಲಿ ನಾನು ರಾಮಾಯಣದ ಒಂದು ಪ್ರಸಂಗವನ್ನು ಕುರಿತು ಕುರ್ತಕೋಟಿಯವರು ಮಾಡಿರುವ ಅರ್ಥವನ್ನು ವಿರೋಧಿಸಿ, ಅವರು ಅಧ್ಯಾಹರಿಸಿದ ಭಾಗವನ್ನು ಎತ್ತಿ ತೋರಿಸಿ ಸೀತಾಲಕ್ಷ್ಮಣರ ಆಂತರಿಕ ತುಮುಲವನ್ನು ಹೇಗೆ ವಾಲ್ಮೀಕಿ ಹೃದಯ ವಿದ್ರಾವಕವಾಗಿ ಹೊರಗೆಡಹಿದ್ದಾನೆ, ಹೇಗೆ ಕಾವ್ಯ ಈ ಹತಭಾಗ್ಯರ ಗುಪ್ತ ಸಂವೇದನೆಗಳನ್ನು, ಅಂತಃಸತ್ವಗಳನ್ನು, ಅವರಿಗೇ ಅಪಾಕ್ಯಗೊಳಿಸಿರಬಹು

ದಾದಷ್ಟು ರೀತಿಯಲ್ಲಿ ಅಭಿವ್ಯಕ್ತಿಸಿದೆ ಎನ್ನುವುದನ್ನು ಆ ಪದಗಳ ಸಾಕ್ಷ್ಯದಲ್ಲೇ ಮುಂದಿಟ್ಟಾಗ ಅದಕ್ಕೆ ಪ್ರತಿಕ್ರಿಯಿಸಿದ ಭಗವಾನ್, ನರಹರಿ- ಭಗವಾನರಿಗೆ ಸೂಕ್ತವಾಗಿ ಉತ್ತರಿಸಿದ ಎಸ್. ಶಿವಾನಂದ ಕೂಡ-ಇವರುಗಳ ವಿಮರ್ಶಾ ಜವಾಬ್ದಾರಿ ಆ ಪ್ರತಿಕ್ರಿಯೆಗಳನ್ನು ಆ ಕಾವ್ಯಸಂದರ್ಭದ ಪದಗಳ ಪ್ರಮಾಣದಲ್ಲೇ ಸಮರ್ಥಿಸಿದಾಗಲೇ ಗಂಭೀರವಾಗುತ್ತದೆಯಾಗಲಿ, ಅದನ್ನು ಬರಿದೇ ಅಲ್ಲಗಳೆಯುವುದರಲಿಲ್ಲ, ಆದರೆ ಈ ಕಾವ್ಯ ಸಂದರ್ಭಕ್ಕೆ ಪ್ರತಿಕ್ರಿಯಿಸಿದ ಶಂಭಾರವರು ತಮ್ಮ ನಿಲುವನ್ನು ಪದಗಳ ಸಾಕ್ಷ್ಯದಲ್ಲೇ ಪ್ರತಿಕರಿಸಿ ರಾಮಾಯಣದ ಮೇಲೆ ಇನ್ನಷ್ಟು ಬೆಳಕನ್ನೂ ಚೆಲ್ಲುತ್ತಾರಾದ್ದರಿಂದ ಅವರ ವಿಮರ್ಶೆ ರಾಮಾಯಣದ ಓದನ್ನು ಮುಂದುವರಿಸುತ್ತದೆ, ವಿಮರ್ಶೆಯನ್ನು ಬೆಳೆಸುತ್ತದೆ, ಸಂವೇದನೆಯ ಪ್ರಾಮಾಣಿಕತೆಯನ್ನು ಬಲಗೊಳಿಸುತ್ತದೆ.

ಸೀತಾಲಕ್ಷ್ಮಣರ ಈ ಕಾವ್ಯಸಂದರ್ಭ ನಮ್ಮನ್ನು ಸೀತಾರಾಮರ ಕಾವ್ಯ ಸಂದರ್ಭಗಳತ್ತ ಸಹಜವಾಗಿ ಕರೆದೊಯ್ಯುತ್ತದೆ. ರಾಮಸೀತೆಯರ ಸಂಬಂಧ ಎಷ್ಟರ ಮಟ್ಟದ್ದು, ಎಷ್ಟು ಗಟ್ಟಿಯಾದದ್ದು ಎನ್ನುವುದು ಆ ಸಂದರ್ಭಗಳಿಂದಲೇ ರುಜುವಾತಾಗುತ್ತದೆ.

ಸೀತೆಯಲ್ಲಿ ರಾಮನ 'ಉಪೇಕ್ಷೆ'-ಈ ಪದವನ್ನು ದೇವತೆಗಳು ರಾಮನಿಗೆ, ಸೀತೆಯ ಅಗ್ನಿಪ್ರವೇಶ ಮಾಡಿದ ಸಂದರ್ಭದಲ್ಲಿ ಉಪಯೋಗಿಸುತ್ತಾರೆ, (ಉಪೇಕ್ಷಸೇ ಚ ವೈದೇಹೀಂ ಮಾನುಷಃಪ್ರಾಕೃತೋಯಥಾ-ಯು.ಉ. 120, 10)-ರಾಮನು ಬಿಲ್ಲನ್ನು ಮುರಿದಂದಿನಿಂದಲೇ ಶುರುವಾಗುತ್ತದೆ:

ದೀಯಮಾನಾಂನತುತದಾ ಪ್ರತಿಜಗಾಹರಾಘವಃ!
ಅವಿಜ್ಞಾಯಪಿತು-ಶ್ಚಂದ
ಮಯೋಧ್ಯಾದಿಪತೇಃಪ್ರಭೋಃII
(ಅ.ಉ. 118, 15-2)

ತನ್ನನ್ನು ರಾಮನು ಆಗಲೇ ಪರಿಗ್ರಹಿಸಲು ಒಪ್ಪಲಿಲ್ಲವೆಂದೂ, ತನ್ನ ತಂದೆಯಾದ ದಶರಥ ತನ್ನ ಪ್ರಭುವೆಂದೂ, ಅವನ ಇಚ್ಛೆಯನ್ನರಿಯದೆ ವಿವಾಹವು [illegible] ತಿಳಿಸಿಬಿಟ್ಟನೆಂದು ಸೀತೆ ಅನಸೂಯೆಗೆ ಹೇಳುವಾಗ, ರಾಮನ [illegible] ಒನ್ನೆಲೆಯಲ್ಲಿ ರಾಮನಿಗೆ 'ವೀರ್ಯಶುಲ್ಕ'ಳಾಗಿ ಲಭಿಸಿದ ಅಸಾಧಾರಣ ಸುಂದರಿಯ ಬಗ್ಗೆ, ಒಬ್ಬ ಯುವಕನಿಗೆ ತನ್ನನ್ನು ಒಲಿದು ನಿಂತಿದ್ದ ಹೆಣ್ಣಿನ ಬಗ್ಗೆ ಇರಬೇಕಾದ ಮಾನವಸಹಜವಾದ, ಪ್ರೇಮ ಸಂವೇದನೆ, ವಯೋಧರ್ಮದ ಆಕರ್ಷಣೆ, ಸೆಳೆತ, ಅಷ್ಟೇ ಅಲ್ಲದೆ 'ವೀರ್ಯಶುಲ್ಕ'ಳಾಗಿ ಬಿಲ್ಲು ಎತ್ತಿದವನಿಗೇ ಅಂಕಿತಳಾಗಿ ಅವನನ್ನೇ ಗಂಡನಾಗಿ ಪಡೆಯಬೇಕಾಗಿದ್ದ, ಅದರಲ್ಲೂ ಅಂತಹ ವೀರನನ್ನು ನೋಡಿದಂದೇ ಸಹಜವಾಗಿ ವರಿಸಿದ ಹೆಣ್ಣಿನ ಬಗ್ಗೆ ಇರಬೇಕಾದ ಮಾನವೀಯವಾದ, ಅನುರಾಗವಲ್ಲದಿದ್ದರೂ, ಅನುಕಂಪ ಕಂಡುಬರುವುದಿಲ್ಲ. ಒಂದು ವೇಳೆ ತಂದೆ ಒಪ್ಪದಿದ್ದಲ್ಲಿ ಅವಳ ಗತಿಯೇನು ಎನ್ನುವ ಯೋಚನೆ, ಕಳಕಳಿ ಅಥವಾ ಕಳವಳವಾಗಲೀ ರಾಮನಲ್ಲಿ ಸುಳಿಯುವುದಿಲ್ಲ, ಬಿಲ್ಲನ್ನು ಎತ್ತುವುದಕ್ಕೆ ಮುಂಚೆಯೇ ಇರುವ ಜವಾಬ್ದಾರಿ, ಆ ಜವಾಬ್ದಾರಿ ವಿಶ್ವಾಮಿತ್ರ ಗುರುವಿನ ಅನುಜ್ಞೆಯಿಂದ ಇನ್ನಷ್ಟು ಪಾವಿತ್ರ್ಯದ್ದಾದದ್ದಾಗ್ಯೂ ರಾಮನು ಖಡಾಖಂಡಿತವಾಗಿ ಅಪ್ಪನೊಪ್ಪದೆ ಒಲ್ಲೆನೆನ್ನುವುದು, ಒಂದು ರೀತಿಯಲ್ಲಿ ಅವನಿಗೆ ಹೆಣ್ಣಿನಲ್ಲೇ ಲೈಂಗಿಕ ನಿರಪೇಕ್ಷೆಯೇನೋ ಎಂದು ಅನುಮಾನಿಸುವಂತಹದಷ್ಟೇ ಅಲ್ಲ, ಅವನ ಅಮಾನುಷತೆಯನ್ನು, ಬೇಜವಾಬ್ದಾರಿಯನ್ನು, ಹೆಣ್ಣಿನ ಬಗ್ಗೆ ಅವನಿಗಿರುವ ಯಃಕಶ್ಚಿತತೆ, ನಿಕೃಷ್ಟತೆಯನ್ನು ಅಕ್ಷಮ್ಯವಾಗಿಸುವಂತಹದು. ರಾಮನ ಈ ವರ್ತನೆ ಮಹಾಭಾರತದ ಭೀಷ್ಮ ಅಂಬೆಯ ಬಗ್ಗೆ ತಳೆದ ವರ್ತನೆಗಿಂತಲೂ ಅಕ್ಷಮ್ಯವಾದದ್ದು.

ಸೀತೆಯು ಹೇಳುವ 'ಪ್ರತಿಜಗ್ರಾಹ' ಎನ್ನುವ ಮಾತಿನಲ್ಲಿ ತೋರಿ ಬರುವ ಅಥವಾ ಅಗತ್ಯದ 'ಆಗ್ರಹದ ಹಿಡಿಯುವಿಕೆ' ಅಂದರೆ, ಪ್ರೇಮದ ಪ್ರಾಬಲ್ಯಕ್ಕೆ ಒಳಗಾದವನು, ಭಾವೋದ್ರಿಕ್ತನು, 'ಬರಸೆಳೆದು ಹಿಡಿ'ಯುವ ಪ್ರೇಮಾಗ್ರಹದ ಸೂಚನೆಯೇ ರಾಮನಲ್ಲಿ ಹೇಗೆ ಇಲ್ಲದಾಯಿತು ಎನ್ನುವುದನ್ನು ಒತ್ತಿ ಹೇಳುತ್ತದೆ. ಸೀತೆಯ ಸ್ಥಾನದಲ್ಲಿದ್ದ ಯಾವ ಹೆಣ್ಣೇ ಆಗಲಿ ತನ್ನನ್ನು ವರಿಸುವ ವೀರನಿಂದ 'ಪ್ರತಿಜಗ್ರಾಹ' ಪದ ಸೂಚಿಸುವ 'ಬರಸೆಳೆತ'ವನ್ನು ನಿರೀಕ್ಷಿಸುವುದು ಸಹಜವೇ ಆಗಿದೆ. ಇಲ್ಲಿ ಸೀತೆಗೆ ರಾಮನಿಂದಾದ ಪ್ರಥಮ ಪ್ರೇಮವಂಚನೆಯ ಹೆಗ್ಗುರುತು ಅಚ್ಚೊತ್ತಿ ನಿಲ್ಲುತ್ತದೆ.

ಆನಂತರ ಸೀತೆ ರಾಮನೊಡನೆ ವನವಿಹಾರದ ಸುಖಗಳನ್ನು ವಿವರಿಸುತ್ತಾ ತನ್ನನ್ನು ವನವಾಸಕ್ಕೆ ಕರೆದುಕೊಂಡು ಹೋಗು ಎನ್ನುತ್ತಾ ಪ್ರೇಮಿಗಳು ಹೇಗೆ ಅಲ್ಲಿ ನಿಜಕ್ಕೂ ವನವಾಸವನ್ನು ವನವಿಹಾರವನ್ನಾಗಿ ಪರಿವರ್ತಿಸಬಹುದೆಂಬುದನ್ನು ಕಣ್ಣಿಗೆ ಕಟ್ಟುವಂತೆ ವಿವರಗಳೊಂದಿಗೆ ಚಿತ್ರಿಸಿದಾಗ್ಯೂ ರಾಮನು ಅವಳನ್ನು ನಿರಾಕರಿಸುತ್ತಿರುವಾಗ ಸೀತೆ ಹೇಳುವ ಕೋಪದ ಮಾತು ಅವರಿಬ್ಬರ ಸಂಬಂಧದ ಆಂತರಿಕ ಸತ್ವವೋ ಎಂದು ಸಂದೇಹಪಡುವಂತಹ ಕಠೋರತೆಯನ್ನು ಹೊರಗೆಡಹುತ್ತದೆ. ಸೀತೆ ರಾಮನನ್ನು ಹೀಗೆ ಮೂದಲಿಸುತ್ತಾಳೆ:

ಸ್ವಯಂತುಭಾರ್ಯಾಂಕೌಮಾರೀಂಚಿಮಧ್ಯುಷಿ ತಾಂಸತೀಂ।
ಶೈಲೂಷಇವಮಾಂ ಪರೇಭ್ಯೋಧಾತುವಿಚ್ಛಸಿ॥
(ಅ.ಪ್ರೂ. 30, 2)

ಅಂದರೆ 'ನಿನ್ನ ಭಾರ್ಯೆಯೂ, ಕುಮಾರಿಯೂ ಆದ, ದೀರ್ಘಕಾಲ ನಿನ್ನ ನಿರೀಕ್ಷಣೆಯಲ್ಲಿ ವಾಸವಾಗಿರುವವಳನ್ನು ಒಬ್ಬ ನಟನು ಅನ್ಯರಿಗೆ ಕೊಡುವಂತೆ ಸ್ವತಃ ನೀನೇ ಇಚ್ಛಿಸುತ್ತಿರುವೆಯಾ ಎನ್ನುತ್ತಾ ಸೀತೆ ರಾಮನನ್ನು ತನ್ನ ಹೆಂಡತಿಯನ್ನು ಇತರರಿಗೆ ಕೊಡುವ ಹೆಣ್ಣಿಗನಿಗೆ, ನಟನಿಗೆ, ಪಿಂಪಿ(pimp)ಗೆ ಸಮೀಕರಿಸುವ ಘೋರತೆ ಸೀತೆಯಂತಹವಳ ಬಾಯಿಂದ ಹೊರಬೀಳಬೇಕಾದರೆ, ರಾಮನ ಪುಂಸತ್ವ ಶಂಕಿಸಬಹುದಾದಷ್ಟೇ ಅಲ್ಲ, ಸೀತೆಗೆ ರಾಮನ ಬಗೆಗಿನ ಅತೃಪ್ತಿ, ಅದರಿಂದಾದ ಕ್ರೋಧ, ಜಿಗುಪ್ಸೆ ಯಾವ ಪ್ರಮಾಣದ್ದು ಎಷ್ಟು ರಾಮನನ್ನು ಜಾಯಾಜೀವಿಯ ಪಿಂಪಿನ ಮಟ್ಟಕ್ಕೆ ಕ್ಷುದ್ರಗೊಳಿಸುವಂತಾದ್ದು ಎನ್ನುವುದು ಮನದಟ್ಟಾಗುತ್ತದೆ. ಅಲ್ಲದೆ:

ಕಿಂತ್ವಾಮನ್ಯತವೈದೇಹಃ ಪಿತಾಮೇಮಿಥಿಲಾಧಿಪಃ ।
ರಾಮಜಾಮಾತರಂಪ್ರಾಪ್ಯ ಸ್ತ್ರೀಯಂಪುರುಷವಿಗ್ರಹಂ II (ಅ.ಪ್ರೂ. 30, 3)

ಡಾ. ಪ್ರೋಲಂಕಿ ರಾಮಮೂರ್ತಿಯವರ
3 ಸೀತಾಯಣ

ಸೀತೆ ರಾಮನನ್ನು 'ನನ್ನ ತಂದೆ... ನೀನೊಬ್ಬ ಗಂಡುವೇಷದ ಹೆಣ್ಣೆಂದು ತಿಳಿದಿದ್ದನೆ?' ಎನ್ನುವಲ್ಲಿ ಇಲ್ಲಿನ ಪ್ರಸಂಗ ಸೀತೆಯಿಂದ ಅಂತಹ ಪುರವಾದ ಗಂಡನನ್ನು ಅವನ ಗಂಡುತನದ ಬಗ್ಗೆ ಮೂದಲಿಸುವಂತಾದ್ದಲ್ಲ. 'ನೀನೊಬ್ಬ ಗಂಡಸೇ' ('Are you a man?') ಎಂಬ ವಾಕ್ಯ ಲೇಡಿ ಮ್ಯಾಕ್‌ಬೆತ್ಳಿಂದ ಬರಬೇಕಾದಾಗ ಆ ಪ್ರಸಂಗ, ಮ್ಯಾಕ್‌ಬೆತ್ತನು ಕೊಲ್ಲಲು ಹೇಸಿದ ಭೀಕರ ಪ್ರಸಂಗ. ಅಂತಹ ಲೇಡಿ ಮ್ಯಾಕ್‌ಬೆತ್ಳ ಮಾತನ್ನು ಸೀತೆ ತನ್ನನ್ನು ಕಾಡಿಗೆ ಕರೆದುಕೊಂಡು ಹೋಗಲು ಒಲ್ಲೆನೆಂದವನಿಗೆ ಹೇಳುವುದು ಎದ್ದು ಕಾಣುವಷ್ಟು ಅತಿಕ್ರಮದ್ದು, ಆದರೆ ಅಂತಹ ಮಾತು ಅಷ್ಟು ಸುಲಭವಾಗಿ ಸೀತೆಯಿಂದ ಜಾರಬೇಕಾದರೆ ಎಲ್ಲಿಯೋ ಒಂದು ದಾಂಪತ್ಯದ ಅತೃಪ್ತಿ


ಸೀತೆಯನ್ನು ಕಾಡಿದಂತೆ ಕಾಣುತ್ತದೆ. ಅಲ್ಲದೆ ಸೀತೆ ಅನಸೂಯೆಯ ಮುಂದೆ ದಾವಾಸ ಮಾತನಾಡುತ್ತಾ ಅವನು ತನ್ನನ್ನು ನನ್ನ ತಾಯಿ ತಂದೆಯಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಾನೆ' ರಾಮನ 'ಜಿತೇಂದ್ರಿಯ'ತೆ ಬಗ್ಗೆ ಹೆಚ್ಚು ಒತ್ತು ಅವನು, 'ದಶರಥ ಮಹಾರಾಜನು ಒಂದು ಸಲ ನೋಡಿದ ಸಾಮಾನ್ಯ ಸ್ತ್ರೀಯರನ್ನೆಲ್ಲಿಯೂ ಮಾತೃಭಕ್ತಿಯಿಂದ ವರ್ತಿಸುತ್ತಾನೆ' ಎನ್ನುತ್ತಾಳೆ.

ರಾಮನಿಗೆ ಹೆಣ್ಣಿನ ಬಗ್ಗೆ ಸಾಮಾನ್ಯವಾಗಿ ಉಪೇಕ್ಷೆ ಇರುವುದು ಕಾವ್ಯದ ಅನೇಕ ಸಂದರ್ಭ ಧ್ವನಿತವಾಗುತ್ತಾ ಹೋಗುತ್ತದೆ. ಸೀತೆ ತನ್ನ ವೃತ್ತಾಂ ರಾವಣನಿಗೆ ಹೇಳುವಾಗ ತಾನು ಮದುವೆಯಾ ವರ್ಷ ಅಯೋಧ್ಯೆಯಲ್ಲಿದ್ದೆನೆನ್ನುತ್ತಾಳೆ. ಒಂದು ಕಡೆ ರಾಮನು ವನವಾಸಕ್ಕೆ ಹೋಗುವ ಸಮಯಕ್ಕೆ ಮಗುವಾಗಿದ್ದಂತೆ ಸೂಚನೆ ಇದೆ. ಇದರಿಂದ ಸೀತೆಯರ ದಾಂಪತ್ಯ ಅಯೋಧ್ಯೆಯಲ್ಲಿ ಸಂತಾ ಫಲಿಸಿದಂತೆ ಕಾಣುವುದಿಲ್ಲ, ಅಲ್ಲದೆ ರಾಮ ಸೀ ಪ್ರಣಯ ಪ್ರಸಂಗದ ವರ್ಣನೆಯಾಗಲೀ ಸನ್ನಿವೇಶಗಳಾಗಲಿ ವನವಾಸದ ಪೂರ್ವಾ ಕಂಡುಬರುವುದಿಲ್ಲ. ಚಿತ್ರಕೂಟದಂತಹ ಸು ವನಪ್ರದೇಶದಲ್ಲಿ ರಾಮನು ಸೀತೆಯನ್ನೂ ಲಕ್ಷ್ಮ ಕುರಿತು ಅದರ ಹೂ-ಹಣ್ಣುಗಳ, ಗಿಡಪಕ್ಷಿಗಳ, ಜಿಂಕೆಗಳ ವರ್ಣನೆಯನ್ನು ಮಾಡುತ್ತಾನಾಗಲಿ ಸೀತೆ ಯಾವ ಪ್ರಣಯ ಅಥವಾ ಶೃಂಗಾರ ಪ್ರಸಂಗ ತೊಡಗುವುದಿಲ್ಲ. ಸೀತೆ ವನವಾಸಕ್ಕೆ ಬರುವ ರಾಮನಿಗೆ ತಾನು ಶುಶ್ರೂಷೆ ಮಾಡುತ್ತಾ ಬ್ರಹ್ಮ ಯಾಗಿರುವೆನೆಂದು-'ಶುಶ್ರೂಷಮಾಣಾತೇನಿತ್ಯಂ ನಿ ಬ್ರಹ್ಮಚಾರಿಣೀ' (ಅ.ಪ್ರೂ. 27, 12) ಹೇಳಿದಾಗ ನಿರ್ಬಂಧ ವನವಾಸದಲ್ಲಿದ್ದಂತೆ ಕಾಣುವುದಿಲ್ಲ, ರಂ ಶರ್ಮರು ಆ ಶ್ಲೋಕವನ್ನು 'ನಿನ್ನ ಸೇವೆಯನ್ನು ಮು ಸದಾ ನಿಯಮದಿಂದ ವ್ರತ ನಿಷ್ಠಳಾಗಿರುವೆ ಕನ್ನಡಿಸಿದ್ದಾರೆ. ಅಲ್ಲದೆ ವನವಾಸದಲ್ಲಿ ಕೆಲವು ನಿರ್ದಿ ಪ್ರಣಯ ಅಥವಾ ಶೃಂಗಾರದ ಸಂದರ್ಭಗಳಿವೆ ಸೀತೆ ಮಾತ್ರ ಹನುಮಂತನಿಗೆ ಹೇಳುತ್ತಾಳೆ.

ರಾಮನು ಸೀತೆಯ ಬಗ್ಗೆ ರಾಮಾಯಣದು ನಮಗೆ ಆಶ್ಚರ್ಯವಾಗುವ ರೀತಿಯಲ್ಲಿ ಉ ತೋರುತ್ತಾನೆ. ಅವನು ಭರತನಿಗೆ ರಾಜ್ಯವೇಕೆ, ಸೀತ ಕೊಡುತ್ತಿದ್ದೆನೆನ್ನುತ್ತಾನೆ. ಅಷ್ಟಲ್ಲದೆ, ಸೀತಾಪಹರಣದ ಅವಳಿಗಾಗಿ ನಾನಾ ರೀತಿಯಲ್ಲಿ ಲಕ್ಷ್ಮಣನಿಗೂ ನಿಗೂ ಮುಜುಗರ ಮತ್ತು ಜಿಗುಪ್ಸೆಯಾಗುವ ರೀ 'ಕಾಮಪೀಡಿತನಾಗಿ ಹಲುಬುತ್ತಾನೆ-'ಏಕೆ ಹೀಗೆ ಮೋಹಿತನಾಗಿದ್ದೀ' ಎಂದು ಇಬ್ಬರೂ ಅವನಿಗೆ ಹೇಳುತ್ತಾರೆ. ಸೀತಾನ್ವೇಷಣೆಗೆ ಹೊರಟ ರಾಮ, ಆ ಯುದ್ಧದಲ್ಲಿ ಸುಗ್ರೀವನಿಗೆ ರಾವಣನಿಂದಾದ ಪ ಬಗ್ಗೆ ಶೋಕಿಸುತ್ತಾ, 'ಗೆಳೆಯಾ, ಏನಾದರೂ ನಿನಗೆ ಕಡಿಮೆಯಾಗಿಬಿಟ್ಟದ್ದರೆ ಗತಿಯೇನು? ಆಗ ಸೀತೆಯಿಂದ ಆಗಬೇಕಾದದ್ದೇನು?' "(ಸ್ವಯಿಂಕಿಚ್ಚ ಕಿಂಕಾರ್ಯಂಸೀತಯಾಮಮ..." (ಯು.ಪು.14,

-ಎನ್ನುತ್ತಾನೆ. ತದನಂತರ ಲಕ್ಷ್ಮಣನು ಯು ಮೂರ್ಛಿತನಾದಾಗ ರಾಮನ ಪ್ರಲಾಪ ಹೀಗಿದೆ- 'ಅ ಇನ್ನು ನನಗೆ ಸೀತೆಯಿಂದೇನಾಗಬೇಕು? ಈ ಭೂಲೋ ಹುಡುಕುತ್ತಾ ಹೋದರೆ ಸೀತೆಯಂತಹ ಇನ್ನೊಬ್ಬ ದೊರೆತಾಳು. ಲಕ್ಷ್ಮಣನಂತಹ ತಮ್ಮ ದೊರೆ ತಾನೆ?'

ಕಿಂನುಮೇಸೀತಯಾಕಾರ್ಯಂ
ಕಿಂಕಾರ್ಯಂಜೀವಿತೇನವಾ।
ಶಯಾನಂಯೋದ್ಯಪಶ್ಯಾಮಿ
ಭ್ರಾತರಂಯುಧಿನಿರ್ಜಿತಮ್॥
ಶಕ್ಯಾಸೀತಾಸಮಾನಾರೀ
ಮರ್ತ್ಯಲೋಕೇವಿಚಿನ್ವತಾ।



ನಲಕ್ಷ್ಮಣಸಮೋಭ್ರಾತಾ ಸಚಿವಃಸಾಂಪರಾಯಿ
(ಯು.ಪು. 49, 5-6)

ಕೊನೆಯದಾಗಿ ಅತ್ಯಂತ ಘೋರವೂ ಅಕ್ಷ ಆದ, ಎಲ್ಲರನ್ನೂ ದಿಗ್ಭ್ರಾಂತಗೊಳಿಸುವ ದ ಅಮಾನುಷತೆಯಿಂದಲೇ ಅವನು ರಾವಣನ ವಧೆಯ ಸೀತೆಯನ್ನು ಕುರಿತು ಈ ಮಾತನಾಡುವುದು:

ಸೀತೆ, ನಿನಗೊದಗಿದ ಅವಮಾನ ಪ್ರಸಂ ಸಹಿಸಲಾರದೆ ಅದನ್ನು ತೊಡೆದು ಹಾಕುವು ಮನುಷ್ಯನು ಏನು ಮಾಡಲು ಸಾಧ್ಯವೋ ಅದೆ ಮಾಡಿ ಸಾಧಿಸಿದ್ದಾಯಿತು. ಇಲ್ಲಿಯವರೆಗೆ ದಾನವರ ಕಾ

ಪರಲೋಕಕ್ಕೆ ದುರ್ಗಮವಾಗಿದ್ದ, ದಕ್ಷಿಣ ದಿಕ್ಕನ್ನು ...ಣ್ಯಾನಿಗಳಾದ ಅಗಸ್ತ್ಯ ಮುನಿಗಳು ದಡಪಡಿಸಿಕೊಂಡಂತೆ ... ವೈರಿಯನ್ನು ಜಯಿಸಿ ಅವನ ಕೈಯಿಂದ ನಿನ್ನನ್ನು ...ಸಿ ತಂದೆನು. (13-14) ಈ ರಣ ಪರಿಶ್ರಮವೆಲ್ಲವೂ ... ಮಿತ್ರರ ಪರಾಕ್ರಮದಿಂದ ಫಲಿಸಿತು. ಭದ್ರೆ, ಈ ...ಶ್ರಮವು ನಿನಗೋಸ್ಕರವಾಗಿ ಅಲ್ಲ ಎಂಬುದು ನಿನಗೆ ...ದಿರಲಿ! ಸದಾಚಾರವನ್ನು ರಕ್ಷಿಸುವುದಕ್ಕಾಗಿಯೂ, ...ದೆಯೂ ನನಗೆ ಬರುವ ಅಪವಾದವನ್ನು ನಿರ್ಮೂಲ ...ಸುವುದಕ್ಕಾಗಿಯೂ, ವಿಶ್ವವಿಖ್ಯಾತವಾದ ನನ್ನ ವಂಶಕ್ಕೆ ...ಬುವ ಅಪಕೀರ್ತಿಯನ್ನು ವಿಧ್ವಂಸಗೊಳಿಸುವುದ...ಗಿಯೂ ಈ ಪರಿಶ್ರಮವನ್ನು ವಹಿಸಿದೆನು (15-...). ಪರಗೃಹವಾಸದಿಂದ ನಿನ್ನ ಚಾರಿತ್ರ್ಯದಲ್ಲಿ ನನಗೆ ಸಂದೇಹ ...ಟಾಗಿದೆ. ನನ್ನೆದುರಿಗೆ ನಿಂತಿರುವ ನೀನು, ನೇತ್ರರೋಗಿಯ ...ದಿರಿಗಿರುವ ದೀಪದಂತೆ, ಕಣ್ಣನ್ನು ಕೊರೆಯುತ್ತಿರುವೆ. ...ರಿಂದ, ಎಲಾ ಜನಕರಾಜತನಯೆ, ಯಥೇಷ್ಟವಾಗಿ ...ಗಾದರೂ ಹೋಗು: ಅನುಜ್ಞೆಯನ್ನು ಕೊಟ್ಟಿದ್ದೇನೆ! ... ಇದೋ ಹತ್ತು ದಿಕ್ಕುಗಳೂ ಇವೆ. ನಿನ್ನಿಂದ ...ಗಾಗಬೇಕಾದ್ದು ಏನೂ ಇಲ್ಲ (17-18). ಉತ್ತಮ ...ದಲ್ಲಿ ಜನಿಸಿದ ತೇಜಸ್ವಿಯಾದ ಯಾವ ಪುರುಷನು ...ಇ, ಚಿರಕಾಲದವರೆಗೆ ಪರಗೃಹದಲ್ಲಿರುವ ಸ್ತ್ರೀಯನ್ನು ...ಯ ಅಭಿಪ್ರಾಯದಿಂದ ಹೃತ್ಪೂರ್ವಕವಾಗಿ ...ರಿಸಿಯಾನು? ನೀನು ಈಗಲಷ್ಟೇ ರಾವಣನ ಮಡಿಲಿ...ದ ಜಾರಿ ಬಂದಿರುವೆ. ಅವನ ಕೆಟ್ಟ ಕಣ್ಣಿಗೆ ಸಿಕ್ಕಿದವಳು. ...ಶ್ರೇಷ್ಠವಾದ ವಂಶ ನನ್ನದು ಎಂದು ಹೇಳಿಕೊಳ್ಳುವ ...ವು, ಮತ್ತೆ ನಿನ್ನನ್ನು ಹೇಗೆ ಸ್ವೀಕರಿಸಲಿ (19-20)? ...ಶದ ಹೆಸರನ್ನುಳಿಸುವದಕ್ಕಾಗಿ ನಿನ್ನನ್ನು ಜಯಿಸಿ ತಂದು, ...ಟ್ಟ ಕೀರ್ತಿಯನ್ನು ಮತ್ತೆ ಗಳಿಸಿದ್ದೇನೆ. ನಿನ್ನಲ್ಲಿ ನನಗೆ ...ವ ಆಸಕ್ತಿಯೂ ಇಲ್ಲ, ಮನಬಂದ ಕಡೆಗೆ ಇಲ್ಲಿಂದ ...ರಟು ಹೋಗು (20)! ಈ ಮಾತನ್ನು ನಿಶ್ಚಯಿಸಿ...ಡೇ ನಾನು ಹೇಳಿದ್ದೇನೆ. ಬೇಕಾದರೆ ಲಕ್ಷ್ಮಣನನ್ನೊ ...ತನನ್ನೊ ಜೀವನಕ್ಕಾಗಿ ಆಶ್ರಯಿಸು. ವಾನರೇಂದ್ರನಾದ ...ರೀವನಿದ್ದಾನೆ. ರಾಕ್ಷಸೇಂದ್ರನಾದ ವಿಭೀಷಣನಿದ್ದಾನೆ ...ರನ್ನಾದರೂ ಆಶ್ರಯಿಸಿ ಜೀವಿಸು. ಅಥವಾ (ನಿನ್ನ ...ರು ಮನೆಗಾದರೂ ಹೋಗು) ಎಲ್ಲಿ ಸಂತೋಷವೋ ...ಸು (2-23).

... ಈ ಮಾತನ್ನು ಹೇಳುವಾಗ ಎದುರಿಗಿದ್ದ ಸೀತೆಯನ್ನು ...ಡಿದಷ್ಟೂ ರಾಘವನ ತಾಳ್ಮೆ ತಪ್ಪುತ್ತ ಹೋಯಿತು. ...ಯುವ ಬೆಂಕಿಗೆ ತುಪ್ಪವನ್ನು ಹೊಯ್ದಂತಾಗಿ, ಅವನ ...ಪವು ಹೆಚ್ಚಿತು. ಹುಬ್ಬು ಗಂಟಿಕ್ಕಿತು. ಓರೆಗಣ್ಣಿಂದ ...ನೆಯನ್ನು ನೋಡುತ್ತಾ (ತಿರ್ಯಕ್ಪ್ರೇಕ್ಷಿತ ಲೋಚನಃ) ...ಪವಾಕ್ಯಗಳನ್ನಾಡಿದನು (11-12). ಸೀತೆ ರಾಮನಿಗೀಗ ...ಗೆ ಹುಣ್ಣು-'ದೀಪೋನೇತ್ರಾತುರಸ್ಯೇವ ಪ್ರತಿಕೂಲಾಸಿಮೇ ...ಮ್' (17) ಈಗವಳು ಅವನಿಗೆ ಇಂಪರ್ಸನಲ್ (...personal) ಆದ 'ಸ್ತ್ರೀ'; 'ಭದ್ರೆ'; ಜನರಾಜನ ...ಗಳು. ಈ ಮಾತನ್ನು ಕೇಳಿ 'ಗಳಗಳನೆ ಕಣ್ಣೀರು ...ಸು'ವ ಸೀತೆ "ಗಜರಾಜನ ಶುಂಡಾದಂಡದಿಂದ ...ಹತವಾದ ಸಲ್ಲಕೀಲತೆಯಂತೆ ಥರಥರನೆ ನಡುಗಿದಳು." (...ಯು. 118, 15) (ಒತ್ತು ನನ್ನದು)

... ಮೇಲಿನ ರಾಮನ ವರ್ತನೆ ಗಕ್ಕನೆ, ನಂಬಲಾಗದಂತಹ, ...ಮೆ ಗೊಳಿಸುವ ಅಮಾನುಷ ವರ್ತನೆಯಂತೆ ಕಂಡರೂ ...ಯಣದುದ್ದಕ್ಕೂ ರಾಮನ ಈ ವರ್ತನೆಗೆ ಪೂರ್ವಸಿದ್ಧತೆ ... ಇದೆ. ವನವಾಸದಲ್ಲಿ ದಂಡಕಾರಣ್ಯವನ್ನು ...ಶಿಸುತ್ತಿದ್ದಂತೆಯೇ ವಿರಾಧನು ಸೀತೆಯನ್ನು ರಾಮನ ...ದುರಿಗೆ 'ಸೀತಾದೇವಿಯ ಸೊಂಟಕ್ಕೆ ಕೈಹಾಕಿ ಅವಳನ್ನು ... ದೂರ ಸೆಳೆದೊಯ್ಯು'ತ್ತಾನೆ (ಅ. 29-10). ತೊಡೆಯ ...ಲೇರಿಸಿಕೊಳ್ಳುತ್ತಾನೆ. ಸೀತೆ ಬಿರುಗಾಳಿಗೆ ಸಿಕ್ಕಿದ ...ಸಿಲುಗಿಡದಂತೆ ಹೆದರಿಕೆಯಿಂದ ನಡುಗುತ್ತಾಳೆ. (ಅದೇ ...). ಆಗ ರಾಮನ ಪ್ರತಿಕ್ರಿಯೆ: "ತಮ್ಮ, ಜನಕರಾಜನ ...ಳು ಸದಾಚಾರ ಸಂಪನ್ನಳೂ ಆದ ನನ್ನ ಪತ್ನಿಯು ...ಧನ ಕೈಗೆ ಸಿಕ್ಕಿರುವುದನ್ನು ನೋಡು (17). ಇವಳು ...ದ್ಧಿಯಿಂದ ಬೆಳೆದ ರಾಜ ಪುತ್ರಿ, ಕೀರ್ತಿಶಾಲಿನಿಯಾಗಿ ...ಗಿದವಳು. ಲಕ್ಷ್ಮಣ, ಕೈಕೇಯಿಯು ಅಪೇಕ್ಷೆ ...ಡೇರಿಹೋಯಿತು! (18-19)" ಇತ್ಯಾದಿ. ಹೀಗೆ ರಾಮ ...ದೀನನಾಗಿ ವಿಧಿಯ ಬಗ್ಗೆ ಜಿಜ್ಞಾಸಿಸುತ್ತಿರುವಾಗ ಲಕ್ಷ್ಮಣ ...ದ ಕೃಷ್ಣಸರ್ಪದಂತೆ ಫೂತ್ಕರಿಸುತ್ತ (22) ...ರೋಷಾವಿಷ್ಟನಾಗುತ್ತಾನೆ. ವಿರಾಧನ ವಧೆಯಾಗುತ್ತದೆ. ...ತರದಲ್ಲಿ ಮಾರೀಚನು 'ಹಾ ಸೀತೆ! ಲಕ್ಷ್ಮಣಾ' ...ದು ಕೂಗಿ ಪ್ರಾಣಬಿಟ್ಟಾಗ ಇದು ರಾಕ್ಷಸ ಮೋಸವೆಂದು ... ಸೀತೆಗೇನಾಯಿತೋ ಎಂದು 'ಶೀಘ್ರ'ವಾಗಿ ...'ಗೊಂಡ ರಾಮನು, 'ಇನ್ನೊಂದು ಜಿಂಕೆಯನ್ನು ...ದು, ಅದರ ಮಾಂಸವನ್ನು ತೆಗೆದುಕೊಂಡು, ...ದಲ್ಲಿದ್ದ ತನ್ನ ಆಶ್ರಮದ ಕಡೆಗೆ ತ್ವರೆ' (27-...) ...ಂದ ಹೊರಡುವುದನ್ನು ವ್ಯಾಸರು ಉಲ್ಲೇಖಿಸಿದ್ದಾರೆ:

...ತಸ್ತ್ವರಮಾಣಸ್ತು ಮಾಂಸಮಾದಾಯ ರಾಘವಃ।
...ತ್ವರಮಾಣೋ ಜನಸ್ಥಾನಂ ಸಸಾರಾಭಿಮುಖಸ್ತದಾ॥

(ಮುಂದುವರೆಯುವುದು)

ಕ್ರಿಶ್ಚಿಯನ್ನನಲ್ಲ, ಯಹೂದಿಯಲ್ಲ, ಮುಸಲ್ಮಾನನಲ್ಲ,
ಹಿಂದೂವಲ್ಲ, ಬೌದ್ಧನಲ್ಲ, ಸೂಫಿಯಲ್ಲ, ಜೆನ್ ಅಲ್ಲ,
ಧರ್ಮವಿಲ್ಲ, ಸಂಸ್ಕೃತಿಯಿಲ್ಲ,
ಪೂರ್ವದವನಲ್ಲ, ಪಶ್ಚಿಮದವನಲ್ಲ,
ಸಮುದ್ರದ ಜಂತುವಲ್ಲ, ಭೂಮಿಯ ಪ್ರಾಣಿಯಲ್ಲ,
ಲೌಕಿಕನಲ್ಲ, ಅಲೌಕಿಕನೂ ಅಲ್ಲ,
ಭೌತಿಕ ಸತ್ವಗಳ ಲವಲೇಶವಿಲ್ಲ,
ನಾನೇ ಇಲ್ಲ,
ಇಂದಿನ, ಮುಂದಿನ ಪ್ರಪಂಚಗಳಲ್ಲಿಲ್ಲ,
ಇದಂ ಈವರ ಕತೆಯಿಂದ ಇಳಿದು ಬಂದವನಲ್ಲ,
ನನ್ನ ನೆಲೆಗೆ ನೆಲೆಯಿಲ್ಲ, ನನ್ನ ಗುರುತಿಗೆ ಗುರುತಿಲ್ಲ,
ದೇಹವಿಲ್ಲ, ಆತ್ಮವೂ ಇಲ್ಲ,
ನನ್ನ ಪ್ರೇಮಿಯಲ್ಲಿ ನಾನು.
ಎರಡಿಲ್ಲದ ಒಂದು ಪ್ರಪಂಚ ಕಂಡವನು.
ಕೊನೆಗೆ, ಮೊದಲಿಗೆ, ಹೊರಗೆ, ಒಳಗೆ
ಬರೀ ಒಂದು ಉಸಿರು.
ಉಸಿರಾಡುವ ಒಂದು ಮನುಷ್ಯ.

ಈ ಸಾಲುಗಳನ್ನು ಬರೆದ ಪರ್ಶಿಯನ್ ಸೂಫಿ ಕವಿ ಜಲಾಲುದ್ದೀನ್ ರೂಮಿಗೆ ಇದೇ 2007ಕ್ಕೆ 800 ವರ್ಷ ತುಂಬುತ್ತದೆ. ಕಾಲಿಗೆ ತೊಡರುವ ಸಾಂಪ್ರದಾಯಕತೆಯನ್ನು ಒದ್ದು ವಿಶ್ವ ಮಾನವತೆಯೆಡೆಗೆ ತುಡಿದ ರೂಮಿಯ ಜೀವನ, ಕಾವ್ಯ ಎರಡೂ ಚೌಕಟ್ಟುಗಳನ್ನು ಒಡೆದು ಭಾಷೆ ಮತ್ತು ಬದುಕಿನ ಸಾಧ್ಯತೆಗಳನ್ನು ಹಿಗ್ಗಿಸಿದಂತವು. 13ನೇ ಶತಮಾನದ ಆರಂಭದಲ್ಲಿ ಈಗಿನ ಅಫ್ಘಾನಿಸ್ತಾನದಲ್ಲಿ ಹುಟ್ಟಿದ ರೂಮಿ ಮಂಗೋಲರ ದಾಳಿಯಿಂದ ತಪ್ಪಿಸಿಕೊಂಡು ಈಗಿನ ಟರ್ಕಿಯಲ್ಲಿ ಬಂದು ನೆಲೆಸಿದನು. ಇಸ್ಲಾಮಿ ಧರ್ಮಶಾಸ್ತ್ರ, ನ್ಯಾಯಶಾಸ್ತ್ರಗಳಲ್ಲಿ ಪಾರಂಗತನಾಗಿದ್ದ ಗೌರವಾನ್ವಿತ ಕುಟುಂಬದ ಹಿನ್ನೆಲೆಯಿದ್ದ ರೂಮಿಯ ನಿಯಮಬದ್ಧ ಜೀವನ, ಸೂಫಿ ಸಂತ ಶಮ್ಸ್ ತಬ್ರೀಜಿಯ ಸಾಂಗತ್ಯದಿಂದ ಅಲ್ಲೋಲಕಲ್ಲೋಲವಾಗುತ್ತದೆ. ಪ್ರೀತಿ-ಆಧ್ಯಾತ್ಮದ ಪ್ರವಾಹದಲ್ಲಿ ಕೊಚ್ಚಿಹೋದ ರೂಮಿ ಹುಚ್ಚನಾಗುತ್ತಾನೆ, ಅನುಭಾವಿಯಾಗುತ್ತಾನೆ. ಹಳೆಯ ದನ್ನೆಲ್ಲ ತೊಳೆದು ರೂಮಿಯ ಜೀವನದಲ್ಲಿ ಹೊಸನೀರು ಹರಿಸಿದ ಶಮ್ಸ್ ಒಂದು ದಿನ ಇದ್ದಕ್ಕಿದ್ದಂತೆ ಕಾಣೆಯಾಗುತ್ತಾನೆ. ಪ್ರಾಯಶಃ ಈ ಸಮಾಜದ ಎಲ್ಲ ಕಟ್ಟುಪಾಡುಗಳನ್ನು ಮೀರಿದ ಸಂಬಂಧವನ್ನು ಸಹಿಸಲಾರದ ಮಂದಿ ಶಮ್ಸನನ್ನು ಕೊಲೆ ಮಾಡಿರಬಹುದು ಎಂಬುದು ಒಂದು ವಾದ. ಸಂಪೂರ್ಣ ಹುಚ್ಚನಹಾಗೆ ರೂಮಿ ಶಮ್ಸನನ್ನು ಹುಡುಕುತ್ತಾನೆ. ಕೊನೆಗೆ ತಾನು ಹುಡುಕುತ್ತಿರುವ ವಸ್ತು ಮತ್ತು ತಾನು ಬೇರೆಯಲ್ಲ ಎಂಬ ದ್ವಂದ್ವಮೀರಿದ ಅಂತಿಮ ಸೂಫಿ ಭಾವವನ್ನು ಕಂಡುಕೊಳ್ಳುತ್ತಾನೆ. "ನನ್ನ ಜೀವನವನ್ನು ಮೂರು ಶಬ್ದಗಳಲ್ಲಿ ವರ್ಣಿಸಬಹುದು: ಹಸಿಯಾಗಿದ್ದೆ, ಬೆಂದೆ, ಸುಟ್ಟುಹೋದೆ" ಅನ್ನುತ್ತಾನೆ ರೂಮಿ.

ಅವನ ಜೀವನದಲ್ಲಿರುವಂತೆ ರೂಮಿಯ ಕಾವ್ಯದಲ್ಲಿಯೂ ಉತ್ಕಟ ಪ್ರೇಮ, ಕಾಮ, ತವಕ, ಹುಡುಕಾಟ, ಮಿಲನಗಳ ಐಹಿಕ ಅನುಭವ ಮತ್ತು ಆಧ್ಯಾತ್ಮ ಬೇರೆಬೇರೆ ಅಲ್ಲ. ಅನುಭವವನ್ನು ಶೃಂಗಾರಮಯ ಭಾಷೆಯಲ್ಲಿ ಬಣ್ಣಿಸುತ್ತಲೇ ಭಾಷೆಗೆ ಮೀರಿದ ಅನುಭಾವದ ಬಾಗಿಲಿಗೆ ತಂದು ನಿಲ್ಲಿಸಿಬಿಡುತ್ತಾನೆ (ಈ ವೈಶಿಷ್ಟ್ಯದ ಬಗ್ಗೆ ಡಿ.ಆರ್. ನಾಗರಾಜ್ ರೂಮಿಯನ್ನು ಅಲ್ಲಮನಿಗೆ ಹೋಲಿಸಿ ಬರೆದಿದ್ದಾರೆ). ಸೂಫಿ ಸಂಪ್ರದಾಯದ ಮೂಲ ಧ್ವನಿಯಾದ ಪ್ರೇಮಿ-ದೇವರಲ್ಲಿ ಐಕ್ಯವಾಗಿ ಹೋಗುವ ಶಬ್ದಾತೀತ ಸ್ಥಿತಿಯನ್ನು ನಿಚ್ಚಳಗೊಳಿಸುವ ರೂಪಕಗಳಲ್ಲಿ ರೂಮಿ ಕಟ್ಟಿಕೊಡುತ್ತಾನೆ.

ನನಗೆ ಇಷ್ಟವಾದ ರೂಮಿಯ ಕೆಲವು ಸಾಲುಗಳನ್ನು ನನ್ನದೇ ರೀತಿಯಲ್ಲಿ ಕನ್ನಡೀಕರಿಸಿದ್ದೇನೆ. ರೂಮಿಯಲ್ಲಿ ಕ್ಷಮೆ ಕೋರಿ!:

ಪ್ರೀತಿಗೆ ಅಡಿಪಾಯವಿಲ್ಲ.
ಪಿಸುಗುಡುವ ಗತಕಾಲದ ರಹಸ್ಯಗಳ ಮೇಲೆ
ತೇಲುವ ಕೊನೆ ಇಲ್ಲದ ಸಮುದ್ರದ ಹಾಗೆ.

ಅದರಲ್ಲದೆಷ್ಟು ಆತ್ಮಗಳು ಮುಳುಗಿವೆಯೊ ಗೊತ್ತಿಲ್ಲ.
ಈ ಸಮುದ್ರದ ಒಂದು ಹನಿ ನಿರೀಕ್ಷೆ.
ಉಳಿದದ್ದು ಭಯ.
* * * * * * *
ಇದು ಪ್ರೇಮಿಗಳ ಸಂತೆ.
ಇಲ್ಲಿ ಮೇಲಿಲ್ಲ, ಕೀಳಿಲ್ಲ,
ಜಾಣರಿಲ್ಲ, ದಡ್ಡರಿಲ್ಲ,
ಮಹಾಸಭೆಗಳಿಲ್ಲ, ಘನ ಪ್ರವಚನಗಳಿಲ್ಲ,
ಗುರುಗಳಿಲ್ಲ, ಶಿಷ್ಯರಿಲ್ಲ,
ಬರೀ ಮತ್ತೇರಿದ ಜನಗಳ ಕೂಟ.
ಡೊಂಬರಾಟದವರು, ಹಡೆ ಜನರು,
ಹುಚ್ಚ ಹುಚ್ಚಿಯರೇ ನೆರೆದಿರುವ
ಇದು ಪ್ರೇಮಿಗಳ ಸಂತೆ.
* * * * * * *

ಮತ್ತೊಮ್ಮೆ
ಪ್ರೀತಿ ನನ್ನ ಮನೆಯ ಛಾವಣಿ
ಗೋಡೆಗಳ ಮೇಲೆ ಧೊಧೊ ಹೊಯ್ಯುತ್ತಿದೆ.
ಮತ್ತೊಮ್ಮೆ
ಪೂರ್ಣಚಂದ್ರನ ರಾತ್ರಿ
ಹುಚ್ಚು ತಿರುಗುವ ಹೊತ್ತು
ನನ್ನೆಲ್ಲ ಪಾಂಡಿತ್ಯದ ಮಾತುಗಳು
ಮುದುರಿ ಉದುರುವ ಹೊತ್ತು,
ಮತ್ತೊಮ್ಮೆ
ನಿದ್ದೆ ಇಲ್ಲದೆ ಸ್ಥಿಮಿತ ಕಳೆದುಕೊಂಡಿದ್ದೇನೆ
ಹೊಯ್ಯುವ ಮಳೆಯಲ್ಲಿ ಬುದ್ಧಿ ಕೊಚ್ಚಿ ಹೋಗಿದೆ.
ಪ್ರೇಮಿ ನನ್ನನ್ನು ಕೆಲಸಕ್ಕೆ ಬಾರದಂತೆ ಮಾಡಿದ್ದಾನೆ.

ಬಯಲು ಅರಸಿ ಹೊರಟ ರೂಮಿ ಅಮೆರಿಕಾದ ಬಜಾರಿನಲ್ಲಿ



ರೂಮಿಗೆ 800 ವರ್ಷ



ಕೆಲಸ ಮಾಡುವುದಾದರೂ ಯಾವ
ಪುರುಷಾರ್ಥಕ್ಕೆ?
ಮತ್ತೊಮ್ಮೆ
ಸುಮ್ಮನೆ ತೊಯ್ಯು, ತೊಯ್ಯು,
ತೊಯ್ಯು, ಒದ್ದೆ ಮುದ್ದೆ..
* * * * * * *
ನನಗೊಬ್ಬ ಪೋಕರಿ ಪ್ರಿಯತಮ ಬೇಕು.
ಜಗಳಕ್ಕಿಳಿದು ರಕ್ತ ಚೆಲ್ಲುವವನು,
ಹೃದಯದಲ್ಲಿ ಬೆಂಕಿ ಇರುವವನು,
ಆಗಸದೊಡನೆ ತರಲೆ ತೆಗೆಯುವವನು,
ಹಣೆ ಬರಹದೊಡನೆ ಸೆಣಸುವವನು,
ಉಕ್ಕುವ ಸಮುದ್ರದಲೆಯ ಮೇಲೆ
ಉರಿವ ಜ್ವಾಲೆಯಂತೆ ಏರಿ ಬರುವವನು.
* * * * * * *
ಸರಿತಪ್ಪುಗಳ ಗಡಿಯಾಚೆ ಒಂದು ಬಯಲಿದೆ
ಅಲ್ಲಿ ಸೇರೋಣ.
ಆ ಹಸಿರು ಹಾಸಿನ ಮೇಲೆ ಆತ್ಮಗಳು ಒರಗಿದಾಗ
ಜಗವೆಲ್ಲ ತುಂಬಿ ಮಾತಿಗೂ ಸ್ಥಳವಿಲ್ಲ,
ಆಲೋಚನೆ, ಭಾಷೆ, ಕೊನೆಗೆ 'ನಾವಿಬ್ಬರು'
ಎಂಬ ಪದಕ್ಕೂ
ಅರ್ಥವಿಲ್ಲ,
ವಸಂತದ ಉದ್ಯಾನಕ್ಕೆ ಬಾ.
ಹೊನ್ನ ಬೆಳಕಿದೆ, ಮದಿರೆಯಿದೆ.
ದಾಳಿಂಬೆ ಹೂಗಳಲ್ಲಿ ಪ್ರೀತಿ ಅಡಗಿದೆ.

ನೀನು ಬಾರದಿದ್ದರೆ ಇದಕ್ಕೆಲ್ಲ ಅರ್ಥ ಇಲ್ಲ,
ನೀ ಬಂದರೆ ಇದಕ್ಕೆಲ್ಲ ಅರ್ಥ ಇಲ್ಲ.
* * * * * * *
ನನ್ನ ತುಂಬ ನೀನು ತುಂಬಿದ್ದೀಯ.
ಚರ್ಮ, ರಕ್ತ, ಮೂಳೆ ಮಜ್ಜೆ ಮಿದುಳು, ಆತ್ಮ..

ಸ್ಥಳ ಉಳಿದಿಲ್ಲ ನಂಬಿಕೆಗೆ, ಅಥವ ಅಪನಂಬಿಕೆಗೆ.
ಈ ಇರುವಿಕೆಯಲ್ಲೇನೂ ಉಳಿದಿಲ್ಲ
ಇರುವಿಕೆಯನ್ನು ಬಿಟ್ಟು.

ಕರಗುವ ಹಿಮದಂತಾಗು
ನಿನ್ನನ್ನು, ನಿನ್ನಿಂದ, ನೀನೇ ತೊಳೆ.

ಹೀಗೆ ಎಲ್ಲ ದ್ವಂದ್ವಗಳನ್ನೂ ಮೀರಿ ಹಾಡಿದ, ಗಿರಗಿರನೆ ಸುತ್ತುತ್ತಾ ನರ್ತಿಸಿದ ರೂಮಿ ಆಗಿಹೋಗಿ 800 ವರ್ಷಗಳು ಸಂದಿವೆ. ಆಧುನಿಕ ಮನಸ್ಸಿಗೆ ಇವನ ಸಾಂಸದಾವಾದ, ಭಾಷೆಯ ಹೊಳಹು ಇನ್ನೂ ಆಕರ್ಷಕವಾಗಿ ಕಾಣುತ್ತದೆ. ಆದರೆ ಇವನ ಮಾತಿನ ಮಿಂಚಿನ ಆಚೆಗಿನ ಅನುಭಾವದ ಕಾಣ್ಕೆ ಸಂಶಯಾತ್ಮರಾದ ನಮಗೆ ಕಷ್ಟ. ರೂಮಿಯ ಪಾಶ್ಚಿಮಾತ್ಯ ಅನುವಾದಕರು ಇವನ ಇಸ್ಲಾಮೀಯ ಸಾಂಸ್ಕೃತಿಕ ಬೇರುಗಳನ್ನು ಕಿತ್ತು, ಮಾನವತಾವಾದದ ನೆಲೆಯಲ್ಲಿ ಮಾತ್ರ ಇಟ್ಟು ಪಶ್ಚಿಮಕ್ಕೆ ವೇದ್ಯವಾಗುವಂತೆ ತಿರುಚುತ್ತಾರೆ ಅನ್ನುವ ಅಪವಾದವೂ ಇದೆ. (ಈ ಪ್ರವೃತ್ತಿಯನ್ನು ನಾನು ಅನುವಾದಕ್ಕೆ ಆರಿಸಿಕೊಂಡ ಸಾಲುಗಳಲ್ಲೂ ನೋಡ ಬಹುದು!) ಸೂಫಿ ನಂಬಿಕೆಯ ಮೂಲದಲ್ಲಿಯೇ ಈ ರೀತಿಯ ಒಳಸೇರಿಸಿಕೊಂಡು ಬಿಡುವ ಸಾಧ್ಯತೆಗಳಿವೆ ಎಂಬ ವಾದವೂ ಇದೆ. ಶತಮಾನಗಳು ನಿಲ್ಲದೆ ಹರಿದ ಚರಿತ್ರೆಯ ವಿಚಿತ್ರ ತಿರುವುಗಳ ಅರಿವಿದ್ದವರಿಗೆ ನಂಬಿಕೆ ಎಲ್ಲಕ್ಕಿಂತ ಕಷ್ಟದ ಕೆಲಸ. ರೂಮಿ ಹುಟ್ಟಿದ ಅಫ್ಘಾನಿಸ್ತಾನದಲ್ಲಿ ತಾಲಿಬಾನರು ಬುದ್ಧನ ಪ್ರತಿಮೆಗಳನ್ನು ಧ್ವಂಸ ಮಾಡಿದ್ದಾರೆ. ಈ ಮತಾಂಧರನ್ನು ಹಿಂದೊಮ್ಮೆ ಹಾಲು-ತುಪ್ಪ ಎರೆದು ಸಾಕಿದ ಅಮೆರಿಕ ಅವರ ಮೇಲೆಯೇ ಯುದ್ಧ ಸಾರಿ ಕೊನೆಗೆ ಪ್ರಜಾತಂತ್ರ ಎಂಬ ಹೆಸರಿಟ್ಟುಕೊಂಡ ಆಡಳಿತಕ್ಕೆ ಪಟ್ಟಾಭಿಷೇಕ ಮಾಡಿದೆ. ರೂಮಿ ಬೆಳೆದು ಸೂಫಿಯಾದ ಟರ್ಕಿಗೆ ಈಗ ತ್ರಿಶಂಕುವಿನ ಸ್ಥಿತಿ. ಪೂರ್ವ ಪಶ್ಚಿಮಗಳ ಹೊಸ್ತಿಲಾದ ಭವ್ಯ ಪರಂಪರೆಯ ಈ ದೇಶದಲ್ಲಿ ಯುರೋಪಿಯನ್ ಯೂನಿಯನ್ ಸೇರುವುದರ ಬಗ್ಗೆ ಜಗ್ಗಾಟ ಜಗಳ ನಡೆದಿದೆ. ಸೂಫಿ ಪರಂಪರೆಯ ಇನ್ನೊಂದು ತವರಾದ ನಮ್ಮ ದೇಶದಲ್ಲಿ ಸೂಫಿ ಸ್ಥಳಗಳಿಗೆ ಒಂದು ಧರ್ಮದ ಹಣೆಪಟ್ಟಿ ಹಚ್ಚುವ ಪ್ರಯತ್ನ ನಡೆದಿದೆ. ನಮ್ಮ ಮನೆಯಂಗಳದಲ್ಲೇ ಬಾಬಾಬುಡನಗಿರಿಯ ಉದಾಹರಣೆ ಇದೆ. ಅತ್ತ ಕಡೆ ಸೂಫಿ ಪಂಥವೇ ಇಸ್ಲಾಂ ವಿರೋಧಿ ಅನ್ನುವವರೂ ಇದ್ದಾರೆ.

ಇದೆಲ್ಲದರ ನಡುವೆ ಪ್ರಪಂಚದ ಯಾವುದೇ ಮೂಲೆಯಲ್ಲಿ ಅತಂತ್ರ ಸ್ಥಿತಿ ಎದ್ದರೂ ಡಾಲರಿನ ನೋಟನ್ನು ಗಾಳಕ್ಕೆ ಚುಚ್ಚಿಕೊಂಡು ಮೀನು ಹಿಡಿಯಲು ಕೂರುವ ಅಮೆರಿಕ ದೇಶದಲ್ಲಿ ಅತ್ಯಂತ ಓದಲ್ಪಡುವ, ಪ್ರಭಾವಶಾಲಿ ನಂಬರ್ ಒನ್ ಕವಿಯ ಸ್ಥಾನ ಯಾರಿಗಿದೆ ಗೊತ್ತಾ? ರೂಮಿಗೆ! ರೂಮಿಯ ಅನುವಾದದ ಪುಸ್ತಕಗಳು ಮಿಲಿಯಗಟ್ಟಲೆ - 9/11 ನಂತರವೂ - ಅಮೆರಿಕಾದಲ್ಲಿ ಮಾರಾಟವಾಗುತ್ತಿವೆ. ಮಡೊನಾಳಂತ ಅನೇಕ ಹೆಸರಾಂತ ದೀವಾಗಳು ಇವನ ಹಾಡನ್ನು ಹಾಡಿದ್ದಾರೆ. ಫ್ಯಾಶನ್ ಶೋಗಳ ಹಿಮ್ಮೇಳವಾಗಿ ಇವನ ಕಾವ್ಯವನ್ನು ಬಳಸಲಾಗಿದೆ. ದೀಪಕ್ ಛೋಪ್ರನಂತ ಅಧ್ಯಾತ್ಮವನ್ನು ಮಾರಾಟ ಮಾಡುವ ಆಧುನಿಕ ಗುರುಗಳಿಗೂ ರೂಮಿ ಅತಿ ಪ್ರಿಯವಾದವನು. "ರೂಮಿ ಷೋ"ಗಳೂ ನಡೆಯುತ್ತವೆ. ರೂಮಿಯ ನಂತರ ಅವನ ಶಿಷ್ಯರು ಕಟ್ಟಿದ ಮೆವ್ಲವಿ ಪಂಥದಲ್ಲಿ ಸುತ್ತುತ್ತ ಹಾಡುತ್ತಾ ಮಾಡುವ ಪ್ರಾರ್ಥನೆ ಮುಖ್ಯ ಆಚರಣೆ (ಇವರನ್ನು "ವರ್ಲಿಂಗ್ ದರ್ವಿಶ್"- ಗಿರಗಿರ ತಿರುಗುವ ದರ್ವೇಶಿಗಳು ಎನ್ನುತ್ತಾರೆ). ಈ ರೀತಿ ಗಿರಗಿರ ತಿರುಗುವುದನ್ನು "ಸುಲಭವಾದ ನಾಲ್ಕು ಹಂತಗಳಲ್ಲಿ" ಅಮೆರಿಕನ್ನರಿಗೆ ಹೇಳಿಕೊಡುವ ಮಂದಿಯೂ ಹುಟ್ಟಿಕೊಂಡಿದ್ದಾರೆ. ಪ್ರೇಮ ಭಕ್ತಿಯ ಉತ್ಕಟ ಹಂತದ ಸಂಕೇತವಾದ ಈ ತಿರುಗುವಿಕೆಯ ಡಬ್ಬಲ್ ಲಾಭದ ಬಗ್ಗೆಯೂ ಪ್ರಚಾರ ಮಾಡಲಾಗುತ್ತಿದೆ: ಇದೊಂದು ಆಧ್ಯಾತ್ಮಿಕ ಅನುಭವ ಅಷ್ಟೆ ಅಲ್ಲ, ಬೊಜ್ಜು ಇಳಿಸುವುದಕ್ಕೂ ಸಹಾಯ ಮಾಡುವ "ಲೈಟ್ ಎಕ್ಸರ್ಸೈಸ್" ಅಂತ. ಇದೆಲ್ಲದಕ್ಕೆ ತಕ್ಕ ಹಾಗೆ ಯುನೆಸ್ಕೊದವರು ಈ ವರ್ಷವನ್ನು 'ರೂಮಿಯ ಸಂವತ್ಸರ' ಎಂದು ತಮ್ಮದೇ ಆದ ರೀತಿಯಲ್ಲಿ ಆಗತ್ಯಕ್ಕೆ ಜಾಗೃತಿ ಕರಿಸಲು ಹೊರಟಿದ್ದಾರೆ.

ಬಯಲನ್ನು ಹುಡುಕಿ ಹೊರಟ ರೂಮಿ ಇದನ್ನೆಲ್ಲ ನೋಡಿದ್ದರೆ ಏನು ಅನ್ನುತ್ತಿದ್ದನೊ ಊಹಿಸುವುದು ಕಷ್ಟ. ಅವನದೇ ಕೆಲವು ಸಾಲುಗಳು ಜ್ಞಾಪಕಕ್ಕೆ ಬರುತ್ತವೆ:

ಪತ್ರ ಬರೆದು ಮುಗಿಸಿದ ಮೇಲೆ
ಯಾವಾಗಲೂ ಹೀಗೆ.
ಉಳಿದು ಹರಿಯುವ ಮೌನ
ಭಾಷೆ ಬಳಸಿದ್ದಾದರೂ ಯಾಕೆ
ಎಂಬ ಅನುಮಾನ.

-ಶ್ರೀ

ದೇವೇಗೌಡ... ಡಿಸ್‌ಮಿಸ್ಡ್ ಅಂದರು ಗೌಡರು!

ಜಾತ್ಯತೀತ ಜನತಾದಳದ ಶಿಸ್ತು ಸಮಿತಿ ಸಭೆ ದೆಹಲಿಯಲ್ಲಿ ನಡೆಯುತ್ತಿತ್ತು. ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಯಾರು ಯಾರನ್ನು ಪಕ್ಷದಿಂದ ಉಚ್ಛಾಟಿಸಬೇಕು ಅನ್ನುವುದರ ಚರ್ಚೆ. ಚರ್ಚೆ ಏನು ಬಂತು ಪೂರ್ವ ನಿರ್ಧಾರದಂತೆ ಯಾರು ಯಾರನ್ನ ಮನೆಗೆ ಕಳುಹಿಸಬೇಕು ಎಂಬುದಕ್ಕೆ ಸಮಿತಿಯು ಸಾಮುಕಾವಸ್ತೆ ಒಪ್ಪಿಗೆ ಸೂಚಿಸಬೇಕಾಗಿತ್ತು. ದೇಶದ ಮೂಲೆ ಮೂಲೆಗಳಿಂದ ಬಂದಿದ್ದ ದೇವೇಗೌಡರ ಅಭಿಮಾನಿಗಳು- ಅಂದರೆ ಅವರು ತೂಕಿದರೆ ಘಮಘಮ ಅನ್ನುತ್ತೆ ಉಗಿದರೆ ಮಲ್ಲಿಗೆ ಸುರಿಯುತ್ತೆ ಅನ್ನುವವರು- ಶೋಭಾಯಮಾನರಾಗಿದ್ದರು. ಭಟ್ಟಂಗಿಯೊಬ್ಬ ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆ ಎನ್ನಲಾದವರ ಹೆಸರನ್ನು ಓದುತ್ತಿದ್ದ.

'ವೀರೇಂದ್ರಕುಮಾರ್' ಅಂದ ಭಟ್ಟಂಗಿ.

'ಡಿಸ್‌ಮಿಸ್ಡ್' ಅಂದರು ಗೌಡರು.

'ಸುರೇಂದ್ರ ಮೋಹನ್.'

'ಡಿಸ್‌ಮಿಸ್ಡ್.'

'ಪಿಜಿಆರ್ ಸಿಂಧ್ಯಾ.'

'ಡಿಸ್‌ಮಿಸ್ಡ್'

.....

.....

ಹೀಗೇ ಸುಮಾರು ಜನರನ್ನು ಪಕ್ಷದಿಂದ ಉಚ್ಛಾಟಿಸಿದ ನಂತರ ಪಟ್ಟಿಯಲ್ಲಿದ್ದ ಹೆಸರುಗಳು ಮುಗಿಯಿತು ಎಂದು ತಿಳಿಸಲು 'ದೇವೇಗೌಡಜಿ' ಎಂದು ಪ್ರಾರಂಭಿಸಬೇಕಾಗಿತ್ತು, 'ಡಿಸ್‌ಮಿಸ್ಡ' ಗುಂಗಿನಲ್ಲೇ ಇದ್ದ ಗೌಡರು 'ದೇವೇಗೌಡ' ಎಂದು ಹೇಳಿ 'ಜಿ' ಸೇರಿಸುವ ಮುನ್ನವೇ... 'ಡಿಸ್‌ಮಿಸ್ಡ್' ಅಂದರು!

* * * * *

ಒಂದು ಅನುಮಾನ ಏನು ಅಂದರೆ... ಕೋಮುವಾದಿ ಶಕ್ತಿಗಳ ವಿರುದ್ಧ ಸೆಟೆದು ನಿಂತಿದ್ದ ಒಂದು ಪಕ್ಷ ಅವರೊಡನೆ ಸೇರಿ ಸಮ್ಮಿಶ್ರ ಸರ್ಕಾರ ರಚಿಸಿತಲ್ಲಾ... ಇದನ್ನು ವಿರೋಧಿಸಿದವರನ್ನೆಲ್ಲ ಪಕ್ಷ ವಿರೋಧಿಗಳೆಂದು ಹೊರಹಾಕಲಾಗುತ್ತಿದೆಯಲ್ಲಾ... ಇದನ್ನು ಬೆಂಬಲಿಸಿದವರನ್ನೆಲ್ಲ ಮೆಚ್ಚಿ ಕೊಂಡಾಡುತ್ತಿದೆಯಲ್ಲಾ... ಜಾತ್ಯತೀತ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿರುವವರನ್ನೆಲ್ಲ ಹೊರಹಾಕಲುತುದಿಗಾಲಮೇಲೆ ನಿಂತಿದೆಯಲ್ಲಾ... ಅದೇನು ಶಿಸ್ತು ಸಮಿತಿಯೋ ಅಶಿಸ್ತು ಸಮಿತಿಯೋ ಅಂತ!

ಈ ಅಶಿಸ್ತು ಸಮಿತಿ ಗೌಡರ ಮೂಗಿನ ನೇರಕ್ಕೆ ತೀರ್ಮಾನ ನೀಡಿದ ನಂತರ ಅದನ್ನು ಪ್ರಚುರಪಡಿಸಬೇಕಲ್ಲ ಅನ್ನುವ ಕಾರಣಕ್ಕೆ ಪತ್ರಿಕಾಗೋಷ್ಠಿ ಕರೆದು ನೀಡಿದ ಸಮಜಾಯಿಷಿ ಅಸಂಗತ ನಾಟಕದ ಪ್ರಶ್ನೋತ್ತರಗಳಂತೆ ಕಂಗೊಳಿಸುತ್ತಿವೆ! ಇಲ್ಲಿ ಕೆಲವನ್ನು ವಾಚಕರ ಗಮನಕ್ಕೆ ತರಲು ಬಯಸುತ್ತೇನೆ.

ಪ್ರಶ್ನೆ: ನಿಮ್ಮ ಪಕ್ಷದ ಹೆಸರೇ ಜಾತ್ಯತೀತ ಜನತಾದಳ. ಹೀಗಿದ್ದೂ ನೀವು ಕೋಮುವಾದಿ ಭಾರತೀಯ ಜನತಾ ಪಕ್ಷದೊಂದಿಗೆ ಕೈಜೋಡಿಸಿದ್ದೀರಲ್ಲ?

ಉತ್ತರ: ಅಂದಿನ ಪರಿಸ್ಥಿತಿ ಹಾಗಿತ್ತು. ಕಾಂಗ್ರೆಸ್ ನೀಡುತ್ತಿದ್ದ ಕಿರುಕುಳ ತಾಳಲಾದರೆ ಈ ಕ್ರಮ ಕೈಗೊಳ್ಳಬೇಕಾಯಿತು.

ಪ್ರಶ್ನೆ: ಏನು ಕಿರುಕುಳ ನೀಡಿದರು?


ಉತ್ತರ: (ರೇಗು... ಕೆಂಡಾಮಂಡಲ ಆದರು ಗೌಡರು)

ಪ್ರಶ್ನೆ: ಮುಂದೆ ಬರುವ ಚುನಾವಣೆಗಳಲ್ಲಿ ಭಾಜಪ ಜೊತೆ ಹೊಂದಾಣಿಕೆ ಮಾಡಿಕೊಳ್ತೀರಾ?

ಉತ್ತರ: ಕೋಮುವಾದಿಗಳ ಜೊತೆ ಹೊಂದಾಣಿಕೆ ಸಾಧ್ಯ ಇಲ್ಲ.

ಪ್ರಶ್ನೆ: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹೊಂದಾಣಿಕೆ ಮಾಡಿಕೊಂಡಿದ್ದರಲ್ಲ?

ಉತ್ತರ: ಹೊಂದಾಣಿಕೆ ಮಾಡಿಕೊಂಡಿರಲಿಲ್ಲ. ಭಾಜಪದವರು ಅಭ್ಯರ್ಥಿ ಹಾಕಲಿಲ್ಲ ಅಷ್ಟೇ.



(ಇಲ್ಲೊಂದು ಸಮಸ್ಯೆ. ಚುನಾವಣೆ ಮೊದಲು ನಮ್ಮ ಪಕ್ಷದಿಂದ ಅಭ್ಯರ್ಥಿ ಹಾಕ್ತಿವಿ, ನೀವು ಹಾಕಬೇಡಿ ಅಂತ ಅವರೂ ಇವರೂ ಕಿತ್ತಾಡುತ್ತಿದ್ದುದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಮಾಧ್ಯಮದವರೇ ಜನರಿಗೆ ಮೋಸ ಮಾಡಿದರಾ ಹೇಗೆ? ಇನ್ನು ಮುಂದಿನ ಚುನಾವಣೆಗಳಲ್ಲೂ ಇದೇ ರೀತಿ ಹೊಂದಾಣಿಕೆ ಮಾಡಿಕೊಳ್ತೀವಿ ಎಂಬುದಾಗಿ ಯಡಿಯೂರಪ್ಪನವರು ಹೇಳಿದ್ದೂ ವರದಿಯಾಗಿತ್ತಲ್ಲ... ಅವರೇ ಸುಳ್ಳು ಹೇಳಿದರಾ ಅಥವಾ ಮಾಧ್ಯಮದವರು ತಪ್ಪು ವರದಿ ಮಾಡಿದರಾ?)

ಪ್ರಶ್ನೆ: ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಾಗಾದರೆ ಹೊಂದಾಣಿಕೆ ಇಲ್ಲ?

ಉತ್ತರ: ಅದು ಸ್ಥಳೀಯ ಮುಖಂಡರಿಗೆ ಸೇರಿದ್ದು!

(ಇದೇನಿದು ಇಲ್ಲ ಅಂತಾರೆ, ಇದೆ ಅಂತಾರೆ ಅಂತ ತಲೆ ಕೆಟ್ಟು ಗೊಬ್ಬರ ಆಗುತ್ತಿದೆಯಾ? ರಾಜಕೀಯ ಅಂದರೆ ಅದೇ ಸ್ವಾಮಿ!)

ಪ್ರಶ್ನೆ: ಇಪ್ಪತ್ತು ತಿಂಗಳ ನಂತರ ಭಾಜಪಕ್ಕೆ ಅಧಿಕಾರ ಬಿಟ್ಟು ಕೊಡುವಿರಾ?

ಉತ್ತರ: ಜಾತ್ಯತೀತತೆಗೆ ಒತ್ತು ಕೊಡುವುದಾದರೆ ಬಿಟ್ಟುಕೊಡುತ್ತೀವಿ!

(ಪಾಪ ಯಡಿಯೂರಪ್ಪಗೆ ಹೃದಯ ಸ್ಥಂಭನ ಆಗಿರಬೇಕು. ಕೇಂದ್ರ ಸಮಿತಿ ಅವರೇ ಮುಂದಿನ ಮುಖ್ಯ ಮಂತ್ರಿ ಅಂತ ಘೋಷಿಸಿದೆ. ವೆಂಕಯ್ಯನಾಯ್ಡು ಬೆಂಗಳೂರಿಗೇ ಬಂದು ನಮ್ಮ ಪಕ್ಷದಲ್ಲಿ ಯಾವುದೇ ಭಿನ್ನಮತ ಇಲ್ಲ, ಮಾಧ್ಯಮದ ಸೃಷ್ಟಿ ಈ ಭಿನ್ನಮತ ಅನ್ನೋದು, ಯಡಿಯೂರಪ್ಪನವರೇ ಮುಂದಿನ ಮುಖ್ಯಮಂತ್ರಿ ಅಂತ ಸಾರಿದ್ದಾರೆ. ಅಂತಹದ್ದರಲ್ಲಿ ಈ ಗೌಡ ಜಾತ್ಯತೀತತೆಗೆ ಒತ್ತು ನೀಡಿದರೆ ಅಂತಹ ಆಕಾಶಕ್ಕೆ ಏಣಿ ಹಾಕುವಂತಹ ಶರತ್ತು ಹಾಕಿದರೆ... ಇದನ್ನೆಲ್ಲ ನೋಡಿದರೆ ಯಡಿಯೂರಪ್ಪನವರು 'ಕನಸಿನ ಮುಖ್ಯ ಮಂತ್ರಿ'ಯಾಗೇ ಮಣ್ಣಿಗೆ ಹೋಗುವಂತೆ ತೋರುತ್ತಿದೆ!)

ಪ್ರಶ್ನೆ: ಚುನಾವಣೆಯನ್ನು ಒಂಟಿಯಾಗಿಯೇ ಎದುರಿಸುತ್ತೀರಾ?

ಉತ್ತರ: ಖಂಡಿತವಾಗಿ. ಜಾತ್ಯತೀತ ಸಿದ್ಧಾಂತದ ಮೇಲೆ ಹೋರಾಟ ಮಾಡಿ ಯಾರ ಸಹಾಯವೂ ಇಲ್ಲದೆ ಸರ್ಕಾರ ರಚಿಸುತ್ತೀವಿ.

(ಸರಿ ಗೌಡರೆ, ಜನಾನೂ ಹಾಗೇ ಅಂದುಕೊಂಡಿದ್ದರು. ಜಾತ್ಯತೀತ ತತ್ವದ ಮೇಲೆ ಸರ್ಕಾರ ರಚಿಸುತ್ತೀರಿ. ಕಾಂಗ್ರೆಸ್-ಭಾಜಪ ವಿರುದ್ಧವಾಗಿ ಮೂರನೆ ಶಕ್ತಿಯಾಗಿ ನಿಮ್ಮ ಪಕ್ಷ ಬೆಳೆಯುತ್ತೆ ಅಂತಾನೆ ಜನ ಮತ ನೀಡಿದ್ದು. ಆದರೆ ನೀವೇನು ಮಾಡಿದಿರಿ? ಕಾಂಗ್ರೆಸ್ ಜೊತೇನೂ ಬೇಳೆ ಬೇಯಿಸಿಕೊಂಡಿರಿ, ಭಾಜಪ ಜೊತೇನೂ ಅದೇ ಮಾಡ್ತಿದೀರಿ. ಮತ್ತೆ ಮತದಾರ ನಿಮ್ಮ ಮಾತಿಗೆ ಮರುಳಾಗಿ ಮತ ನೀಡ್ತಾನೆ ಅನ್ನುವ ನಿಮ್ಮ ಆಶಾಭಾವನೆ ಮೆಚ್ಚಲೇಬೇಕು!)

* * * * *

ಮಳೆ ನಿಂತರೂ ಮರದ ನೀರು ನಿಲ್ಲಲಿಲ್ಲ ಅನ್ನುವ ಮಾತಿನಂತೆ ಆಗಿದೆ ಶಿವಮೊಗ್ಗದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕತೆ. ಎರಡು ಗೋಷ್ಠಿಗಳನ್ನು ರದ್ದುಪಡಿಸಲು ಸೂಚಿಸಿದ್ದರೂ ದುರಹಂಕಾರಿ ಚಂಪಾ ಸ್ವಾಗತ ಸಮಿತಿಯ ಅಧ್ಯಕ್ಷನಾದ ನನಗೇ ಟಾಂಟ್ ಮಾಡಿದ್ದಾರೆ ಅಂತ ಯಡಿಯೂರಪ್ಪನವರು ಹೋಗಿಬಂದ ಕಡೆ ಎಲ್ಲ ಗೋಳಾಡ್ತಿದಾರೆ. ಅದರಲ್ಲೂ ತಮ್ಮ ಮುದ್ದಿನ ಕೂಸುಗಳಾದ ಚೆಡ್ಡಿಗಳು ಪೊಲೀಸರಿಂದ ತದುಕಿಸಿಕೊಂಡು, ಸಾಹಿತ್ಯಾಸಕ್ತರ ಕೆಂಗಣ್ಣಿಗೆ ಗುರಿಯಾದದ್ದಕ್ಕಿಂತ ಮಿಗಿಲಾಗಿ ನಿಮ್ಮ ಅಧಿಕಾರದ ಅವಧಿಯಲ್ಲೇ ಹೀಗೆ ನಡೆದಿರುವುದು ನಿಮ್ಮ ನಿಷ್ಕ್ರಿಯತೆಯ ಫಲ ಎಂದು ಜಾಡಿಸುತ್ತಿರುವುದು ಅವರನ್ನು ಕಂಗೆಡಿಸಿದೆಯಂತೆ. ಈ ಅಪವಾದದಿಂದ ಪಾರಾಗಲು ತಮ್ಮ ಶಕ್ತಿ ಪ್ರದರ್ಶಿಸಲು ಫೆಬ್ರವರಿ ತಿಂಗಳಲ್ಲಿ 'ಸಹ್ಯಾದ್ರಿ ಉತ್ಸವ' ಆಚರಿಸುವುದಾಗಿ ಘೋಷಿಸಿದ್ದಾರೆ. ಈ 'ಸಹ್ಯಾದ್ರಿ ಉತ್ಸವ' ಅನ್ನುವ 'ಹಿಂದೂತ್ವ ಉತ್ಸವ' ಹೇಗಿರಬ... ಎಂಬುದನ್ನು ಯಾರಾದರೂ ಊಹಿಸಬಹುದು. '... ಹಿಂದೂ ಸಮಾವೇಶ'ದ ತದ್ರೂಪು ಇದಾಗಿರುತ್ತದೆಂಬ... ಯಾರಿಗೂ ಸಂಶಯ ಬೇಡ!

* * * * *

ಇತ್ತೀಚಿಗೆ ಮೈಸೂರಿನಲ್ಲಿ 'ಚಾಮುಂ... ಕ್ಷೇತ್ರದ ಚುನಾವಣೆ- ಕಲಿತ ಪಾಠಗಳು' ಸಂವಾದ ಕಾರ್ಯಕ್ರಮ ಇತ್ತು, ಅಲ್ಲಿ... ಹಿರಿಯರು ಒಂದು ಪ್ರಶ್ನೆ ಎತ್ತಿ... 'ಪತ್ರಿಕೆಗಳಲ್ಲಿ ಅವರನ್ನು ಇವರು ಬೈ... ಇವರನ್ನು ಅವರು ಬೈದರು ಅನ್ನುವ ಸಂ... ಬರುತ್ತಿರುತ್ತೆ, ಅವರು ಬಯ್ದಾಡುವುದನ್ನು ಓದೋಕೆ... ಕೊಂಡುಕೊಬೇಕಾ?' ಅನ್ನುವುದು ಅವರ ಅಳಲ... ಸ್ವಾಮಿ, ಇಷ್ಟಕ್ಕೇ ಬೇಸರಪಟ್ಟುಕೊಂಡರೆ ಹೇಗೆ?... ಮಂತ್ರಿ ನೂರರ ಕಂತೆಯನ್ನೇ ಎಸೆಯೋದು, ಮುಖ್ಯ... ಗುಮ್ಮನ ಗುಸಕನ ತರಹ ಫಾರಂಹೌಸಿನಲ್ಲಿ ಇರುವ... ತಿಳಿದು ಅವರ ಫೋಟೋ ತೆಗೆಯಲು ಬಂದ... 'ಪ್ಯಾಂಟ್ ಬಿಚ್ಚಿ ತೋರಿಸಲಾ' ಅಂತ ಹೇಳೋದು ಎಷ್ಟೊಂದು ರೋಚಕವಾಗಿರ್‍ತವೆ. ಇದರ ವಿವರ... ಓದುತ್ತಾ ಇದ್ದರೆ ಒಂದು ಅಶ್ಲೀಲ ಪತ್ತೇದಾರಿ ಕಾದ... ಓದಿದ ಅನುಭವ ಆಗಲ್ಲವಾ. ಯಾವುದೇ ಸಿದ್ಧಾ... ಇಲ್ಲದವರಂತೆ ಗೆದ್ದ ಅಭ್ಯರ್ಥಿ ಬೆಳ್ಳಿ ಕಿರೀಟ ತೊಟ್ಟುಕೊ... ಮೆರೆಯೋದು, ಚಾಮುಂಡೇಶ್ವರಿಗೆ ಬೆಳ್ಳಿ ಖಡ್ಗ ನೀಡೋ... ಎಂತಹ ಮಜಾ ಕೊಡುತ್ತೇರಿ. ಅವರ ಮುಖ... ಕಿತ್ತಾಕಿ ನಿಜ ಸ್ವರೂಪ ತೋರಿಸೋದು ಇಂತಹ ಚಿತ್ರ... ವರದಿಗಳೇ ಅಲ್ಲವಾ. ಇಂತಹವೆಲ್ಲ ಬೇಡ ಅಂದರೆ ... ಅನ್ನೋದು ಹರಿಕತೆ ಓದುವ ಹಾಗೆ ಆಗುತ್ತೆ ...

* * * * *

ಡಿಸೆಂಬರ್ ತಿಂಗಳು. ಕ್ರಿಸ್‌ಮಸ್ ಸಂಭ್ರಮ. ಸಂದೇಶ ಬೀರಲು ಬೆಂಗಳೂರಿನಲ್ಲೊಂದು ಸಮಾ... ಎಂ.ಪಿ. ಪ್ರಕಾಶ್ ಅವರೂ ಒಬ್ಬ ಅತಿಥಿ. ... ಮಾತನಾಡುತ್ತಾ ಕ್ರಿಸ್ತನಿಗೆ **prodigal sons** ... ಉಡಾಳ ಮಕ್ಕಳನ್ನು ಕಂಡರೆ ಪ್ರೀತಿ ಅನ್ನುವ ಮ... ಹೇಳಿದರು. ಅದಕ್ಕೇ ಇರಬೇಕೇನೋ, ಎಲ್ಲ ಅವಮಾನ... ಸಹಿಸಿಕೊಂಡು ಕೆಟ್ಟು ಕುಲಗೆಟ್ಟು ಹೋಗಿ ದೇ... ಪ್ರೀತಿ ಪಾತ್ರವಾಗೋಣ ಅಂತ ಮಂತ್ರಿ ಪದವಿ ... ಹಿಡಿದುಕೊಂಡಿರೋದು!

ಅದು ಹಾಗಿರಲಿ. ಈ ಕಾರ್ಯಕ್ರಮ ... ವಾಹಿನಿಯಲ್ಲಿ ನೇರ ಪ್ರಸಾರ ಆಯಿತು. ಇದನ್ನು ಕು... ಪ್ರಶಂಸಿಸಿದ ಮಂತ್ರಿಗಳು ಇದಕ್ಕೆ ಕಾರಣಕರ್ತರಾದ ನಿ... ಮಹೇಶ್ ಜೋಷಿಯವರ ವರ್ಗಾವಣೆಗೆ ಹಲವು ... ಪತ್ರಗಳು ಬರಬಹುದು ಎಂದರು. ಸಭೆಯಲ್ಲೇ ... ಜೋಷಿಯವರು ಆನಂದ ತುಂದಿತರಾದರು!

ಒಂದು ಅನುಮಾನ. ಕೇಂದ್ರದಲ್ಲಿ ಸೋನಿಯಾ ... ಹಿಡಿತ ಇರುವುದರಿಂದ ಅವರನ್ನು ಸಂತೃಪ್ತಿಗೊ... ನೇರ ಪ್ರಸಾರ ಮಾಡಿಲಾಯಿತಾ? ಒಂದು ವೇಳೆ ಎ... ಸರ್ಕಾರ ಇದ್ದಿದ್ದರೆ ನೇರ ಪ್ರಸಾರ ಮಾಡುವ ಧೈ... ತೋರುತ್ತಿದ್ದರಾ ಜೋಷಿಯವರು!?

-ಎಚ್.ಎಲ್. ಕೇಶವಮೂ...

ಎಬಿವಿಪಿಗಳೇ ನಿಜವಾದ ಭಯೋತ್ಪಾದಕರು


ನಕ್ಸಲರ ಹಾದಿಯನ್ನು ಸಮರ್ಥಿಸದೆ ಅದರ ಹುಟ್ಟಿದ ಮೂಲವಿರುವುದು ಅಸಮಾನತೆಯಲ್ಲಿ ಮತ್ತು ಆ ಅಸಮಾನತೆಯನ್ನು ಹೊಡೆದೋಡಿಸಬೇಕು ಎಂಬುದು ಗೌರಿಯವರ ಸ್ಪಷ್ಟ ನಿಲುವಾಗಿದ್ದರೂ ಅವರನ್ನು ನಕ್ಸಲರ ಪರ ಎಂದು ಬಿಂಬಿಸಲಾಗುತ್ತಿರುವುದು ವಿಪರ್ಯಾಸ. ಸಾಹಿತ್ಯ ಸಮ್ಮೇಳನದಲ್ಲಿ ಕಲ್ಕುಳಿ ವಿಠಲ ಹೆಗಡೆ ಮತ್ತು ಗೌರಿಯವರ ವಿರುದ್ಧ ನಡೆದ ಘಟನೆಗಳೆಲ್ಲವೂ ಯಡಿಯೂರಪ್ಪನವರ **pre planned** ಚಿತಾವಣೆಯಿಂದಲೇ ನಡೆದಿರುವುದು. ಗೋಷ್ಠಿ ನಡೆಯಲು ಅನುವು ಮಾಡಿಕೊಟ್ಟ ಚಂಪಾರವರಿಗೆ ಅಭಿನಂದನೆಗಳು.

ಈ ಬಿಜೆಪಿ, ಆರ್‌ಎಸ್‌ಎಸ್, ಭಜರಂಗದಳ, ವಿಎಚ್‌ಪಿ, ಎಬಿವಿಪಿ ಮನೆಹಾಳು ಪುಂಡರುಗಳಿಗೆ ಒಂದು ವಿಷಯ ಜ್ಞಾಪಕದಲ್ಲಿರಲಿ. ಲಂಕೇಶ್ ಈಗಿಲ್ಲ, ಆದರೆ ಅವರು ರೂಪಿಸಿರುವ ಜಾಣ-ಜಾಣೆಯರು ಸಾವಿರಾರು ಇದ್ದಾರೆ. ಲಂಕೇಶರ ಆದರ್ಶದಲ್ಲೇ ಗೌರಿಯವರು ಪತ್ರಿಕೆ ನಡೆಸುತ್ತಿರುವುದರಿಂದ ನಾವೆಲ್ಲರೂ ಕಟ್ಟಾ ಗೌರಿ ಅಭಿಮಾನಿಗಳಾಗಿದ್ದೇವೆ. ಗೌರಿಯವರಿಗೆ ಆಗುವ ನೋವು ನಮ್ಮೆಲ್ಲರ ನೋವು ಕೂಡ.

ಇಲ್ಲಿ ಮುಸ್ಲಿಮರು, ಕ್ರಿಶ್ಚಿಯನ್ನರು, ದಲಿತರ ಬಗ್ಗೆ ಹಿಂದೂಗಳ ಮನಸ್ಸುಗಳನ್ನು ಕೆಡಿಸುತ್ತಿದ್ದರೆ, ನಮ್ಮಂತಹ ಮರಿ ಲಂಕೇಶ್‌ಗಳು ಮನಸ್ಸುಗಳನ್ನು ಕಟ್ಟುತ್ತಿರುತ್ತಾರೆ. ಮನಸ್ಸುಗಳನ್ನು ಕಟ್ಟುವ ಕೆಲಸದಷ್ಟು ಕಷ್ಟ, ಪುಣ್ಯವಾದ ಕೆಲಸ ಜಗತ್ತಿನಲ್ಲಿ ಬೇರೊಂದಿಲ್ಲ. ಹಾಗೆಯೇ ಮನಸ್ಸುಗಳನ್ನು ಕೆಡುವುವ ಕೆಲಸದಷ್ಟು ಸುಲಭ, ನೀಚವಾದ ಕೆಲಸ ಬೇರೊಂದಿಲ್ಲ.

-ಯೋಗೀಶ್ ಸೂರಪ್ಪ, ಹಾಸನ

73ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಂಘ ಪರಿವಾರದ ಮಂಗಗಳು ನಡೆಸಿದ ಪುಂಡಾಟ ಕಂಡು ದಿಗ್ಭ್ರಮೆಯಾಗಿದೆ. ಲಂಕೇಶ್, ತೇಜಸ್ವಿ, ಅನಂತಮೂರ್ತಿಯವರಂಥ ಪ್ರಗತಿಪರ ಚಿಂತನೆಯ ಬರಹಗಾರರ ತವರೂರಾದ ಶಿವಮೊಗ್ಗ ಜಿಲ್ಲೆಯಲ್ಲಿ ಚೆಡ್ಡಿಗಳ ಆರ್ಭಟ ಮೇರೆ ಮೀರಿರುವುದು ಕಳವಳಕ್ಕೀಡು ಮಾಡಿದೆ. ಹಿಂದೊಮ್ಮೆ ನೀವು ಆತಂಕಪಟ್ಟಂತೆ ಫ್ಯಾಸಿಸ್ಟ್ ಶಕ್ತಿಗಳು ಪ್ರಜಾಸತ್ತೆಯನ್ನು ಅತಿಕ್ರಮಿಸಿದರೆ ಸೃಷ್ಟಿಯಾಗಬಹುದಾದ ಅರಾಜಕತೆ, ಅವಘಡಗಳು ಒಂದೊಂದಾಗಿ ಶುರುವಾಗಿದೆ. ಇಂಥ ಸೂಕ್ಷ್ಮ ಸನ್ನಿವೇಶದಲ್ಲಿ ಎಲ್ಲ ಪ್ರಗತಿಪರರು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಸಮಾಜದಲ್ಲಿ ಸೌಹಾರ್ದ ವಾತಾವರಣ ಉಂಟು ಮಾಡಲು ಒಗ್ಗೂಡಬೇಕಿದೆ. ಈ ಒಗ್ಗೂಡುವಿಕೆ ಅರ್ಥಪೂರ್ಣವೂ, ಫಲಪ್ರದವೂ ಆಗಲು ಸಾಧ್ಯ.



ಸಾಹಿತ್ಯ ಸಮ್ಮೇಳನದ ವೇದಿಕೆಯನ್ನು ತನ್ನಪ್ಪನ ಮನೆಯ ಜಹಗೀರು ಎಂಬಂತೆ ಭಾವಿಸಿ ಅಭಿಪ್ರಾಯಭೇದಗಳ ಹರಣಕ್ಕೆ ಮುಂದಾದ ಅವಿವೇಕಿ ಯಡಿಯೂರಪ್ಪ ಫ್ಯಾಸಿಸ್ಟ್ ಶಕ್ತಿಗಳ ವಕ್ತಾರನಂತಿದ್ದಾನೆ. ಪ್ರಜಾಪ್ರಭುತ್ವದಲ್ಲಿ ಅಭಿಪ್ರಾಯಭೇದ, ಸದಭಿಪ್ರಾಯಕ್ಕೆ ಮನ್ನಣೆಯಿದ್ದಾಗ ಮಾತ್ರ ಸಮಾಜದಲ್ಲಿ ಆರೋಗ್ಯಕರ ಪರಿಸರ ಏರ್ಪಡಲು ಸಾಧ್ಯ ಎನ್ನುವುದನ್ನು ಯಡಿಯೂರಪ್ಪನಂಥ ತಿಳಿಗೇಡಿ ರಾಜಕಾರಣಿ ಆದಷ್ಟು ಬೇಗ ಅರಿಯಬೇಕಿದೆ.

ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಭ್ರಷ್ಟಾಚಾರದಲ್ಲಿ ಮುಳುಗಿ, ಅದನ್ನು ಮರೆಮಾಚಲು ಶಾಲೆ-ಕಾಲೇಜಿನ ಪಠ್ಯಕ್ರಮಗಳ ಕೇಸರೀಕರಣಕ್ಕೆ ಮುಂದಾಗಿ ಕೊನೆಗೆ ಅಧಿಕಾರದಿಂದ ಹೊರದೂಡಲ್ಪಟ್ಟ NDA ಸರ್ಕಾರದಂತೆ, ಸಾಹಿತ್ಯವನ್ನೂ ಕೇಸರಿಮಯಗೊಳಿಸಲು ಹೊರಟಿರುವ ಕರ್ನಾಟಕದ ಕೋ-ಜಾ ಸರ್ಕಾರ ಮುಂದೊಂದು ದಿನ ಜನಮಾನಸದಿಂದಲೇ ಅಳಿಸಿ ಹೋಗಲಿದೆ. ಇದೇ ದಿಕ್ಕಿನಲ್ಲಿ ಎಲ್ಲ ಪ್ರಗತಿಪರರ ಪ್ರಯತ್ನ ನಡೆಯುವಂತಾಗಲಿ.

-ಸದಾನಂದ ಸಿ. ಗಂಗನಬೀಡು, ಬೆಂಗಳೂರು


73ನೇ ಸಾಹಿತ್ಯ ಸಮ್ಮೇಳನದಲ್ಲಿ ಗೌರಿ ಲಂಕೇ... ಮತ್ತು ವಿಠಲ ಹೆಗಡೆಯವರಿಗೆ ಸಮ್ಮೇಳನವನ್ನುದ್ದೇ... ಮಾತನಾಡಲು ಅವಕಾಶ ನೀಡಬಾರದೆಂದು ಕೋಮು... ವಾದಿ ಸಂಘ ಪರಿವಾರದ ಎಬಿವಿಪಿ ಪುಂಡರು ವೇದಿ... ನುಗ್ಗಿ ದಾಂಧಲೆ ನಡೆಸಿದ್ದನ್ನು ಸಮತಾ ಸೈನಿಕದಳ ವಿದ್ಯಾ... ಒಕ್ಕೂಟ ಖಂಡಿಸುತ್ತದೆ. ಗೌರಿ ಲಂಕೇಶ್ ಮ... ಕಲ್ಕುಳಿ ವಿಠಲ ಹೆಗಡೆ ತಮ್ಮ ಅನಿಸಿಕೆಗಳ... ಬರೆಯುವವರಾಗಿದ್ದಾರೆ. ಮತ್ತು ಅದೇ ರೀತಿ... ಹೋರಾಟಗಳಲ್ಲಿ ನಂಬಿಕೆಯಿಟ್ಟವರಾಗಿರುತ್ತಾರೆ. ಸಾ... ಜಿಕ ಅವ್ಯವಸ್ಥೆಯನ್ನು ಖಂಡಿಸುತ್ತಾ ಸರಿಸಮಾನತೆಯ... ಪ್ರತಿಪಾದಿಸುತ್ತಾ ಬಂದಿರುವುದೇ 'ನಕ್ಸಲರ ಪರ' ಎ... ಧೋರಣೆಗೆ ಕಾರಣವಾಗಿರುವುದನ್ನು ಒಪ್ಪಲು ಸಾಧ್ಯ... ಇಲ್ಲ. ಕೋಮುವಾದಿಗಳು ಶತಶತಮಾನಗಳಿಂದ ಉ... ಕೊಂಡು ಬಂದಿರುವ ಅಸ್ಪೃಶ್ಯತೆ, ಅಪಮಾನ, ದೌಜ... ದಬ್ಬಾಳಿಕೆಯಂತಹ ಕ್ರೌರ್ಯ ಸಂಸ್ಕೃತಿಯ... ಇಂದಿಗೂ ಉಳಿಸಿಕೊಂಡು ಬ... ದ್ದಾರೆನ್ನಲು ಸ್ಪಷ್ಟ ನಿದರ್ಶನವೆಂದರೆ ಅ... ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ದಾಂ... ಗೌರಿ ಲಂಕೇಶ್ ಮತ್ತು ಕಲ್ಕುಳಿ ವಿಠಲ ಹೆ... ಯಂತಹ ಪ್ರಗತಿಪರ ಚಿಂತಕರ ಬೆಂಬಲಕ್ಕೆ ಸಮ... ಸೈನಿಕದಳ ವಿದ್ಯಾರ್ಥಿ ಒಕ್ಕೂಟ ನಿಲ್ಲುತ್ತದೆ. ನಿಜವಾ... ಭಯೋತ್ಪಾದಕರು ಎಬಿವಿಪಿ ಮತ್ತು ಅವರ ಸ... ಪರಿವಾರದವರೇ!

-ಜಿ. ಶ್ರೀನಿವಾಸ್, ರಾಜಾಧ್ಯಕ್ಷರು, *SSD*

ಅಪ್ಪಾಜಿಯ ಮಾಂತ್ರಿಕ ಶಕ್ತಿ

ಕಿಕ್ಕಿರಿದ ಜನಸಂದಣಿಯ ನಡುವೆಯೂ ನಾವಿಬ್ಬರೂ ಅಭಿಮಾನಿಗಳ ರಕ್ಷಣೆಯಲ್ಲಿ ಸುರಕ್ಷಿತವಾಗಿ ಥಿಯೇಟರನ್ನು ಹೊಕ್ಕೆವು. ಅಪ್ಪಾಜಿಗೆ ಜನಸಮೂಹವನ್ನು ನಿಯಂತ್ರಿಸುವ ಮತ್ತು ಸಮ್ಮೋಹಿಸುವ ಮಾಂತ್ರಿಕ ಶಕ್ತಿ ಇದೆ ಎಂಬುದು ನನಗೆ ಗೊತ್ತಾಗಿದ್ದೇ ಅವತ್ತು.

ಅಪರ್ಣಾ ಥಿಯೇಟರ್ ಹೊರಗಡೆ ಅಪ್ಪಾಜಿ ಮತ್ತು ನಾನು ಜನಜಂಗುಳಿಯಲ್ಲಿ ಸಿಕ್ಕಿಹಾಕಿಕೊಂಡೆವು. ಅಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪೊಲೀಸರಿದ್ದರೂ, ಅವರಿಗಿಂತ ನೂರು ಪಟ್ಟು ಹೆಚ್ಚು ಅಭಿಮಾನಿಗಳು ಜಮಾಯಿಸಿದ್ದರು. ನಾನು ಕಾರಿನಿಂದ ಇಳಿದಾಕ್ಷಣ ಒಂದು ಗುಂಪು "ಶಿವರಾಜ್‌ಕುಮಾರ್ ಕಿ ಜೈ" ಎಂದು ಕೂಗುತ್ತಾ ನನ್ನ ಕಡೆಗೆ ಓಡಿಬಂತು. ಆ ಗುಂಪು ಬರುತ್ತಿದ್ದ ರಭಸವನ್ನು ನೋಡಿ "ಏನು ಮಾಡೋಣ?" ಎಂದು ಅಪ್ಪಾಜಿಯವರನ್ನು ಕೇಳಿದೆ. ಅಪ್ಪಾಜಿಯನ್ನು ಸುರಕ್ಷಿತವಾಗಿ ಥಿಯೇಟರ್ ಒಳಗಡೆ ಕರೆದುಕೊಂಡು ಹೋಗುವುದು ಹೇಗೆ ಎಂದು ಚಿಂತಿಸಿದೆ. ನನ್ನನ್ನು ನೋಡಿ ಎಕ್ಸೈಟ್ ಆಗಿದ್ದ ಜನ ಇನ್ನು ಅಪ್ಪಾಜಿಯವರನ್ನು ಕಂಡರೆ ಏನಾಗಬಹುದು? ಥಿಯೇಟರ್ ಒಳಗಡೆ ಮಾತ್ರ 'ರಣರಂಗ'ವಲ್ಲ, ಥಿಯೇಟರ್ ಹೊರಗೂ 'ರಣರಂಗ'ವಾಗಲಿದೆ ಅಂದುಕೊಂಡೆ.





ಆದರೆ ಇಂತಹ ಅಭಿಮಾನಿಗಳ ದಂಡುಗಳನ್ನು ಸಾಕಷ್ಟು ಎದುರಿಸಿದ್ದ ಅಪ್ಪಾಜಿ ಧೃತಿಗೆಡಲಿಲ್ಲ. "ಅವರೆಲ್ಲಾ ನಮ್ಮ ಅಭಿಮಾನಿ ದೇವರುಗಳು ಕಂದಾ. ಅವರಿಗೆ ನಮ್ಮನ್ನು ನೋಡುವುದೆಂದರೆ ತುಂಬ ಇಷ್ಟ. ಅವರೇನೂ ಮಾಡುವುದಿಲ್ಲ..." ಎಂದು ಹೇಳುತ್ತಾ ಕಾರಿನಿಂದ ಇಳಿದೇಬಿಟ್ಟರು. ಆಗ ಅಪರ್ಣಾ ಥಿಯೇಟರ್ ಸುತ್ತ-ಮುತ್ತ ಜಮಾಯಿಸಿದ್ದ ಜನರೆಲ್ಲಾ ಹುಚ್ಚರಂತೆ ಕುಣಿದಾಡುತ್ತಾ "ಡಾ. ರಾಜ್‌ಗೆ ಜೈ, ಅಣ್ಣಾವ್ರಿಗೆ ಜೈ" ಎಂದು ಘೋಷಣೆಗಳನ್ನು ಕೂಗಲಾರಂಭಿಸಿದರು. ಅಪ್ಪಾಜಿ ತಮ್ಮ ಎಂದಿನ ಶೈಲಿಯಲ್ಲಿ ಬಲಗೈಯನ್ನು ಮೇಲೆತ್ತಿ ಎಲ್ಲರಿಗೂ ವಿಶ್ ಮಾಡುತ್ತಲೇ ಇದ್ದರು. ಜನಸಮೂಹ ನಮ್ಮ ಕಾರಿನತ್ತ ಧಾವಿಸಿ ಬರುತ್ತಿತ್ತು. ಆಗ ಕ್ಷಣ ಮಾತ್ರದಲ್ಲಿ ಹಲವು ಅಭಿಮಾನಿಗಳು ನಮಗೆ ರಕ್ಷಣೆ ನೀಡಿದರು, ಯಾರೂ ನಮ್ಮನ್ನು ಮುಟ್ಟದಂತೆ ನಮ್ಮ ಸುತ್ತ ಮಾನವ ಸರಪಳಿಯನ್ನು ನಿರ್ಮಿಸಿದರು. ಕೆಲವೇ ನಿಮಿಷಗಳಿಗೆ ಯಾವುದು ಅಸಾಧ್ಯ ಎಂದು ನಾನು ಆಲೋಚಿಸಿದ್ದೆನೋ ಅದು ಎಷ್ಟು ಸುಲಭವಾಗಿ ನಡೆದು ಹೋಯಿತೆಂದರೆ, ನಾವಿಬ್ಬರೂ ಅಭಿಮಾನಿಗಳ ರಕ್ಷಣೆಯಲ್ಲಿ ಸುರಕ್ಷಿತವಾಗಿ ಥಿಯೇಟರನ್ನು ಹೊಕ್ಕಿದೆವು. ಅಪ್ಪಾಜಿಗೆ ಜನಸಮೂಹವನ್ನು ನಿಯಂತ್ರಿಸುವ ಮತ್ತು ಸಮ್ಮೋಹಿಸುವ ಮಾಂತ್ರಿಕ ಶಕ್ತಿ ಇದೆ ಎಂಬುದು ನನಗೆ ಗೊತ್ತಾಗಿದ್ದೇ ಅವತ್ತು.

ಸಿನಿಮಾ ನೋಡಿದ ನಂತರ "ಆ್ಯಂಗ್ರಿಯಂಗ್‌ಮ್ಯಾನ್ ಪಾತ್ರದಲ್ಲಿ ನೀನು ತುಂಬಾ ಚೆನ್ನಾಗಿ ಮಾಡಿದ್ದೀಯ" ಎಂದು ಅಪ್ಪಾಜಿ ನನ್ನನ್ನು ಕೊಂಡಾಡಿದರು. ಅಪ್ಪಾಜಿಯವರಂತೆ ಇತರರೂ ನನ್ನನ್ನು ಆ ಚಿತ್ರದಲ್ಲೂ ಮೆಚ್ಚಿದರು. ಇಷ್ಟೆಲ್ಲ ಯಾಕೆ ಹೇಳುತ್ತಿದ್ದೇನೆಂದರೆ, ಆ ಚಿತ್ರದಲ್ಲಿ ಮೊದಲೇ ಹೇಳಿದಂತೆ ಲಾಜಿಕ್‌ಗೆ ಪ್ರಾಮುಖ್ಯತೆ ಇರಲಿಲ್ಲ. ಇದನ್ನು ಜನರು ಸ್ವೀಕರಿಸುತ್ತಾರೋ ಇಲ್ಲವೋ ಎಂಬ ಅಂಜಿಕೆ ನನ್ನನ್ನು ಕಾಡುತ್ತಿತ್ತು. ಆರಂಭದಿಂದಲೂ ಕಾದಂಬರಿ ಆಧಾರಿತ ಚಿತ್ರಗಳನ್ನೇ ಮಾಡುತ್ತಾ ಬಂದಿದ್ದ ನನಗೆ ಈ ಚಿತ್ರ ಆ ದೃಷ್ಟಿಯಿಂದ ಒಂದು ಪುಟ್ಟ ಅಗ್ನಿಪರೀಕ್ಷೆಯಾಗಿತ್ತು.

'ರಣರಂಗ' ಚಿತ್ರಕ್ಕೆ ರಾಜ್ಯದ ಎಲ್ಲಾ ಕಡೆಯಲ್ಲೂ ಅದ್ಭುತವಾದ ಓಪನಿಂಗ್ ಸಿಕ್ಕಿತ್ತು. ಆಗ ಅಂತಹ ಓಪನಿಂಗ್ ಬೇರೆ ಯಾವುದೇ ಚಿತ್ರಕ್ಕೆ ಸಿಕ್ಕಿರಲಿಲ್ಲ. ಹೀಗಾಗಿ 'ರಣರಂಗ' ಸೂಪರ್‌ಹಿಟ್ ಚಿತ್ರವಾಗುತ್ತದೆ ಎಂದು ಮೊದಲ ವಾರವೇ ಗೊತ್ತಾಗಿತ್ತು. ಹಂಸಲೇಖಾ ಅವರ ಹಾಡುಗಳಂತೂ ಸೂಪರ್ ಹಿಟ್ ಆದಾಗ ಚಿತ್ರವೂ ಹಿಟ್ ಆಗುವ ಸೂಚನೆ ಸಿಕ್ಕಿತ್ತು.

ಈ ಚಿತ್ರದಲ್ಲಿ ಆ್ಯಂಗ್ರಿ ಯಂಗ್‌ಮ್ಯಾನ್ ಪಾತ್ರವನ್ನು ನಿರ್ವಹಿಸಿದ ನನ್ನನ್ನು "ಶಿವಣ್ಣ ನಿನ್ನಿಂದ ಫುಲ್ ಲೆಂತ್ ಕಾಮಿಡಿ ನಿರ್ವಹಿಸಲು ಸಾಧ್ಯವಾಗುತ್ತಾ" ಎಂದು ನಿರ್ದೇಶಕ ದಿನೇಶ್‌ಬಾಬು ಕೇಳಿದರು. ಆಗ "ನೀನು ಹಾಸ್ಯ ಪಾತ್ರವನ್ನು ಚೆನ್ನಾಗಿ ನಿರ್ವಹಿಸಬಲ್ಲೆ ಎಂಬ ಧೈರ್ಯ ನಮಗಿದೆ" ಎಂದು ಅಪ್ಪಾಜಿ ಮತ್ತು ಅಮ್ಮ ನನ್ನನ್ನು ಹುರಿದುಂಬಿಸಿದರು. ಆಗ ಆರಂಭವಾಗಿದ್ದೇ 'ಇನ್ಸ್‌ಪೆಕ್ಟರ್ ವಿಕ್ರಂ' ಚಿತ್ರ.






ದಿನೇಶ್ ಬಾಬು ಬಗ್ಗೆ ನಾನು ಸಾಕಷ್ಟು ಕೇಳಿದ್ದೆ. ಅವರು ನಿರ್ದೇಶಿಸಿದ, ವಿಷ್ಣು ಅಂಕಲ್ ನಟಿಸಿ, ಯಶಸ್ವಿಯಾಗಿದ್ದ 'ಸುಪ್ರಭಾತ' ಚಿತ್ರವನ್ನು ನಾನು ನೋಡಿದ್ದೆ. ವಿಷ್ಣು ಅಂಕಲ್ ತುಂಬಾ ಚೆನ್ನಾಗಿ ಪಾತ್ರ ನಿರ್ವಹಿಸಿದ್ದರು. ದಿನೇಶ್ ಬಾಬು ಅವರ ಛಾಯಾಗ್ರಹಣದ ಕೆಲಸ ಮತ್ತು ನಿರೂಪಣಾ ಶೈಲಿ ನನಗೆ ಇಷ್ಟವಾಗಿತ್ತು. ಹೀಗಾಗಿ ದಿನೇಶ್‌ಬಾಬು ಚಿತ್ರದಲ್ಲಿ ನಾನ್ಯಾಕೆ ನಟಿಸಬಾರದು ಎಂದು 'ಇನ್ಸ್‌ಪೆಕ್ಟರ್ ವಿಕ್ರಂ' ಅನ್ನು ಒಪ್ಪಿಕೊಂಡೆ.

"ಈ ಚಿತ್ರವನ್ನು ಕೇವಲ 21 ದಿನಗಳಲ್ಲಿ ಮುಗಿಸುತ್ತೇನೆ" ಎಂದು ದಿನೇಶ್ ಬಾಬು ಹೇಳಿದಾಗ "ಅಷ್ಟು ಸ್ವಲ್ಪ ಸಮಯದಲ್ಲಿ ಒಂದು ಸಿನಿಮಾವನ್ನು ಮುಗಿಸಲು ಸಾಧ್ಯವೇ? ಅದೂ ಐದು ಹಾಡುಗಳು, ನಾಲ್ಕು ಫೈಟಿಂಗ್ ದೃಶ್ಯಗಳು ಇವೆಯಲ್ಲ" ಎಂದು ಅಪ್ಪಾಜಿ ಆಶ್ಚರ್ಯ ವ್ಯಕ್ತಪಡಿಸಿದರು. ಆಗ ನಮ್ಮ ಮನೆಯವರೆಲ್ಲ ಕುಳಿತುಕೊಂಡು ಮೊದಲಿಗೆ ಕತೆಯನ್ನು ಕೇಳೋಣ ಎಂಬ ತೀರ್ಮಾನಕ್ಕೆ ಬಂದೆವು. ದಿನೇಶ್‌ಬಾಬು ಎಂದಿನಂತೆ ತಮ್ಮದೇ ಆದ ಶೈಲಿಯಲ್ಲಿ ಇಂಗ್ಲಿಷ್‌ನಲ್ಲಿ ಕತೆಯನ್ನು ನಿರೂಪಿಸುತ್ತಾ ಹೋದರು. ಅವರು ನಿರೂಪಿಸಿದ ಶೈಲಿಗೇ ಮಾರುಹೋದ ನನ್ನ ಚಿಕ್ಕಪ್ಪ ವರದಪ್ಪನವರು "ಓಕೆ. ಈ ಚಿತ್ರ ನಿನಗೆ ಕರೆಕ್ಟಾಗಿ ಸೂಟ್ ಆಗುತ್ತೆ, ನೀನು ಮಾಡು" ಎಂದು ಆದೇಶ ನೀಡಿದರು.

ನಮ್ಮ ಸಂಸ್ಥೆಯಲ್ಲಿ ಚಿಕ್ಕಪ್ಪ ಓಕೆ ಅಂದಮೇಲೆ ಯಾರೂ ಅವರ ನಿರ್ಣಯವನ್ನು ಪ್ರಶ್ನಿಸುತ್ತಲೇ ಇರಲಿಲ್ಲ. ಅಷ್ಟೇ ಅಲ್ಲ, ಅವರ ನಿರ್ಣಯ ಯಾವತ್ತೂ ಫೇಲ್ಯೂರ್ ಆಗಿದ್ದೇ ಇಲ್ಲ. ಹೀಗೆ 21 ದಿನದಲ್ಲಿ 'ಇನ್ಸ್‌ಪೆಕ್ಟರ್ ವಿಕ್ರಂ' ಮುಗಿಸಲು ನಾವು ಹೊರಟೆವು.



ದಿನೇಶ್ ಬಾಬು ಶಿಸ್ತಿನ ಮನುಷ್ಯ ಎಂಬುದು ಎಲ್ಲರಿಗೂ ಗೊತ್ತು. ಅವರು ಬೆಳಗಿನ ಜಾವ ಆರು ಗಂಟೆಗೇ ಮೊದಲ ಶಾಟ್‌ಅನ್ನು ಚಿತ್ರೀಕರಿಸುತ್ತಾರೆ. ಅಂದರೆ ನಾಲ್ಕು ಗಂಟೆಗೆ ನಾವೆಲ್ಲಾ ಎದ್ದು ಸ್ನಾನ-ಗೀನ ಮಾಡಿ ಮೇಕಪ್ ಮಾಡಿಕೊಂಡು ಚಿತ್ರೀಕರಣದ ಸ್ಥಳದಲ್ಲಿ ಹಾಜರಿರಬೇಕು. ಈ ರೀತಿ ಶಿಸ್ತನ್ನು ಬಹಳ ಹಿಂದೆಯೇ ನನ್ನ ಅಪ್ಪಾಜಿ ನನಗೆ ಕಲಿಸಿದ್ದರಿಂದ ನಾನು ಬೆಳಗಿನ ಜಾವ ಐದೂವರೆಗೇ ಮೇಕಪ್ ಸಹಿತ ಹಾಜರ್ ಆಗಿರುತ್ತಿದ್ದೆ.

ಬೆಳಗಿನ ಜಾವ ಆರರಿಂದ ಹನ್ನೊಂದು ಗಂಟೆಯವರೆಗೆ ಶೂಟಿಂಗ್. ಆನಂತರ ಲಂಚ್‌ಬ್ರೇಕ್. ಮತ್ತೆ ಚಿತ್ರೀಕರಣ ಎರಡಕ್ಕೆ ಆರಂಭವಾದರೆ ಏಳು ಗಂಟೆಗೆ ಮುಗಿಯುತ್ತಿತ್ತು. ಈ ತರಹ ಕೆಲಸ ಮಾಡಿದ್ದರಿಂದ ನಾವು ಅಂದುಕೊಂಡಂತೆ ಕೇವಲ ಇಪ್ಪತ್ತೊಂದು ದಿನಗಳಲ್ಲಿ ಶೂಟಿಂಗ್ ಮುಗಿದುಹೋಯಿತು.

ಆ ಚಿತ್ರದಲ್ಲಿ ಖೈದಿ ತಪ್ಪಿಸಿಕೊಂಡು ಓಡಿಹೋಗುವ ದೃಶ್ಯವೊಂದಿತ್ತು. ಅದರ ಚಿತ್ರೀಕರಣಕ್ಕಾಗಿ ನಾವು ಮೈಸೂರಿನಿಂದ ಕೆಮ್ಮಣ್ಣುಗುಂಡಿಗೆ ಹೋಗಿದ್ದೆವು. ಅಲ್ಲಿ ಎರಡು ಹಾಡು ಮತ್ತು ಒಂದು ದೃಶ್ಯ. ಅಲ್ಲಿಂದ ಮತ್ತೆ ತಿಪಟೂರಿಗೆ ಬಂದೆವು. ಅಲ್ಲೊಂದೆರಡು ದೃಶ್ಯ. ಅಲ್ಲಿಂದ ಮತ್ತೆ ಬೆಂಗಳೂರು ಕಡೆಗೆ ಪ್ರಯಾಣ. ಒಂದು ಬಸ್ಸು ಮತ್ತು ಮೂರು ಕಾರುಗಳಲ್ಲಿ ನಾವು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ನಿತ್ಯವೂ ಹೋಗುತ್ತಿದ್ದುದು ನಮಗೆ ಒಂದು ರೀತಿಯಲ್ಲಿ ಸ್ಕೂಲ್ ಪಿಕ್‌ನಿಕ್ ಅನ್ನು ನೆನಪಿಸುತ್ತಿತ್ತು.

ಈ ಚಿತ್ರಕ್ಕಿಂತ ಮೊದಲೇ ರಾಘು ನಟಿಸಿದ 'ಚಿರಂಜೀವಿ ಸುಧಾಕರ' ಚಿತ್ರ ಬಿಡುಗಡೆಯಾಗಿತ್ತು. ಅದು ಬಾಕ್ಸಾಫೀಸಿನಲ್ಲಿ ಯಶಸ್ವಿಯಾಗಲಿಲ್ಲ. ಹೀಗಾಗಿ ನಮ್ಮ ಮನೆಯಲ್ಲಿ ಸ್ವಲ್ಪ ಆತಂಕ ಮಡುಗಟ್ಟಿತ್ತು. ರಾಘು ಚಿತ್ರರಂಗಕ್ಕೆ ಎಂಟ್ರಿ ಆದಾಗ ನಮ್ಮ ಮನೆಯಲ್ಲಿ ಎಂತಹ ವಾತಾವರಣವಿತ್ತು, ಆನಂತರ ಏನಾಯಿತು ಎಂಬುದನ್ನು ನಾನು ಹೇಳಿದ ನಂತರವೇ 'ಇನ್ಸ್‌ಪೆಕ್ಟರ್ ವಿಕ್ರಂ' ವಿಷಯಕ್ಕೆ ಬರೋಣ.

(ಮುಂದುವರೆಯುವುದು)

R.B.P. LANKESH, Kannada Weekly   Price Rs. 10/-   10-1-2007   RNI No. KARKAN2005/14648   Regd.No.KA/BG(S)/2036/20



ಒಂದು ವರ್ಷ ಗೀಯ ಗೀಯ!

ಅಂತೂ ಕೊನೆಗೂ ರಿಲೀಸ್ ಆಗೇ ಬಿಟ್ಟಿದೆ 'ಗೀಯ ಗೀಯ' ಎಂಬ ಸಿನಿಮಾ. ಸುಮಾರು ಒಂದು ವರ್ಷದಿಂದ ಪೇಪರುಗಳ ಜಾಹೀರಾತುಗಳಲ್ಲಿ 'ಸದ್ಯದಲ್ಲೇ ಬಿಡುಗಡೆ' ಅನ್ನೋದನ್ನು ಓದಿ ಓದಿ ಪ್ರೇಕ್ಷಕ ಸುಸ್ತಾಗಿದ್ದ. ಸುಸ್ತಾದವರು ಥಿಯೇಟರ್ ಕಡೆ ಹೋಗೋದು ಕಷ್ಟವೇ.

'ಗೀಯ ಗೀಯ'ದ ದಾಖಲೆ ಏನೆಂದರೆ, ಅದು ವರ್ಷದ ಎಲ್ಲ ಧಾರ್ಮಿಕ ಹಬ್ಬ ನಾಡಹಬ್ಬ ಇತ್ಯಾದಿಗಳಂದು 'ಪ್ರೇಕ್ಷಕರಿಗೆ ಶುಭಾಶಯಗಳು' ಎಂಬ ಜಾಹೀರಾತು ನೀಡುತ್ತಲೇ ಬಂದಿದೆ!

ಒಂದು ವರ್ಷದ ಹಳೆಯ ಚಿತ್ರ..... ವರ್ಷದಲ್ಲಿ ಕಾಲ ತುಂಬ ಬದಲಾಗಿದೆ... ಗೀಯ ಗೀಯಕ್ಕೆ ಹೊಯ್ ಹೊಯ್ ಅಂತಾನೇನೋ ಪ್ರೇಕ್ಷಕ!





ರಂಗ ನಾಯಕಿ ಮತ್ತೆ ಚಿತ್ರರಂಗಕ್ಕೆ

ಸುಮಾರು ಎರಡು ದಶಕಗ
ಹಿಂದೆ ಒಳ್ಳೊಳ್ಳೆಯ ಪಾತ್ರಗಳಿಂದ
ಕೆಟ್ಟ ವಿವಾದಗಳಿಂದಲೂ ಸುದ್ದಿಯ
ಅಭಿನೇತ್ರಿ ಆರತಿ 2007ರಲ್ಲಿ ಮು
ಬಣ್ಣ ಹಚ್ಚ ನಟಿಸಲಿದ್ದಾರೆ. ಮುಸ್ಲಿ
ಮಹಿಳೆಯೊಬ್ಬರು ನಿರ್ದೇಶಿಸಲಿರು
ಮಹಿಳಾ ಪ್ರಧಾನವಾದ ಕಲಾತ್ಮಕ
ಇದಾಗಿರುತ್ತದಂತೆ. ಅಂದಹಾಗೆ,
ಚಿತ್ರದ ಮುಖಾಂತರ ರಾಷ್ಟ್ರ ಪ್ರಶಸ್ತಿ
ಮೇಲೆ ಆರತಿ ಕಣ್ಣು ಇಟ್ಟಿರುವಂತೆ
ಎಂಬುದು ಮಾತ್ರ ಕೇವಲ ತರ್ಕ
ಎಂಬ ಮಾತೂ ಇದೆ!



ರಜನಿ ತೆಕ್ಕೆಗೆ ರಕ್ಷಿತಾ -ಪ್ರೇಮ್!

ಪ್ರೇಂ ಮತ್ತು ರಕ್ಷಿತಾ ಮದುವೆಯಾದ ನಂತರ ಏನು ಮಾಡುತ್ತಾರೆ? ಎಂಬ ಪ್ರಶ್ನೆಗೆ ಇಲ್ಲಿದೆ ಉತ್ತರ.

ಅವರಿಬ್ಬರು ಪತಿ-ಪತ್ನಿಯಾದ ನಂತರ ಚಿತ್ರವೊಂದನ್ನು ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದಾರೆ. ಇದನ್ನು ರಕ್ಷಿತಾ ನಿರ್ಮಿಸಲಿದ್ದು, ಪ್ರೇಂ ನಿರ್ದೇಶಿಸಲಿದ್ದಾರೆ ಎಂಬುದು ಅಷ್ಟು ತಾಜಾ ವಿಷಯವಲ್ಲ. ಯಾವುದು ತಾಜಾ ವಿಷಯವೆಂದರೆ, ಇವರು ಮಾಡಲು ಹೊರಟಿರುವುದು ಕನ್ನಡ ಚಿತ್ರವನ್ನಲ್ಲ, ಬದಲಾಗಿ ತಮಿಳು ಚಿತ್ರವನ್ನು!

ಅದಕ್ಕಿಂತಲೂ ಮುಖ್ಯವಾದ ವಿಷಯವೇನೆಂದರೆ, ಈ ತಮಿಳು ಚಿತ್ರದಲ್ಲಿ ಕನ್ನಡದ ನಟ ನಾಯಕನ ಪಾತ್ರ ವಹಿಸಲಿರುವುದು. ಅದು ಯಾರೆಂದು ಗೆಸ್ ಮಾಡಬಲ್ಲಿರಾ?


ಕನಕಪುರದ ಮೊಮ್ಮಗ, ಬೆಂಗಳೂರಿನ ಕಂಡಕ್ಟರ್, ತಮಿಳುನಾಡಿನ ಸೂಪರ್ ಸ್ಟಾರ್ ರಜನೀಕಾಂತ್!

ಬಿಚ್ಚಮ್ಮನ ಬಟ್ಟೆ ಬಜಾರಿಗೆ...!

ಬಾಲಿವುಡ್ಡಿನ ಬಿಚ್ಚಮ್ಮ ಮಲ್ಲಿಕಾ ಶೆರಾವತ್ ಬೆಂಗಳೂರಿನ ಬೀದಿಗಳಲ್ಲಿ ಕುಣಿದದ್ದನ್ನು ಇಲ್ಲಿನ ದಿನಪತ್ರಿಕೆಗಳು ರಂಗುರಂಗಾದ ಚಿತ್ರಗಳೊಂದಿಗೆ ವರದಿ ಮಾಡಿದವು. ಆದರೆ ಆಕೆ 'ಪ್ರೀತಿ ಯಾಕೆ ಭೂಮಿ ಮೇಲಿದೆ' ಚಿತ್ರದ ನಿರ್ಮಾಪಕ ಅಶ್ವಿನಿ ರಾಂಪ್ರಸಾದ್‌ಗೆ ಕೊಟ್ಟ ತಲೆನೋವಿನ ಬಗ್ಗೆ ಯಾರೂ ಬರೆಯಲೇ ಇಲ್ಲ ಪಾಪ!

ಆಗಿದ್ದೇನೆಂದರೆ, ಇಲ್ಲಿಗೆ ಬರುವ ಮುನ್ನ "ನಾನು ಪತ್ರಿಕೆಯವರೊಂದಿಗೆ ಮಾತನಾಡುವುದಿಲ್ಲ" ಎಂದು ಆಕೆ ಕಂಡೀಷನ್ ಹಾಕಿದ್ದಳಂತೆ. ಅದಕ್ಕೆ ರಾಂಪ್ರಸಾದ್ ಒಪ್ಪಿಕೊಂಡ ನಂತರವೇ ಆಕೆ ಸಹಿ ಹಾಕಿದಳಂತೆ. ಆದರೆ ಮೊದಲ ದಿನವೇ ಆಕೆಯ ಫೋಟೋಗಳು ಪತ್ರಿಕೆಗಳಲ್ಲಿ ಬಂದಾಕ್ಷಣ ಆಕೆ ಸಿಟ್ಟಾದಳಂತೆ. "ನಾನು ಈಗಲೇ ಮುಂಬೈಗೆ ಹಾರಿಹೋಗುತ್ತೇನೆ" ಎಂದು ಧಮಕಿ ಹಾಕಿದಳಂತೆ. ಪ್ರತಿ ದಿನ ಆಕೆಯನ್ನು ಸಮಾಧಾನ ಮಾಡುವುದೇ ರಾಂಪ್ರಸಾದ್ ಪಾಲಿಗೆ ದೊಡ್ಡ ಸಮಸ್ಯೆಯಾಗಿತ್ತಂತೆ.

ಅಂದಹಾಗೆ 'ತನನಂ ತನನಂ' ಚಿತ್ರದಲ್ಲಿ ರಕ್ಷಿತಾ ಹಾಕಿದ್ದ ಉಡುಪನ್ನು ಒಂದು ಲಕ್ಷಕ್ಕೂ ಹೆಚ್ಚು ರೂಪಾಯಿಗಳಿಗೆ ಅಭಿಮಾನಿಗಳು ಖರೀದಿಸಿದ್ದು (ಆ ಹಣವೆಲ್ಲ ಏಡ್ಸ್ ಪೀಡಿತ ಮಕ್ಕಳಿಗೆ ನೀಡಲಾಗಿದೆ) ರಾಂಪ್ರಸಾದ್‌ಗೆ ಸ್ಫೂರ್ತಿಯಾಗಿದೆ. ಆದ್ದರಿಂದಲೇ ತಮ್ಮ ಚಿತ್ರದಲ್ಲಿ ಮಲ್ಲಿಕಾ ಶೆರಾವತ್ ಹಾಕಿರುವ ಬಟ್ಟೆಗಳನ್ನು ಹರಾಜು ಹಾಕಲು ಅವರು ನಿರ್ಧರಿಸಿದ್ದಾರೆ. ಆದರೆ ಮಲ್ಲಿಕಾ ಶೆರಾವತ್ ಧರಿಸಿರುವ ತುಂಡು ಬಟ್ಟೆಗಳನ್ನು ಯಾರು ಖರೀದಿಸುತ್ತಾರೆ, ಯಾರು ಧರಿಸುವ ಧೈರ್ಯ ಹೊಂದಿದ್ದಾರೆ ಎಂಬ ಪ್ರಶ್ನೆಗಳಿಗೆ ರಾಂಪ್ರಸಾದ್ ಉತ್ತರಿಸುವರಾ?



ಇದು ಸಹೋದರರ ಸವಾಲ್!

ನೂರು ದಿನ ಪೂರೈಸಿರುವ 'ಜೊತೆಜೊತೆಯಲಿ' ಚಿತ್ರದ
ಬಹುಪಾಲು ನಾಯಕಿ ರಮ್ಯಾಳಿಗೆ ಸಲ್ಲುತ್ತದೆ. ಆದರೆ ನಾಯಕ
ಮಾತ್ರ ಈಗ ತನ್ನ ಸಂಭಾವನೆಯನ್ನು ಏರಿಸಿಬಿಟ್ಟಿದ್ದಾನೆ! ಆದೇನೆ
ನೂರು ದಿನ ಓಡಿದ ಸಂಭ್ರಮದ ಜಾಹಿರಾತುಗಳಲ್ಲಿ ರಮ್ಯ
ಪ್ರೇಮ್ ಚಿತ್ರಗಳ ಜೊತೆಗೆ ಅತಿಥಿ ನಟನಾಗಿ ಕಾಣಿಸಿದ ದ
ಮುಖವೂ ರಾರಾಜಿಸುತ್ತಿದೆ.

ವಿಚಿತ್ರವೆಂದರೆ, ಮೊದಲ ಬಾರಿಗೆ ನವಿರಾಗಿ ನಿರ್ದೇಶನ
ಚಿತ್ರ ಗೆಲ್ಲುವಲ್ಲಿ ಮುಖ್ಯ ಪಾತ್ರ ನಿರ್ವಹಿಸಿದ ದಿನಕರ್ ಬಗ್ಗೆ
ಯಾರೂ ಮಾತನಾಡುತ್ತಿಲ್ಲ. ಆದರೆ ಇದರ ಬಗ್ಗೆ ತಲೆ ಕೆಡಿಸಿ
ದಿನಕರ್ ತನ್ನ ಮುಂದಿನ ಚಿತ್ರದ ತಯ್ಯಾರಿಯಲ್ಲಿದ್ದಾರೆ. ಅ
ಮುಂದಿನ ಚಿತ್ರದಲ್ಲಿ ದರ್ಶನ್ ನಾಯಕ. ಅಣ್ಣ ಹೀರೋ, ತಮ್ಮ ನಿ
ಇದನ್ನು ಸಹೋದರರ ಸವಾಲ್ ಎನ್ನಬಹುದೇ?



ದೀಪಿಕಾ: ಸ್ಟಿಲ್ ಓಕೆ, ಮೂವಿಂಗ್?

ದೀಪಿಕಾ ಪಡುಕೋಣೆಗೆ ಬಾಲಿವುಡ್ಡಿನಲ್ಲಿ ಐಶ್ವರ್ಯ ದೊರೆಯುವುದಾ?

ರ್‍ಯಾಂಪ್ ಮಾಡೆಲಿಂಗ್‌ನಲ್ಲಿ ಸದ್ಯ ಹಾಟ್‌ಕೇಕ್ ಆಗಿರುವ ದೀಪಿಕಾಳಿಗೆ ಕಳೆದ ವರ್ಷವೇ ಸಿನಿಮಾ ಜ್ವರ ಶುರುವಾಗಿತ್ತು, ಹಿಂದಿಯ ಆಫರ್ ಬಿಟ್ಟು ತಾಯಿನೆಲದ ಕನ್ನಡ ಚಿತ್ರದಲ್ಲಿ ನಟಿಸಿದ್ದಳು.

ಬಹುರಾಷ್ಟ್ರೀಯ ಕಂಪೆನಿಗಳ ಮಾಡೆಲ್ ಆಗಿ ಜನಪ್ರಿಯಳಾಗಿರುವ ದೀಪು ಈಗ ಖುಷಿಯಲ್ಲಿದ್ದೆ. ಖುಷಿಯಲ್ಲಿರದೆ ಇನ್ನೇನು? ಶಾರೂಖ್‌ಖಾನ್‌ನ ಪ್ರೊಡಕ್ಷನ್ ಹೌಸ್ ರೆಡ್ ಚಿಲ್ಲೀಸ್ ಎಂಟರ್‌ಟೇನ್‌ಮೆಂಟ್ ನಿರ್ಮಿಸುತ್ತಿರುವ ಹೊಸ ಚಿತ್ರಕ್ಕಾಗಿ ದೀಪುವನ್ನು ಒಪ್ಪಿಕೊಂಡಿದೆ.

ಸದ್ಯ ಸ್ಟಿಲ್ ಚಿತ್ರಗಳ ಪರೀಕ್ಷೆಯಲ್ಲಿ ದೀಪು ಡಾರ್ಲಿಂಗ್ ಪಾಸ್... ಆದರೆ ಮೂವಿಂಗ್ ಇಮೇಜ್‌ಗಳೇ ಬೇರೆ ಎಂಬುದು ದೀಪುಗೆ ಗೊತ್ತಿರಬೇಕಲ್ಲ- ಅನುಭವದಿಂದ....


ಕ್ರೇಜಿ ರವಿಯ ಸಿಂಪಲ್ ತರ್ಕ

ಗಾಂಧಿನಗರದಲ್ಲಿ ನಿರ್ಮಾಪಕರು ಮತ್ತು ಕಾರ್ಮಿಕರ ನಡುವೆ ಜಗಳ ಆರಂಭವಾದಾಗ ಹಲವರು ಜೆ.ಪಿ ನಗರದಲ್ಲಿರುವ ಅಂಬರೀಷ್ ಮನೆಗೆ ಓಡಾಡಿದ್ದರು. ಕೆಲವರು ಜಯನಗರದಲ್ಲಿರುವ ವಿಷ್ಣುವರ್ಧನ್‌ರವರ ಮನೆಯಲ್ಲಿ ಪರಿಹಾರ ಕಂಡುಕೊಳ್ಳಲು ಯತ್ನಿಸಿದ್ದರು. ಇನ್ನು ಕೆಲವರು ಸದಾಶಿವನಗರದಲ್ಲಿರುವ ಹೆಡ್ ಆಫೀಸ್ ಕಡೆ ಮುಖ ಮಾಡಿ ಕಾದಿದ್ದರು. ಇದೆಲ್ಲದರ ಮಧ್ಯೆ ಅರೆ ನಿರ್ಮಾಪಕ ಕಂ ರಾಜಕಾರಣಿಗಳಾದವರು ವಿಧಾನಸೌಧದ ಮೆಟ್ಟಿಲೇರಿದ್ದರು..... ಆದರೆ ಕೊನೆಗೆ ಈ ಬಿಕ್ಕಟ್ಟಿಗೆ ಪರಿಹಾರ ಸಿಕ್ಕಿದ್ದು ರಾಜಾಜಿನಗರದಲ್ಲಿರುವ ರವಿಚಂದ್ರನ್‌ರವರ ಮನೆಯಲ್ಲಿ!

ಕುಮಾರಸ್ವಾಮಿ, ಅಂಬಿ, ವಿಷ್ಣು, ಹೆಡ್ ಆಫೀಸ್.... ಯಾರಿಂದಲೂ ಪರಿಹರಿಸಲಾಗದ್ದನ್ನು ರವಿಚಂದ್ರನ್ ಯಶಸ್ವಿಯಾಗಿ ಬಗೆಹರಿಸಿದ್ದಾರೆ. ಇದರಲ್ಲಿ ಅವರಿಗೆ ನೆರವಾಗಿದ್ದು ಶಿವರಾಜ್‌ಕುಮಾರ್.

ಈಗ 'ರವಿಚಂದ್ರನ್ ಫಾರ್ಮುಲಾ' ಎಂದೇ ಕರೆಯಲ್ಪಡುತ್ತಿರುವ ಸೂತ್ರ ಸಿಂಪಲ್ಲಾಗಿದೆ. ಅದರ ಪ್ರಕಾರ 1) ಯಾವುದೇ ಗಲಾಟೆಯಾದರೂ ಯಾರೂ ಬಂದ್ ಕರೆ ನೀಡುವಂತಿಲ್ಲ, 2) ಯಾವುದೇ ಸಂಘಟನೆಯಲ್ಲಿ ವಿವಾದ ಕಾಣಿಸಿಕೊಂಡರೆ ಅದನ್ನು ಆ ಸಂಘಟನೆಯ ಅಧ್ಯಕ್ಷರ ಗಮನಕ್ಕೆ ತರಬೇಕೇ ವಿನಃ ಪತ್ರಿಕೆಗಳಿಗೆ ಹೋಗುವಂತಿಲ್ಲ, 3) ಗಂಭೀರ ಸಮಸ್ಯೆಯನ್ನು ಪರಿಹರಿಸಲು ಎಲ್ಲಾ ಸಂಘಗಳ ಇಬ್ಬರು ಪ್ರತಿನಿಧಿಗಳಿರುವ ಒಂದು ಶೃಂಗ ಸಮಿತಿ ಕೆಲಸ ಮಾಡಬೇಕು. ಆ ಶೃಂಗ ಸಮಿತಿಯ ತೀರ್ಮಾನಗಳು ಅಂತಿಮ.


ಈ ಫಾರ್ಮುಲಾ ಎಷ್ಟು ಯಶಸ್ವಿ ಆಗುತ್ತದೆಂದು ಮುಂದಿನ ವಿವಾದ ನಿರ್ಧರಿಸಲಿದೆ. ಅಲ್ಲಿಯವರೆಗೂ ಕ್ರೇಜಿ ರವಿಯ ಸಿಂಪಲ್ ತರ್ಕಕ್ಕೆ ಕಂಗ್ರಾಟ್ಸ್!



ಪ್ರೇಮ್ ಪಲ್ಲಕ್ಕಿ!

ಪ್ರೇಮ್ ಎಂಬ ಹೊಸ ನಟನ 'ನೆನಪಿರಲಿ' ಮತ್ತು 'ಜೊತೆಜೊತೆಯಲಿ' ಚಿತ್ರಗಳು ಶತದಿನೋತ್ಸವ ಆಚರಿಸಿರುವ ಬೆನ್ನಲ್ಲೇ ಮುಂದಿನ ತಿಂಗಳು ಆತನ 'ಪಲ್ಲಕ್ಕಿ' ಚಿತ್ರ ಬಿಡುಗಡೆಯಾಗಲಿದೆ. ಈತನ ಎರಡು ಸಿನಿಮಾಗಳು ಸೆಂಚುರಿ ಬಾರಿಸಿದ್ದರಿಂದ 'ಪಲ್ಲಕ್ಕಿ'ಯನ್ನು ಹಂಚಿಕೆದಾರರು ಒಳ್ಳೆಯ ರೇಟ್ಸ್ ಕೊಟ್ಟು ಖರೀದಿಸಿದ್ದಾರೆ. ಈಗ ಪ್ರೇಮ್ ಹ್ಯಾಟ್ರಿಕ್ ಬಾರಿಸಬಹುದೇ ಎಂದು ಗಾಂಧಿನಗರಿಗಳು ಕುತೂಹಲಗೊಂಡಿದ್ದಾರೆ.

ಇಲ್ಲಿ ಒಂದು ಅಂಶ ನೆನಪಿಸಬೇಕು. ಈ ಪ್ರೇಮ್ ನಟಿಸಿದ ಮೊದಲ ಚಿತ್ರ 'ಪ್ರಾಣ' ಬಾಕ್ಸಾಫೀಸಿನಲ್ಲಿ ರಿಲೀಸ್ ಆದ ಮೊದಲ ದಿನವೇ ಪ್ರಾಣಬಿಟ್ಟಿತ್ತು. ಆದನ್ನು ಮರೆತಿರುವ ಗಾಂಧಿನಗರಿಗಳು ಎರಡು ಸೆಂಚುರಿಯ ಬಳಿಕ ಈತನನ್ನು 'ಪಲ್ಲಕ್ಕಿ'ಯಲ್ಲಿ ಕೂರಿಸಿ ಮೆರವಣಿಗೆ ಹೊರಟಿದ್ದಾರೆ. ಗೆದ್ದೆತ್ತಿನ ಬಾಲ ಹಿಡಿಯುವುದು ನಮ್ಮ ಗಾಂಧಿನಗರದವರ ಹಳೇ ಚಾಳಿ ಅಲ್ಲವೇ?!



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 266764
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajaji